2020

JANUARY "TO" DECEMBER

ಸಂಯುಕ್ತ ಕರ್ನಾಟಕ ಸೋಮವಾರ 28 ಡಿಸೆಂಬರ್ 2020

ಕನ್ನಡಕ್ಕಿರಲಿ ರಾಜಭಾಷೆಯ ಸ್ಥಾನ

ಸಂ.ಕ ಸಮಾಚಾರ ಬೆಂಗಳೂರು

ಭಾಷೆಯ ಅಭಿವೃದ್ಧಿಗೆ ಕನ್ನಡ ಸೇರಿದಂತೆ 24 ಪ್ರಾದೇಶಿಕ ಭಾಷೆಗಳಿಗೆ ಸಾಂವಿಧಾನಿಕ ರಾಜಭಾಷೆಯ ಸ್ಥಾನ ನೀಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಆಗ್ರಹಿಸಿದರು.

ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ 11ನೇ ವರ್ಷದ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶದಲ್ಲಿ ಅವರು ಬಿಂದು ಹನಿಗವನ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.. ಸಂವಿಧಾನದ ಪರಿಚ್ಛೇದದಲ್ಲಿ ಹಿಂದಿ ಮತ್ತು ಇಂಗ್ಲೀಷ್‌ಗೆ ರಾಜಭಾಷೆಯ ಸ್ಥಾನ ನೀಡಿದೆ. ಇದರಿಂದ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಸರ್ಕಾರ ಸಂವಿಧಾನದಲ್ಲಿನ ಈ ಮೂಲಭೂತ ವ್ಯವಸ್ಥೆಯನ್ನು ಬದಲಾವಣೆ ಮಾಡುವ ಮೂಲಕ ಕನ್ನಡ ನಾಡಿನಲ್ಲಿ ನಮ್ಮನ್ನು ನಾವು ಪ್ರತಿಷ್ಠಾಪಿಸಿಕೊಳ್ಳಬೇಕಿದೆ ಎಂದವರು ಅಭಿಪ್ರಾಯಪಟ್ಟರು.

ಮಾನವೀಯ ಮೌಲ್ಯಗಳ ಮೂಲಕ ರೂಪುಗೊಂಡಿರುವ ಕನ್ನಡ ನಾಡಿನಲ್ಲಿ ಇಂದು ಕನ್ನಡ ಭಾಷೆ ಬಳಸಲು ಹಿಂಜರಿಯುತ್ತಿದ್ದಾರೆ. ಇಂತಹ ಕೀಳರಿಮೆ ಉಂಟಾಗುವ ಕಾರಣಗಳ ಬಗ್ಗೆ ಸಮಾವೇಶದಲ್ಲಿ ಆತ್ಮವಿಮರ್ಶೆ ನಡೆಯಬೇಕು ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಇಂದಿನ ಯುವ ಜನತೆ ಪುಸ್ತಕ ಸಂಸ್ಕೃತಿಯನ್ನು ರೂಢಿಸಿಕೊಳ್ಳಬೇಕು. ಕನ್ನಡ ಸಾಹಿತ್ಯದ ಬೆಳವಣಿಗೆಗೆ ಪುಸ್ತಕಗಳನ್ನು ಕೊಂಡು ಓದಬೇಕು ಎಂದು ಸಲಹೆ ನೀಡಿದರು.



ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶದಲ್ಲಿ ಕ.ಅ.ಪ್ರಾ. ಅಧ್ಯಕ್ಷ ಟಿ.ಎಸ್.ನಾಗಾಭರಣ ಬಿಂದು ಹನಿಗವನ ಕೃತಿ ಲೋಕಾರ್ಪಣೆಗೊಳಿಸಿದರು. ಡಾ.ವೂಡೇ ಪಿ. ಕೃಷ್ಣಪ್ಪ, ಬಿ.ಶೃಂಗೇಶ್ವರ, ಎಂ.ತಿಮ್ಮಯ್ಯ, ಇಂದಿರಾ ಕೃಷ್ಣಪ್ಪ, ಸಿಸಿರಾ, ಅನಿಕೇತನ ಮಾಯಣ್ಣ ಮತ್ತಿತರರಿದ್ದರು.

> ಭವಿಷ್ಯದ ಕನ್ನಡ, ಕರ್ನಾಟಕ, ಕನ್ನಡಿಗನನ್ನು ಸಮೀಕರಿಸುವ ಕೆಲಸ ಸಮಾವೇಶದಲ್ಲಾಗಬೇಕು. ಭಾಷೆಯ ಉಳಿವಿನ ಜೊತೆಗೆ ನಮ್ಮತನ ಉಳಿವಿನ ಬಗ್ಗೆ ಚಿಂತಿಸಬೇಕು.
>
> **ಟಿ.ಎಸ್.ನಾಗಾಭರಣ**
> ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಸಮಾವೇಶದಲ್ಲಿ ಸಾಹಿತಿ ಬಿ.ಶೃಂಗೇಶ್ವರ ಅವರನ್ನು ಸಮ್ಮೇಳನಾಧ್ಯಕ್ಷರಾಗನ್ನಾಗಿಸಿ ಸನ್ಮಾನಿಸಲಾಯಿತು. ಬಳಿಕ ಸಮಕಾಲೀನ ಸಾಂಸ್ಕೃತಿಕ ಸಂದರ್ಭಗಳ ಕುರಿತ ವಿಚಾರಗೋಷ್ಠಿ, ಕವಿಗೋಷ್ಠಿ ಮತ್ತು ದತ್ತಿ ಬಹುಮಾನ ವಿತರಣೆ ಸಮಾರಂಭ ಜರುಗಿತು. ಈ ವೇಳೆ ಬೆಂ.ನ.ಜಿಲ್ಲಾ ಕ.ಸಾ.ಪ ಅಧ್ಯಕ್ಷ ಅನಿಕೇತನ ಮಾಯಣ್ಣ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ರಾಮನಗರ ಜಿ.ಪಂ. ಮಾಜಿ ಅಧ್ಯಕ್ಷೆ ಬಿ.ವಿ.ಹಂಸಕುಮಾರಿ ಮೇ.ಚ. ಕೋಟಪ್ಪ, ಸಾಹಿತಿ ಭಾಗ್ಯಲಕ್ಷ್ಮಿ ಮಗ್ಗೆ, ಟ್ರಸ್ಟ್‌ನ ಅಧ್ಯಕ್ಷ ಡಾ.ಸಿಸಿರಾ, ಇಂದಿರಾ ಕೃಷ್ಣಪ್ಪ ಮತ್ತಿತರರಿದ್ದರು.

ಕನ್ನಡ ಸಾಹಿತ್ಯ ಸಂಸ್ಕೃತಿ ಸಮಾವೇಶ ಕಾರ್ಯಕ್ರಮದಲ್ಲಿ ಟಿ.ಎಸ್.ನಾಗಾಭರಣ ಹೇಳಿಕೆ

ನಮ್ಮ ನಾಡಿನಲ್ಲೇ ನಾವು ಪರಕೀಯರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡ ಭಾಷೆ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಭಾಷೆ ಸೇರಿದಂತೆ 24 ಪ್ರಾದೇಶಿಕ ಭಾಷೆಗಳಿಗೆ ಸಾಂವಿಧಾನಿಕ ರಾಜಭಾಷೆಯ ಸ್ಥಾನ ನೀಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ತಿಳಿಸಿದರು.

ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ 11ನೇ ವರ್ಷದ ಕನ್ನಡ ಸಾಹಿತ್ಯ ಸಂಸ್ಕೃತಿ ಸಮಾವೇಶ ಕಾರ್ಯಕ್ರಮದಲ್ಲಿ 'ಬಿಂದು ಹನಿಗವನ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಂವಿಧಾನದ ಪರಿಚ್ಛೇದದಲ್ಲಿ ಹಿಂದಿ ಮತ್ತು ಇಂಗ್ಲಿಷ್‌ಗೆ ರಾಜಭಾಷೆಯ ಸ್ಥಾನ ನೀಡಿದೆ. ಇದರಿಂದ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಸರಕಾರ ಸಂವಿಧಾನದಲ್ಲಿನ ಈ ಮೂಲಭೂತ ವ್ಯವಸ್ಥೆಯನ್ನು ಬದಲಾವಣೆ ಮಾಡುವ ಮೂಲಕ ಕನ್ನಡ ನಾಡಿನಲ್ಲಿ ನಮ್ಮನ್ನು ನಾವು ಪ್ರತಿಷ್ಠಾಪಿಸಿಕೊಳ್ಳಬೇಕಿದೆ. ಮಹತ್ತರಗಳನ್ನು ಸಾಧನೆಗಳಾದ ನಮ್ಮ ಕನ್ನಡ ನಾಡಿನಲ್ಲಿ ನಾವು ಪರಕೀಯರಾಗುತ್ತಿದ್ದೇವೆ. ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಸಮಾವೇಶದ ಮೂಲಕ ನಮ್ಮನ್ನು ನಾವು ಅರಿಯಬೇಕಿದೆ. ಒಂದಕ್ಕೊಂದು ಬೆಸೆದಿರುವ ಈ ಸಂಸ್ಕೃತಿಯ ಕೊಂಡಿ ಕಳಚದಂತೆ ಎಚ್ಚರವಹಿಸಬೇಕಿದೆ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಇಂದಿನ ಯುವ ಜನತೆ ಪುಸ್ತಕ ಸಂಸ್ಕೃತಿಯನ್ನು ರೂಢಿಸಿಕೊಳ್ಳಬೇಕು. ಕನ್ನಡ ಸಾಹಿತ್ಯದ ಬೆಳವಣಿಗೆಗೆ ಪುಸ್ತಕಗಳನ್ನು ಕೊಂಡು ಓದುವುದನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಾಹಿತಿ ಬಿ.ಶೃಂಗೇಶ್ವರ ಅವರನ್ನು ಸಮ್ಮೇಳನಾಧ್ಯಕ್ಷರಾಗನ್ನಾಗಿ ಸನ್ಮಾನಿಸಲಾಯಿತು. ಬಳಿಕ ಸಮಕಾಲೀನ ಸಾಂಸ್ಕೃತಿಕ ಸಂದರ್ಭಗಳ ಕುರಿತ ವಿಚಾರಗೋಷ್ಠಿ, ಕವಿಗೋಷ್ಠಿ ಮತ್ತು ದತ್ತಿ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಿತು.



11ನೇ ವರ್ಷದ ಕನ್ನಡ ಸಾಹಿತ್ಯ ಸಂಸ್ಕೃತಿ ಸಮಾವೇಶ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ 'ಬಿಂದು ಹನಿಗವನ' ಕೃತಿಯನ್ನು ಲೋಕಾರ್ಪಣೆಗೊಳಿಸಿದರು. ಈ ವೇಳೆ ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಅನಿಕೇತನ ಮಾಯಣ್ಣ, ಎಫ್‌ಕೆಸಿಸಿಐ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ರಾಮನಗರ ಜಿ.ಪಂ. ಮಾಜಿ ಅಧ್ಯಕ್ಷೆ ಬಿ.ವಿ.ಹಂಸಕುಮಾರಿ, ಸಾಹಿತಿ ಭಾಗ್ಯಲಕ್ಷ್ಮಿ ಮಗ್ಗೆ, ಟ್ರಸ್ಟ್‌ನ ಅಧ್ಯಕ್ಷ ಡಾ.ಸಿಸಿರಾ ಇದ್ದರು.

ನಮ್ಮತನ ಉಳಿವಿನ ಬಗ್ಗೆ ಚಿಂತಿಸುವ ಕೆಲಸ

ಪಂಪ, ಬುದ್ಧ, ಕುವೆಂಪುರಂತಹವರ ಮಾನವೀಯ ಮೌಲ್ಯಗಳ ಮೂಲಕ ರೂಪುಗೊಂಡಿರುವ ಕನ್ನಡ ನಾಡಿನಲ್ಲಿ ಜನ ಕನ್ನಡ ಬಳಸಲು ಹಿಂಜರಿಯುತ್ತಿದ್ದಾರೆ. ನಮ್ಮ ನಾಡಿನಲ್ಲಿ ನಮ್ಮನ್ನು ನಾವೇ ಗುರುತಿಸಿಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಇಂತಹ ಕೀಳರಿಮೆ ಉಂಟಾಗುವ ಕಾರಣಗಳ ಬಗ್ಗೆ ಸಮಾವೇಶದಲ್ಲಿ ಆತ್ಮವಿಮರ್ಶೆ ನಡೆಯಬೇಕು. ಭವಿಷ್ಯದ ಕನ್ನಡ, ಕರ್ನಾಟಕ, ಕನ್ನಡಿಗನನ್ನು ಸಮೀಕರಿಸುವ ಕೆಲಸ ಸಮಾವೇಶದಲ್ಲಾಗಬೇಕು. ನಮ್ಮ ಭಾಷೆಯ ಉಳಿವಿನ ಜತೆಗೆ ನಮ್ಮತನ ಉಳಿವಿನ ಬಗ್ಗೆ ಚಿಂತಿಸುವ ಕೆಲಸವಾಗಬೇಕೆಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಅನಿಕೇತನ ಮಾಯಣ್ಣ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ರಾಮನಗರ ಜಿ.ಪಂ. ಮಾಜಿ ಅಧ್ಯಕ್ಷೆ ಬಿ.ವಿ.ಹಂಸಕುಮಾರಿ, ಸಾಹಿತಿ ಭಾಗ್ಯಲಕ್ಷ್ಮಿ ಮಗ್ಗೆ, ಟ್ರಸ್ಟ್‌ನ ಅಧ್ಯಕ್ಷ ಡಾ.ಸಿಸಿರಾ, ಇಂದಿರಾ ಕೃಷ್ಣಪ್ಪ ಸೇರಿದಂತೆ ಮತ್ತಿತರರಿದ್ದರು.

ಬ್ಯಾಂಕ್‌ಗಳಲ್ಲಿ ಕನ್ನಡ ಬಳಕೆ ಅಭಿಯಾನಕ್ಕೆ ಚಾಲನೆ

ಬೆಂಗಳೂರು : 2020-21ನೇ ಸಾಲಿನಲ್ಲಿ ಸರಕಾರ ಕನ್ನಡ ಕಾಯಕ ವರ್ಷವೆಂದು ಘೋಷಿಸಿದೆ. ಈ ಹಿನ್ನೆಲೆ ಹಲವು ಕ್ಷೇತ್ರ ಗಳಲ್ಲಿ ಕನ್ನಡದ ಪರಿ ಣಾಮ ಕಾರಿಯಾಗಿ ಅನುಷ್ಠಾನದಲ್ಲಿ ಕಾರ್ಯಪ್ರವೃತ್ತವಾ ಗಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬ್ಯಾಂಕ್‌ಗಳಲ್ಲಿ ಕನ್ನಡ ಬಳಕೆ ಮಾಡುವುದಕ್ಕೆ ಜಾಗೃತಿ ಅಭಿಯಾನವನ್ನು ಕೈಗೊಳ್ಳಲಾಗಿದೆ. ಕುವೆಂಪು ಅವರ ಜನ್ಮದಿನವಾದ ಡಿ.29ರ ಬೆಳಗ್ಗೆ 10 ಗಂಟೆಗೆ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳು ಸೇರಿದಂತೆ ವಿವಿಧ ಬ್ಯಾಂಕುಗಳಲ್ಲಿ ಕನ್ನಡ ಬಳಕೆ ಕುರಿತು ಜಾಗೃತಿ ಮೂಡಿಸಲಾಗುತ್ತದೆ. ಕರ ಪತ್ರಗಳ ಹಂಚಿ, ಘೋಷಣಾ ವಾಕ್ಯಗಳನ್ನು ಹಿಡಿದುಕೊಂಡು ಎಲ್ಲಾ ಜಿಲ್ಲೆಗಳ ಬ್ಯಾಂಕ್‌ಗಳ ಮುಂದೆ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಎಲ್ಲಾ ಅಧಿಕಾರೇತರ ಸದಸ್ಯರು, ಕನ್ನಡ ಜಾಗೃತಿ ಸಮಿತಿ ಜಿಲ್ಲಾ ಸದಸ್ಯರು, ಬಿಬಿಎಂಪಿ ಸದಸ್ಯರು ಈ ಅಭಿಯಾನದಲ್ಲಿ ಭಾಗವಹಿಸಲಿದ್ದಾರೆ.



ಕನ್ನಡಿಗರು ಈ ಅಭಿಯಾನದಲ್ಲಿ ಭಾಗವಹಿಸಬೇಕು: ಡಿ.29ರ ಬೆಳಗ್ಗೆ ಬ್ಯಾಂಕಿನ ಕಾರ್ಯಗಳು ಆರಂಭವಾದ ಕೂಡಲೇ ಮೊದಲು ಶಾಖಾ ವ್ಯವಸ್ಥಾಪಕ ರಿಗೆ ಕರಪತ್ರ ನೀಡುವ ಮೂಲಕ ಅಭಿಯಾನ ಆರಂಭವಾಗುತ್ತದೆ. ನಂತರ ಬ್ಯಾಂಕಿನ ಮುಂದೆ ಘೋಷವ್ಯಾಕ್ಯಗಳನ್ನು ಪ್ರದರ್ಶಿಸುವ ಮೂಲಕ ಜನರಲ್ಲಿ ಕನ್ನಡ ಭಾಷೆ ಬಳಕೆ ಕುರಿತು ಅರಿವು ಮೂಡಿಸಲಾಗುತ್ತದೆ. ಬ್ಯಾಂಕಿ ವ್ಯವಹಾರ ಮಾಡುವ ಕನ್ನಡಿಗರು ರಾಜ್ಯದ ಯಾವುದೇ ಮೂಲೆಯಲ್ಲಿದ್ದರೂ ಈ ಅಭಿಯಾನಕ್ಕೆ ಭಾಗವಹಿಸಬೇಕೆಂದು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ತಿಳಿಸಿದ್ದಾರೆ.

ಉದಯವಾಣಿ
ಸೋಮವಾರ, ಡಿಸೆಂಬರ್ 28, 2020

24 ಪ್ರಾದೇಶಿಕ ಭಾಷೆಗೆ ಸ್ಥಾನಮಾನ ಅವಶ್ಯ



11ನೇ ವರ್ಷದ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಮಾವೇಶದಲ್ಲಿ ಬಿಂದು ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಬೆಂಗಳೂರು: ಹಿಂದಿ ಭಾಷೆಯಂತೆ ಕನ್ನಡ ಸೇರಿದಂತೆ 24 ಪ್ರಾದೇಶಿಕ ಭಾಷೆಗಳಿಗೆ ಸಾಂವಿಧಾನಿಕ ರಾಜಭಾಷೆಯ ಸ್ಥಾನ ದೊರೆಯಬೇಕಾದ ಅಗತ್ಯವಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅಭಿಪ್ರಾಯಪಟ್ಟರು.

ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಭಾನುವಾರ ಆಯೋಜಿಸಲಾಗಿದ್ದ 11ನೇ ವರ್ಷದ ಕನ್ನಡ ಸಾಹಿತ್ಯ ಸಂಸ್ಕೃತಿಕ ಸಮಾವೇಶದಲ್ಲಿ ಮಾತನಾಡಿದರು.

ಈಗಾಗಲೇ ಸಂವಿಧಾನದ ಪರಿಚ್ಛೇದದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ರಾಜಭಾಷೆಯ ಸ್ಥಾನ ನೀಡಲಾಗಿದೆ. ಇದರಿಂದಾಗಿ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರ ಸಂವಿಧಾನದಲ್ಲಿನ ಈ ಮೂಲಭೂತ ವ್ಯವಸ್ಥೆಯನ್ನು ಬದಲಾವಣೆ ಮಾಡುವ ಮೂಲಕ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡಿನಲ್ಲಿ ಕನ್ನಡಿಗರೆ ಪರಕೀಯರಾಗುತ್ತಿದ್ದಾರೆ. ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಈ ಬಗ್ಗೆ ಕನ್ನಡಿಗರು ಮತ್ತಷ್ಟು ಎಚ್ಚರಿಕೆ ವಹಿಸಬೇಕು. ಕನ್ನಡ ಸಾಹಿತ್ಯ, ಸಂಸ್ಕೃತಿಮತ್ತುಸಮಾವೇಶಗಳನ್ನು ಹಮ್ಮಿಕೊಳ್ಳುವ ಮೂಲಕ ನಮ್ಮನ್ನ ನಾವು ಅರಿಯಬೇಕು ಎಂದು ತಿಳಿಸಿದರು.

ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಬಳಕೆ ಬಗ್ಗೆ ಹಿಂಜರಿಯುತ್ತಿದ್ದಾರೆ. ದೇಶದ ನಾನಾ ಕಡೆಗಳಿಂದ ಕನ್ನಡ ನಾಡಿಗೆ ಬಂದಿರುವವರು ಇನ್ನೂ ಕನ್ನಡಗಿರಾಗಿಲ್ಲ, ರಾಜಧಾನಿಯಲ್ಲಿ ನಮ್ಮನ್ನು ನಾವೇ ಗುರುತಿಸಿಕೊಳ್ಳುವ ಪರಿಸ್ಥಿತಿ ಬಂದಿದೆ. ಆ ಬಗ್ಗೆ ಸಮಾವೇಶಗಳಲ್ಲಿ ಚರ್ಚೆಗಳು ನಡೆಯಬೇಕಾಗಿದೆ ಎಂದರು. ಭವಿಷ್ಯದ ಕನ್ನಡ, ಕರ್ನಾಟಕ, ಕನ್ನಡಿಗಳನ್ನು ಸಮೀಕರಿಸಲು ಕೆಲಸ ಸಮಾವೇಶಗಳ ಮೂಲಕ ಆಗಬೇಕು. ನಮ್ಮ ಭಾಷೆಯ ಉಳಿವಿನ ಜೊತೆಗೆ ನಮ್ಮತನ ಉಳಿವಿನ ಬಗ್ಗೆ ಚಿಂತಿಸುವ ಕೆಲಸ ಸಮಾವೇಶದಲ್ಲಿ ಮತ್ತಷ್ಟು ನಡೆಯಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿದರು. ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಲೇಖಕ ಬಿ.ಶೃಂಗೇಶ್ವರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಂಜೆವಾಣಿ


2 ಬೆಂಗಳೂರು
ಶನಿವಾರ 26 ಡಿಸೆಂಬರ್ 2020



ನಗರದ ಕುಮಾರ ಪಾರ್ಕ್‌ನ ಗಾಂಧಿ ಭವನದಲ್ಲಿ ನಡೆದ 'ಕನ್ನಡ ನುಡಿಗೆ ಜೈ ಅನ್ನಿ' ಕನ್ನಡ ಗಾನಯಾನ ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ, ಎಸ್.ಜೆ.ಆರ್. ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ. ಪ್ರೇಮಾ ಸಿದ್ದರಾಜು, ಬಂಡ್ಲಹಳ್ಳಿ ವಿಜಯ ಕುಮಾರ್ ಇದ್ದಾರೆ.

ಶನಿವಾರ
26-12-2020

ಸಂಗೀತ ಹೃದಯದ ಭಾಷೆ



ಬೆಂಗಳೂರು, ಡಿ.26- ಸಂಗೀತಕ್ಕೆ ಯಾರನ್ನೇ ಆಗಲಿ ಸಮ್ಮೋಹನಗೊಳಿಸುವ ಶಕ್ತಿಯಿದೆ. ಭಾಷೆ, ಗಡಿಗಳನ್ನು ಮೀರಿರುವ ಸಂಗೀತವು ಹೃದಯದ ಭಾಷೆಯಾಗಿದೆಯೆಂದು ಕರ್ನಾಟಕ ಸಂಗೀತ, ನೃತ್ಯ ಅಕಾಡೆಮಿ ಅಧ್ಯಕ್ಷರಾದ ವಿದ್ವಾನ್ ಅನೂರು ಅನಂತಕೃಷ್ಣ ಶರ್ಮ ಅವರು ಅಭಿಪ್ರಾಯಪಟ್ಟರು.

ರಂಗಸಂಸ್ಥಾನ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ಕನ್ನಡ ನುಡಿಗೆ ಜೈ ಅನ್ನಿ, ಕನ್ನಡ ಗಾನ ಯಾನ ಕಾರ್ಯಕ್ರಮ ವನ್ನು ಉದ್ಘಾಟಿಸಿದ ಅವರು ಮಾನವೀಯ ಮಿಡಿತದ ಸಂಗೀತ ದಿಂದ ದೂರವಾಗುವುದೆಂದರೆ ಅದು, ಜೀವನ ವಿಮುಖವಾದಂತೆ ಎಂದು ಅಭಿಪ್ರಾಯ ಪಟ್ಟರು.

ಸಂಗೀತ ಕಲಿಯಲು ಅಭ್ಯಾಸ, ಶ್ರಮ, ಶ್ರದ್ಧೆ ಅವಶ್ಯಕ. ಶ್ರಮ ಮತ್ತು ಸಾಧನೆಯಿಂದ ಬರುವುದು ದೀರ್ಘಕಾಲೀನವಾಗಿರುತ್ತದೆ. ಆದರೆ ಇತ್ತೀಚೆಗೆ ಕೆಲವರು ರಿಯಾಲ್ಟಿ ಕಾರ್ಯಕ್ರಮಗಳಿಗಾಗಿ ಕಲಿಯುತ್ತಿದ್ದು, ಇದರಿಂದ ಪ್ರಯೋಜನವಿಲ್ಲವೆಂದು ವಿಷಾಧಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಪುರಸ್ಕೃತ ಡಾ. ವೂಡೇ ಪಿ. ಕೃಷ್ಣ ಅವರು ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ ಅವರು ಕೋವಿಡ್ ಸಂದರ್ಭದಲ್ಲಿ ಕಲಾವಿದರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೋವಿಡ್ ಕಾರಣದಿಂದಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದು ದುಸ್ತರವಾಗಿದೆ.

ಸರ್ಕಾರ ಸಂಘ-ಸಂಸ್ಥೆ ಮತ್ತು ಕಲಾವಿದರಿಗೆ ವಾರ್ಷಿಕ ಅನುದಾನವನ್ನು ಪ್ರೋತ್ಸಾಹಿಸುವ ಮೂಲಕ ಕಲೆಯ ಉಳಿವಿಗೆ ನೆರವಾಗಬೇಕೆಂದು ಆಶಿಸಿದರು. ರಂಗಸಂಸ್ಥಾನ ಸಾವಿರ ಗಾಯಕರ ಸಾಮೂಹಿಕ ಗಾಯನ ಕಾರ್ಯಕ್ರಮದಲ್ಲಿ ಮೂರು ಬಾರಿ ಲಿಮ್ಕಾ ದಾಖಲೆ ಮಾಡಿರುವುದಕ್ಕೆ ಅಭಿನಂದನೆಗಳನ್ನು ತಿಳಿಸಿದರು.

ರಂಗಸಂಸ್ಥಾನದ ಅಧ್ಯಕ್ಷ ಡಾ. ಬಂಡ್ಲಹಳ್ಳಿ ವಿಜಯಕುಮಾರ್ ಅವರು ಮಾತನಾಡಿ, ಕಲಾವಿದರು ಮತ್ತು ಸಾಂಸ್ಕೃತಿಕ ಸಂಘಟನೆಗಳ ನಡುವೆ ಸಾಮರಸ್ಯ ಆವಶ್ಯಕವಿದೆ. ರಂಗಸಂಸ್ಥಾನವು ವಿದ್ಯಾರ್ಥಿಗಳು ಮತ್ತು ಯುವಕರಿಗೆ ಸಂಗೀತ ತರಬೇತಿಯನ್ನು ನೀಡಿ ಪ್ರೋತ್ಸಾಹಿಸುತ್ತಿದೆ ಎಂದರು.

ಎಸ್.ಜೆ.ಆರ್.ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರೇಮಾ ಸಿದ್ಧರಾಜು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕನ್ನಡ ಅಧ್ಯಾಪಕ ಡಾ.ರುದ್ರೇಶ್ ಅದರಂಗಿ ಮತ್ತಿತರರಿದ್ದರು.

ವಿಶ್ವವಾಣಿ

26.12.2020 ಭಾನುವಾರ
vishwavani.news

ಶಿಕ್ಷಣ ತಜ್ಞ ಡಾ. ವೂಡೇ ಪಿ.ಕೃಷ್ಣ ಅಭಿಪ್ರಾಯ | ಕರೋನಾ ಯೋಧರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಮೌಲ್ಯಯುತ ಶಿಕ್ಷಣದಿಂದ ದೇಶದ ಪ್ರಗತಿ ಸಾಧ್ಯ



ಶ್ರೀನಿವಾಸ ಚಾರಿಟಬಲ್ ಟ್ರಸ್ಟ್ ಕೇಣಾರ ಹಾಗೂ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕರೋನಾ ಯೋಧರಿಗೆ ಅಭಿನಂದನಾ ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಡಾ. ವೂಡೇ ಪಿ.ಕೃಷ್ಣ ಉದ್ಘಾಟಿಸಿದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತೀಯ ಸಂಸ್ಕೃತಿ, ಪರಂಪರೆ ಹಾಗೂ ವೈಚಾರಿಕತೆಯನ್ನು ಅಭ್ಯಾಸಿಸುವ ಮೌಲ್ಯಯುತ ಶಿಕ್ಷಣದಿಂದ ದೇಶದ ಪ್ರಗತಿ ಸಾಧ್ಯವಾಗುತ್ತದೆ ಎಂದು ಶಿಕ್ಷಣ ತಜ್ಞ ಡಾ. ವೂಡೇ ಪಿ.ಕೃಷ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀನಿವಾಸ ಚಾರಿಟಬಲ್ ಟ್ರಸ್ಟ್ ಕೇಣಾರ ಹಾಗೂ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಕರೋನಾ ಯೋಧರಿಗೆ ಗೌರವಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಶಿಕ್ಷಣ ಕೇವಲ ಪಠ್ಯ ವಿಷಯಗಳಿಗಷ್ಟೇ ಮಾತ್ರ ಸೀಮಿತವಾಗುತ್ತಿರುವುದು ಉತ್ತಮ ಬೆಳವಣಿಗೆಯಲ್ಲ, ಇದರ ಜತೆಗೆ ದೇಶದ ಇತಿಹಾಸ, ಪರಂಪರೆ, ಸಂಸ್ಕೃತಿ, ವೈಚಾರಿಕತೆಯ ಬಗ್ಗೆ ತಿಳಿಸುವಂತಹ ಮೌಲ್ಯಯುತ ಶಿಕ್ಷಣ ನೀಡುವುದು ಶಿಕ್ಷಣ ಸಂಸ್ಥೆಗಳ ಉದ್ದೇಶವಾಗಬೇಕು ಎಂದರು.

ನಿವೃತ್ತ ಸ್ವಾಮಿ ಚಂದ್ರಶೇಖರ್ ಮಾತನಾಡಿ, ಬದುಕಿನಲ್ಲಿ ಮುಂದೆ ಗುರಿ, ಹಿಂದೆ ಗುರು ಇರಬೇಕೆಂಬ ಮಾತಿ ಇದೆ, ಅದರ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಮಟ್ಟಿಗೆ ಹೇಳುವುದಾದರೆ ಬದುಕಿನ ಮೌಲ್ಯಗಳು, ಸಾಮಾಜಿಕ ಸೇವೆ, ದೇಶ ಪ್ರೇಮದಂತಹ ಆದರ್ಶ ಮೌಲ್ಯಗಳನ್ನು ಸಾರುವ ಗುರುಗಳು ಈ ಸಂಸ್ಥೆಯಲ್ಲಿ ಸಕ್ರಿಯರಾಗಿ ಇರುವುದರಿಂದ ಗುರಿ ತಲುಪುವುದು ಸುಲಭ. ಶಿಕ್ಷಣದ ಜತೆ ಶಿಕ್ಷಣಾರ್ಥಿಗಳಿಗೆ ಬದುಕಿನ ಮೌಲ್ಯಗಳನ್ನು ಸಹ ಕಲಿಸಿಕೊಡುವ ಸಂಸ್ಥೆಯ ಕಾರ್ಯ ಪ್ರಶಂಸೆಗೆ ಪಾತ್ರವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರೋನಾ ಯೋಧರಿಗೆ ಕರೋನಾ ಯೋಧ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಟ್ರಸ್ಟಿ ಡಬ್ಲ್ಯು.ಡಿ.ಅಶೋಕ್, ಬಿ.ಸಿ.ಲೋಕನಾಥ್, ಪ್ರಥಮ ದರ್ಜೆ ಹಾಗೂ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಎನ್.ಎನ್.ವೆಂಕಟೇಶ್, ಶ್ರೀನಿವಾಸ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಸತೀಶ್ ಇದ್ದರು.

ಶನಿವಾರ 19 ಡಿಸೆಂಬರ್ 2020

19 DECEMBER 2020


ವಿಜಯವಾಣಿ ಚಿತ್ರ

ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಟ್ರಸ್ಟ್ ಶುಕ್ರವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ನಿರ್ವಹಿಸಿದ ಸೇವೆಗಾಗಿ ಪತ್ರಕರ್ತ ಡಿ.ಎಸ್. ವೆಂಕಟಾಚಲಪತಿ ಅವರನ್ನು ಗೌರವಿಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ

ಗುರುವಾರ, 12 ನವೆಂಬರ್ 2020,
ಬೆಂಗಳೂರು

ನಾಡಿನ ಶರಣ ಸಂಸ್ಕೃತಿ ಅಜರಾಮರ

ವಿಕ ಸುದ್ದಿಲೋಕ ಹೊಸಪೇಟೆ

ಈ ನಾಡಿನ ಶರಣ ಸಂಸ್ಕೃತಿಯನ್ನು ಮರೆಯುವಂತಿಲ್ಲ. ಇವರು ಕಟ್ಟಿದ 'ಕಾಯಕ- ದಾಸೋಹ' ಸಿದ್ಧಾಂತಗಳು ಆಧುನಿಕ ಅರ್ಥಶಾಸ್ತ್ರಜ್ಞರಿಗೂ ಸವಾಲಾಗಿವೆ ಎಂದು ನ್ಯಾಕ್ ನಿರ್ದೇಶಕ ಪ್ರೊ.ಎಸ್.ಸಿ. ಶರ್ಮಾ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಮಂಗಳವಾರ ನಡೆದ 28ನೇ ನುಡಿಹಬ್ಬದಲ್ಲಿ ಘಟಿಕೋತ್ಸವ ಭಾಷಣ ಮಾಡಿದ ಅವರು, ''ಭಾರತೀಯ ಜ್ಞಾನ ಪರಂಪರೆಯನ್ನು ಶೋಧಿಸಿದರೆ ನಮ್ಮ ಸಂಸ್ಕೃತಿಯ ಬೇರುಗಳನ್ನು ತಲುಪುತ್ತೇವೆ. ಜಗತ್ತು ಸಂಕೀರ್ಣ ವಸ್ತು- ಭಾವಾಲೋಚನೆಗಳ ಸಂಗ್ರಹಾಲಯ. ಯಾವುದು ಯೋಗ್ಯ? ಯಾವುದು ತ್ಯಾಜ್ಯ? ಎಂಬುದನ್ನು ಇಲ್ಲಿನ ಮೇರುಸದೃಶ ಮಹಾಕಾವ್ಯಗಳು ಸಾಕ್ಷೀಕರಿಸಿ ತೋರಿಸಿವೆ,'' ಎಂದರು.



ವೈದ್ಯ ಡಾ.ಹಣಮಂತ ಗೋವಿಂದ ದಡ್ಡಿ, ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಅವರಿಗೆ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಅವರು ನಾಡೋಜ ಗೌರವ ಪದವಿ ಪ್ರದಾನ ಮಾಡಿದರು.

ದೇಶಿ ಮೆರವಣಿಗೆ: ಇದಕ್ಕೂ ಮೊದಲು ವಿವಿಯ ಆವರಣದಲ್ಲಿ ನುಡಿಹಬ್ಬದ ನಿಮಿತ್ತ ದೇಸಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯು ಮಂಟಪ ಸಭಾಂಗಣಕ್ಕೆ ತಲುಪಿದಾಗ ಕಳಶ ಸ್ಥಾಪನೆ ಮಾಡಲಾಯಿತು. ಕನ್ನಡ ವಿವಿ ಕುಲಾಧಿಪತಿ ಹಾಗೂ ರಾಜ್ಯಪಾಲ ವಜುಭಾಯಿ ವಾಲಾ ಅವರು ಘಟಿಕೋತ್ಸವ ಕಾರ್ಯಕ್ರಮಕ್ಕೆ ಗೈರು ಹಾಜರಾಗಿದ್ದರು. ಕೋವಿಡ್ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಸರಳವಾಗಿ ನಡೆಸಲಾಯಿತು. ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ವಿವಿ ಕುಲಪತಿ ಡಾ. ಸ.ಚಿ. ರಮೇಶ, ಕುಲಸಚಿವ ಡಾ.ಸುಬ್ಬಣ್ಣ ರೈ ಹಾಗೂ ವಿವಿಯ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇದ್ದರು.

ನಾಡೋಜ ಪ್ರದಾನ

ಬಾಗಲಕೋಟ ಜಿಲ್ಲೆ ಜಮಖಂಡಿಯ ವೈದ್ಯ ಡಾ.ಹಣಮಂತ ಗೋವಿಂದ ದಡ್ಡಿ ಹಾಗೂ ಬೆಂಗಳೂರಿನ ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಅವರಿಗೆ ಉನ್ನತ ಶಿಕ್ಷಣ ಸಚಿವ ಅಶ್ವತ್ಥ ನಾರಾಯಣ ಅವರು, ನಾಡೋಜ ಗೌರವ ಪ್ರದಾನ ಮಾಡಿದರು. ನಾಡಿನ ಪರಂಪರೆಯನ್ನು ಉಳಿಸಿ ಬೆಳೆಸುವ ಹಾಗೂ ನಾಡು ಕಟ್ಟುವಲ್ಲಿ ಶ್ರಮಿಸಿದವರನ್ನು ಗುರುತಿಸಿ ಹಂಪಿ ವಿಶ್ವವಿದ್ಯಾಲಯವು ಆದಿಕವಿ ಪಂಪನಿಗೆ ಸಲ್ಲುವ 'ನಾಡೋಜ' ಬಿರುದು ನೀಡಿ ಗೌರವಿಸುತ್ತದೆ. ವಿವಿಯ ಸಂಶೋಧನಾ ವಿದ್ಯಾರ್ಥಿಗಳಿಗೆ ಡಿ.ಲಿಟ್ ಹಾಗೂ ಪಿಎಚ್‌ಡಿ ಪದವಿ ಪ್ರದಾನವನ್ನೂ ನೆರವೇರಿಸಲಾಯಿತು.

12.11.2020 ಗುರುವಾರ
vishwavani.news



ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ನಡೆದ ವಿವಿಯ ನುಡಿಹಬ್ಬ-28 ಘಟಿಕೋತ್ಸವದಲ್ಲಿ ಕನ್ನಡ ನಾಡು, ನುಡಿಗೆ ಅನುಪಮ ಕೊಡುಗೆ ನೀಡಿರುವ ಡಾ. ಹಣಮಂತ ಗೋವಿಂದಪ್ಪ ದಡ್ಡಿ ಮತ್ತು ಡಾ. ವೂಡೇ ಪಿ. ಕೃಷ್ಣ ಅವರಿಗೆ ನಾಡೋಜ ಗೌರವ ಪದವಿಯನ್ನು ಉಪಮುಖ್ಯಮಂತ್ರಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರು ಪ್ರದಾನ ಮಾಡಿದರು.

ಪ್ರಜಾವಾಣಿ

ಬುಧವಾರ • ನವೆಂಬರ್ 11, 2020




ಹಂಪಿ ಕನ್ನಡ ವಿ..ವಿಯ ನುಡಿಹಬ್ಬದಲ್ಲಿ ಡಾ. ಹಣಮಂತ ಗೋವಿಂದಪ್ಪ ದಡ್ಡಿ ಹಾಗೂ ವೂಡೇ ಪಿ. ಕೃಷ್ಣ ಅವರಿಗೆ ಡಿಸಿಎಂ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರು ನಾಡೋಜ ಪದವಿ ಪ್ರದಾನ ಮಾಡಿದರು. ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ತಿನ ನಿರ್ದೇಶಕ ಪ್ರೊ.ಎಸ್.ಸಿ. ಶರ್ಮಾ, ಕುಲಪತಿ ಪ್ರೊ.ಸ.ಚಿ. ರಮೇಶ ಹಾಗೂ ಕುಲಸಚಿವ ಪ್ರೊ. ಎ.ಸುಬ್ಬಣ್ಣ ರೈ ಇದ್ದಾರೆ

ಕನ್ನಡಪ್ರಭ ಬುಧವಾರ 11.11.2020
ಬೆಂಗಳೂರು

ಹಂಪಿ ಕನ್ನಡ ವಿವಿ ಘಟಿಕೋತ್ಸವ



ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ 28ನೇ ಘಟಿಕೋತ್ಸವದಲ್ಲಿ ವೈದ್ಯ ಡಾ. ಹಣಮಂತ ಗೋವಿಂದ ದಡ್ಡಿ ಹಾಗೂ ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಅವರಿಗೆ ಉನ್ನತ ಶಿಕ್ಷಣ ಸಚಿವ ಅಶ್ವತ್ಥ ನಾರಾಯಣ ಅವರು ನಾಡೋಜ ಗೌರವ ಪದವಿ ಪ್ರದಾನ ಮಾಡಿದರು.



ಹಂಪಿ ಕನ್ನಡ ವಿವಿಯ ನುಡಿಹಬ್ಬ-28 ಘಟಿಕೋತ್ಸವದಲ್ಲಿ ಮಂಗಳವಾರ ಡಾ.ಹನಮಂತಪ್ಪ ಗೋವಿಂದಪ್ಪ ದಡ್ಡಿ, ಡಾ.ವೂಡೆ.ಪಿ.ಕೃಷ್ಣ ಅವರಿಗೆ ಡಿಸಿಎಂ ಡಾ.ಅಶ್ವಥ್‌ನಾರಾಯಣ ಅವರು ನಾಡೋಜ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಪ್ರೊ. ಎಸ್.ಸಿ.ಶರ್ಮಾ, ಕುಲಪತಿ ಸ.ಚಿ. ರಮೇಶ ಮತ್ತಿತರರು ಇದ್ದಾರೆ.

ಸಾಧಕರಿಗೆ ನಾಡೋಜ ಪ್ರಶಸ್ತಿ ಪ್ರದಾನ

ಹೊಸಪೇಟೆ: ಹಂಪಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ ಮಂಗಳವಾರ ಜರುಗಿದ 28ನೇ ನುಡಿಹಬ್ಬ ಹಾಗೂ ಘಟಿಕೋತ್ಸವ ಸರಳ ಸಮಾರಂಭದಲ್ಲಿ ಖ್ಯಾತ ವೈದ್ಯ ಡಾ. ಹನುಮಂತ ಗೋವಿಂದಪ್ಪ ದಡ್ಡಿ ಹಾಗೂ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಅವರಿಗೆ ಉನ್ನತ ಶಿಕ್ಷಣ ಸಚಿವರೂ ಆದ ಉಪಮುಖ್ಯಮಂತ್ರಿ ಡಾ. ಸಿ.ಎಸ್. ಅಶ್ವತ್ಥ್ ನಾರಾಯಣ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಪ್ರದಾನ ಮಾಡಿದರು. ಇದೇ ಸಂದರ್ಭದಲ್ಲಿ ಡಿಲಿಟ್, ಪಿಹೆಚ್‌ಡಿ ಹಾಗೂ ಎಂಫಿಲ್‌ಗಳನ್ನು ನೀಡಿ ಗೌರವಿಸಲಾಯಿತು.

ಕುಲಪತಿ ಸ.ಚಿ. ರಮೇಶ ಮಾತನಾಡಿ, ಕನ್ನಡವನ್ನು ಜಾಗತಿಕ ಮಟ್ಟದಲ್ಲಿ ಬೆಳೆಸುವುದು ಮತ್ತು ಸಾಂಸ್ಕೃತಿಕ ಚಹರೆಗಳನ್ನು ವಿಸ್ತರಿಸುವ ಕೆಲಸವನ್ನು ವಿ.ವಿ. ಮಾಡುತ್ತಿದೆ. ಕನ್ನಡವು ಕನ್ನಡವ ಕನ್ನಡಿಸುತಿರಬೇಕು ಎಂಬ ವರಕವಿ ಬೇಂದ್ರೆಯವರ ಮಾತಿನಂತೆ ಕೆಲಸವನ್ನು ನಿರ್ವಹಿಸುತ್ತಿದೆ ಎಂದರು.

ಪ್ರಶಸ್ತಿ ಪ್ರದಾನ ಸಮಾಂಭದಲ್ಲಿ ಕುಲಸಚಿವ ಡಾ. ಎ.ಸುಬ್ಬಣ್ಣ ರೈ ಸೇರಿದಂತೆ ವಿವಿಯ ಸಿಬ್ಬಂದಿ ಹಾಜರಿದ್ದರು. ಇದಕ್ಕೂ ಮುನ್ನ ಘಟಿಕೋತ್ಸವದ ಮೆರವಣಿಗೆ ನಡೆಯಿತು. ಯೂಟ್ಯೂಬ್, ಝೂಮ್ ಮೀಟಿಂಗ್‌ನಲ್ಲಿ ಕಾರ್ಯಕ್ರಮವನ್ನು ನೋಡಲು ಅವಕಾಶ ಕಲ್ಪಿಸಲಾಗಿತ್ತು.

ನಂ. 1 ಕನ್ನಡ ದಿನಪತ್ರಿಕೆ

ಬುಧವಾರ 11 ನವೆಂಬರ್ 2020
11 NOVEMBER 2020

ನುಡಿಹಬ್ಬದಲ್ಲಿ ನಾಡೋಜ ಪ್ರದಾನ



ವಿಜಯವಾಣಿ ಚಿತ್ರ

ಕನ್ನಡ ವಿವಿಯ ಮಂಟಪ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ನುಡಿ ಹಬ್ಬ ಕಾರ್ಯಕ್ರಮದಲ್ಲಿ ವೈದ್ಯ ಡಾ.ಹಣಮಂತ ದಡ್ಡಿ ಹಾಗೂ ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ ಅವರಿಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ನಾಡೋಜ ಪುರಸ್ಕಾರ ಪ್ರದಾನ ಮಾಡಿದರು. ನ್ಯಾಕ್ ಸಮಿತಿ ನಿರ್ದೇಶಕ ಪ್ರೊ.ಎಸ್.ಸಿ.ಶರ್ಮಾ, ಕುಲಪತಿ ಸ.ಚಿ.ರಮೇಶ, ಕುಲಸಚಿವ ಎ.ಸುಬ್ಬಣ್ಣ ರೈ ಹಾಗೂ ಇತರರು ಹಾಜರಿದ್ದರು.

ಬಳ್ಳಾರಿ: ವೈದ್ಯ ಹಣಮಂತ ದಡ್ಡಿ ಹಾಗೂ ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ ಅವರಿಗೆ ಸೋಮವಾರ ಕನ್ನಡ ವಿವಿಯ ಮಂಟಪ ಸಭಾಂಗಣದಲ್ಲಿ ಆಯೋಜಿಸಿದ್ದ 28ನೇ ನುಡಿಹಬ್ಬ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ನಾಡೋಜ ಪುರಸ್ಕಾರ ಪ್ರದಾನ ಮಾಡಿದರು.

ಕನ್ನಡ ವಿವಿಯ ಮಂಟಪ ಸಭಾಂಗಣದಲ್ಲಿ ಕಾರ್ಯಕ್ರಮ

ನುಡಿಹಬ್ಬದಲ್ಲಿ ಇಬ್ಬರಿಗೆ ಡಿ.ಲಿಟ್ ಹಾಗೂ 74 ಜನರಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಯಿತು. ನ್ಯಾಕ್ ಸಮಿತಿ ನಿರ್ದೇಶಕ ಪ್ರೊ. ಎಸ್.ಸಿ.ಶರ್ಮಾ, ಕುಲಪತಿ ಸ.ಚಿ. ರಮೇಶ ಇದ್ದರು.

ಮಹತ್ವದ ಕೊಡುಗೆ ನೀಡಿದವರಿಗೆ ಗೌರವ: ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ ಹಾಗೂ ಕಲೆಗೆ ಮಹತ್ವದ ಕೊಡುಗೆ ನೀಡಿದವರಿಗೆ ಕನ್ನಡ ವಿವಿಯಿಂದ ನಾಡೋಜ ಗೌರವ ಪ್ರದಾನ ಮಾಡಲಾಗುತ್ತಿದೆ. ಜಮಖಂಡಿಯಲ್ಲಿ ಖಾಸಗಿ ಆಸ್ಪತ್ರೆ ಹೊಂದಿರುವ ಡಾ. ಹಣಮಂತ ದಡ್ಡಿ ವಿವಿಧ ಸಂಘ-ಸಂಸ್ಥೆಗಳ ಮೂಲಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದಾರೆ. ಇತಿಹಾಸಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ. ಬೆಂಗಳೂರಿನ ಡಾ. ವೂಡೇ ಪಿ.ಕೃಷ್ಣ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿದ್ದಾರೆ. ಶಿಕ್ಷಣ, ರಾಷ್ಟ್ರೀಯ, ಮಾನವೀಯ ಹಾಗೂ ಯುವಜನ ಸೇವೆಗಳ ಮೂಲಕ ಗುರುತಿಸಿಕೊಂಡಿದ್ದಾರೆ.

ಹೊಸ ದಿಗಂತ

ಬುಧವಾರ, 11 ನವೆಂಬರ್ 2020

ಹಂಪಿ ಕನ್ನಡ ವಿಶ್ವವಿದ್ಯಾಲಯದ ಘಟಿಕೋತ್ಸವ | ಸಂಶೋಧಕರಿಗೆ ಪದವಿ ಪ್ರದಾನ


ವಿವಿಯಿಂದ ಸಂಸ್ಕೃತಿ ಮತ್ತು ಭಾಷೆ ವಿಸ್ತರಣೆ

• ದಿಗಂತ ವರದಿ, ಬಳ್ಳಾರಿ

ಹಂಪಿಕನ್ನಡವಿಶ್ವವಿದ್ಯಾಲಯದಲ್ಲಿಮಂಗಳವಾರ 28ನೇ ನುಡಿಹಬ್ಬ ಹಾಗೂ ಘಟಿಕೋತ್ಸವ ಸಮಾರಂಭ ಅದ್ದೂರಿಯಾಗಿ ನಡೆಯಿತು.

ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ ಅವರು, ಪ್ರತಿಷ್ಠಿತ ನಾಡೋಜಪ್ರಶಸ್ತಿ ಪ್ರದಾನ ಮಾಡಿದರು. ವೈದ್ಯಕೀಯ ಕ್ಷೇತ್ರದಿಂದ ಡಾ.ಹನುಮಂತ ಗೋವಿಂದಪ್ಪ ದಡ್ಡಿ ಹಾಗೂ ಶಿಕ್ಷಣ ಕ್ಷೇತ್ರದಿಂದ ಡಾ.ವೂಡೇ ಪಿ.ಕೃಷ್ಣಅವರಿಗೆ ನಾಡೋಜ ಪ್ರಶಸ್ತಿ ನೀಡಲಾಯಿತು. ಡಿಲಿಟ್, ಪಿಎಚ್.ಡಿ ಹಾಗೂ ಎಂಫಿಲ್ ಪದವಿಯನ್ನುಪ್ರದಾನ ಮಾಡಲಾಯಿತು. ಇದಕ್ಕೂ ಮುನ್ನ ಘಟಿಕೋತ್ಸವದ ಮೆರವಣಿಗೆ ಅರ್ಥಪೂರ್ಣವಾಗಿ ನಡೆಯಿತು.

ಡಾ.ಹನುಮಂತ ದಡ್ಡಿ, ಡಾ.ವೂಡೇ ಕೃಷ್ಣರಿಗೆ ನಾಡೋಜ ಪ್ರಶಸ್ತಿ



ಭಾಷೆ ಉಳಿವಿಗಾಗಿಯೇ ವಿವಿ ಸ್ಥಾಪನೆ: 28ನೇ ನುಡಿಹಬ್ಬ ಹಾಗೂ ಘಟಿಕೋತ್ಸವ ರಾಷ್ಟ್ರೀಯ ಮೌಲ್ವೀಕರಣ ಮತ್ತು ಮಾನ್ಯತಾ ಪರಿಷತ್(ಎನ್ಎಸಿ) ನಿರ್ದೇಶಕ ಮತ್ತು ವಿಶ್ರಾಂತ ಕುಲಪತಿ ಪ್ರೊ.ಎಸ್. ಸಿ. ಶರ್ಮಾ ಅವರು ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯ ಭಾಷೆಯ ಉಳಿವಿಗಾಗಿ ಸ್ಥಾಪನೆಯಾಗಿದೆ. ಸಂಸ್ಕೃತಿ, ಭಾಷೆಯ ಅಸ್ಮಿತೆಯಿಂದಲೇ ಕನ್ನಡ ವಿವಿವನ್ನು ಗುರುತಿಸಲಾಗುತ್ತದೆ. ವಿವಿಯಲ್ಲಿ ಸದಾ ಸಂಶೋಧನಾ ಚಟುವಟಿಕೆಗಳು ನಿರಂತವಾಗಿ ನಡೆಯುತ್ತಿವೆ ಎಂದರು.

ಸಂಸ್ಕೃತಿ ವಿಸ್ತರಿಸುವ ಗುರಿ: 28ನೇ ನುಡಿಹಬ್ಬ ಹಾಗೂ ಘಟಿಕೋತ್ಸವ ಕುಲಪತಿ ಸ.ಚಿ.ರಮೇಶ ಮಾತನಾಡಿ, ಕನ್ನಡ-ಕರ್ನಾಟಕ ಕಲಿಕೆಯ ಮುನ್ನಡೆ. ಅಧ್ಯಯನ ಮತ್ತು ಪ್ರಸಾರಕ್ಕಾಗಿ ಶ್ರೀ ಪಂಪಾ ವಿರೂಪಾಕ್ಷನ ನೆಲೆಯಾದ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿದೆ. ಕನ್ನಡವನ್ನು ಜಾಗತಿಕ ಮಟ್ಟದಲ್ಲಿ ಬೆಳೆಸುವುದು ಮತ್ತು ಸಾಂಸ್ಕೃತಿಕ ಚಹರೆಗಳನ್ನು ವಿಸ್ತರಿಸುವ ಕೆಲಸವನ್ನು ಮಾಡುತ್ತಿದೆಂದರು.

ಸಂಸೋಧನೆಗೆ ಅವಕಾಶ ಮಾಡಿಕೊಡುವ ಮೂಲ ಉದ್ದೇಶಕ್ಕಾಗಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಕನ್ನಡವು ಕನ್ನಡವ ಕನ್ನಡಿಸುತಿರಬೇಕು ಎಂಬ ವರಕವಿ ಬೇಂದ್ರೆಯವರ ಮಾತಿನಂತೆ ಕೆಲಸವನ್ನು ನಿರ್ವಹಿಸುತ್ತಿದೆ ಎಂದರು.

ಕೋವಿಡ್ ನಿಯಮ ಪಾಲನೆ: ಪ್ರಶಸ್ತಿ ಪ್ರದಾನ ಸಮಾಂಭದಲ್ಲಿ ಕುಲಸಚಿವ ಡಾ.ಎ.ಸುಬ್ಬಣ್ಣ ರೈ ಸೇರಿದಂತೆ ವಿವಿಯ ಸಿಬ್ಬಂದಿಗಳಿದ್ದರು. ಇದಕ್ಕೂ ಮೊದಲು ವಿವಿ ಆವರಣದಲ್ಲಿ ಸಂಗೀತ ಮತ್ತು ನೃತ್ಯ ವಿಭಾಗದ ಹಾಗೂ ಹಸ್ತಪ್ರತಿ ಭಂಡಾರ ಕಟ್ಟಡವನ್ನು ಉದ್ಘಾಟಿಸಲಾಯಿತು. ಒನಕೆ ಓಬವ್ವ ಅಧ್ಯಯನ ಕೇಂದ್ರದ ಶಿಲಾನ್ಯಾಸವನ್ನು ಸಚಿವ ಅಶ್ವತ್ಥ್ ನಾರಾಯಣ ಅವರು ನೆರವೇರಿಸಿದರು. ಅರಣ್ಯ ಸಚಿವ ಆನಂದ್‌ಸಿಂಗ್ ಸೇರಿದಂತೆ ಇತರರಿದ್ದರು. ಕೋವಿಡ್ ಹಿನ್ನೆಲೆಯಲ್ಲಿ ನುಡಿಹಬ್ಬ ಹಾಗೂ ಘಟಿಕೋತ್ಸವ ಸಮಾರಂಭದ ನೇರವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು.



ಹಂಪಿ ಕನ್ನಡ ವಿಶ್ವವಿದ್ಯಾಲಯದ ನುಡಿ ಹಬ್ಬದಲ್ಲಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ನಾಡೋಜ ಪದವಿ ಪ್ರದಾನ ಮಾಡಿದರು.

ನಾಡೋಜ ಪದವಿ ಪ್ರದಾನ

ಬಳ್ಳಾರಿ. ನ. 10– ಜಿಲ್ಲೆಯ ಹಂಪಿ ಕನ್ನಡ ವಿಶ್ವವಿದ್ಯಾಲಯದ 28ನೇ ನುಡಿಹಬ್ಬದಲ್ಲಿಂದು ಪ್ರತಿಷ್ಠಿತ ನಾಡೋಜ ಪದವಿ ಪ್ರದಾನ ಮಾಡಲಾಯಿತು.

ವಿಶ್ವ ವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅವರ ಅನುಪಸ್ಥಿತಿಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ವೈದ್ಯಕೀಯ ಕ್ಷೇತ್ರದಲ್ಲಿನ ಸೇವೆಗಾಗಿ ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಡಾ. ಹಣಮಂತ ಗೋವಿಂದಪ್ಪ ದಡ್ಡಿ ಅವರಿಗೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ಸಲ್ಲಿಸಿದ ಗಣನೀಯ ಸೇವೆಯನ್ನು ಪರಿಗಣಿಸಿ ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಡಾ. ವೂಡೇ ಕೃಷ್ಣ ಅವರಿಗೆ ನಾಡೋಜ ಪದವಿ ನೀಡಿ ಗೌರವಿಸಿದರು.

ಇದೇ ಸಂದರ್ಭದಲ್ಲಿ ಡಿಲಿಟ್ ಮತ್ತು ಪಿಎಚ್.ಡಿ ಪದವಿ ಪ್ರದಾನ ಮಾಡಿದರು.

ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ತಿನ (ನ್ಯಾಕ್) ನಿರ್ದೇಶಕ ಪ್ರೊ.ಎಸ್.ಸಿ. ಶರ್ಮಾ ಘಟಿಕೋತ್ಸವ ಭಾಷಣ ಮಾಡಿದರು.

ವಿಶ್ವ ವಿದ್ಯಾಲಯದ ಕುಲಪತಿ ಸ.ಚಿ.ರಮೇಶ್ ಅವರು ಸ್ವಾಗತ ಭಾಷಣ ಮಾಡಿ ಕನ್ನಡ ವಿವಿಯ ಡಾ. ರಾಜಕುಮಾರ ಅಧ್ಯಯನ ಪೀಠವನ್ನು ಸಿನಿಮಾ ಅಧ್ಯಯನ ಕೇಂದ್ರವಾಗಿ ಅಭಿವೃದ್ಧಿ ಪಡಿಸಿದೆ. ವಿಶ್ವದ ಇತರೇ ಭಾಷೆಗಳಲ್ಲಿನ ಜ್ಞಾನವನ್ನು ಕನ್ನಡಕ್ಕೆ ತರುವ ಕೆಲಸ ನಿರಂತರವಾಗಿ ನಡೆಯುತ್ತಿದೆ ಕನ್ನಡದ ವಿವಿಧ ನೆಲೆಗಳ ಅಧ್ಯಯನಕ್ಕೆ ಅನುದಾನ ನೀಡಬೇಕೆಂದು ಮನವಿ ಮಾಡಿದರು.

ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಸರಳವಾಗಿ ಆಚರಿಸಲಾಯಿತು.

ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ವೂಡೇ ಪಿ. ಕೃಷ್ಣರವರಿಗೆ ಅಭಿನಂದನೆ



ಬೆಂಗಳೂರಿನ :ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ, ಹಿರಿಯ ಶಿಕ್ಷಣ ತಜ್ಞ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌ॥ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣರವರು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 28ನೇ ನುಡಿಹಬ್ಬದಲ್ಲಿ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾಗಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಗೌರವ ಸನ್ಮಾನ ಪುರಸ್ಕೃತರಾದ ಡಾ.ವೂಡೇ ಪಿ. ಕೃಷ್ಣ ಈ ನಾಡು ಕಂಡ ಅಪರೂಪದ ವ್ಯಕ್ತಿತ್ವ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇತ್ತೀಚೆಗೆ ಇವರ ಬದುಕು-ಬರಹ ಸಾಧನೆಗಳನ್ನು ಒಳಗೊಂಡ ಸಾಕ್ಷ್ಯಚಿತ್ರ ರೂಪಿಸಿದೆ. ನ.10ರಂದು ಹಂಪಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯುವ ಘಟಿಕೋತ್ಸವದಲ್ಲಿ ವಿವಿ ಕುಲಾಧಿಪತಿಗಳಾದ ರಾಜ್ಯಪಾಲ ವಾಜುಭಾಯ್ ವಾಲಾರವರು ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಹಾಗು ಅಮರ ಬಾಪು ಚಿಂತನ ಪತ್ರಿಕೆಯ ಸಂಪಾದಕ ಶ್ರೀ ಜೀರಿಗೆ ಲೋಕೇಶ್ ಅಭಿನಂದಿಸಿದರು. ಶ್ರೀಯುತರ ಸೇವೆ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ದೊರೆಯಲಿ ಎಂದು ಅಭಿನಂದನೆ ಸಲ್ಲಿಸಿದ ಜೀರಿಗೆ ಲೋಕೇಶ್ ತಿಳಿಸಿದ್ದಾರೆ ಜೊತೆಯಲ್ಲಿ ಖಜಾಂಚಿ ಪ್ರೊ. ಪ್ರತಾಪ್ ಲಿಂಗಯ್ಯ ಇದ್ದಾರೆ.

SANJEPRABHA DAILY EVENING
ಸಂಜೆ ಪ್ರಭ
ಗುರುವಾರ 05 ನವೆಂಬರ್ 2020

ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ವೂಡೇ ಪಿ.ಕೃಷ್ಣರವರಿಗೆ ಅಭಿನಂದನೆ

ಬೆಂಗಳೂರು: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ, ಹಿರಿಯ ಶಿಕ್ಷಣ ತಜ್ಞ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌ. ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣರವರು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 28ನೇ ನುಡಿಹಬ್ಬದಲ್ಲಿ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಗೌರವ ಸನ್ಮಾನ ಪುರಸ್ಕೃತರಾದ ಡಾ.ವೂಡೇ ಪಿ. ಕೃಷ್ಣ ಈ ನಾಡು ಕಂಡ ಅಪರೂಪದ ವ್ಯಕ್ತಿತ್ವ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇತ್ತೀಚೆಗೆ ಇವರ ಬದುಕು-ಬರಹ ಸಾಧನೆಗಳನ್ನು ಒಳಗೊಂಡ



ಸಾಕ್ಷ್ಯಚಿತ್ರ ರೂಪಿಸಿದೆ. ನ.10ರಂದು ಹಂಪಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯುವ ಘಟಿಕೋತ್ಸವದಲ್ಲಿ ವಿವಿ ಕುಲಾಧಿಪತಿಗಳಾದ ರಾಜ್ಯಪಾಲ ವಾಜುಭಾಯ್ ವಾಲಾರವರು ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ.

ಈ ಸಂದರ್ಭದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಅಮರ ಬಾಪು ಚಿಂತನ ಪತ್ರಿಕೆಯ ಸಂಪಾದಕ ಜೀರಿಗೆ ಲೋಕೇಶ್ ರವರು ಇವರ ಸೇವೆ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ದೊರೆಯಲಿ ಎಂದು ಅಭಿನಂದನೆ ಸಲ್ಲಿಸಿದರು. ಜೊತೆಯಲ್ಲಿ ಖಜಾಂಚಿ ಪ್ರೊ. ಪ್ರತಾಪ್ ಲಿಂಗಯ್ಯ ಇದ್ದರು.

ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ವೂಡೇ ಪಿ. ಕೃಷ್ಣರವರಿಗೆ ಅಭಿನಂದನೆ

ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ, ಹಿರಿಯ ಶಿಕ್ಷಣ ತಜ್ಞ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌ॥ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣರವರು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 28ನೇ ನುಡಿಹಬ್ಬದಲ್ಲಿ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಗೌರವ ಸನ್ಮಾನ ಪುರಸ್ಕೃತರಾದ ಡಾ.ವೂಡೇ ಪಿ. ಕೃಷ್ಣ ಈ ನಾಡು ಕಂಡ ಅಪರೂಪದ ವ್ಯಕ್ತಿತ್ವ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇತ್ತೀಚೆಗೆ ಇವರ ಬದುಕು-ಬರಹ ಸಾಧನೆಗಳನ್ನು ಒಳಗೊಂಡ ಸಾಕ್ಷ್ಯಚಿತ್ರ ರೂಪಿಸಿದೆ. ನ.10ರಂದು ಹಂಪಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯುವ ಘಟಿಕೋತ್ಸವದಲ್ಲಿ ವಿವಿ ಕುಲಾಧಿಪತಿಗಳಾದ ರಾಜ್ಯಪಾಲ ವಾಜುಭಾಯ್ ವಾಲಾರವರು ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ.



ಈ ಸಂದರ್ಭದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಹಾಗು ಅಮರ ಬಾಪು ಚಿಂತನ ಪತ್ರಿಕೆಯ ಸಂಪಾದಕ ಶ್ರೀ ಜೇರಿಗೆ ಲೋಕೇಶ್ ಅಭಿನಂದಿಸಿದರು.

ಶ್ರೀಯುತರ ಸೇವೆ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ದೊರೆಯಲಿ ಎಂದು ಅಭಿನಂದನೆ ಸಲ್ಲಿಸಿದ ಜೇರಿಗೆ ಲೋಕೇಶ್ ತಿಳಿಸಿದ್ದಾರೆ ಜೊತೆಯಲ್ಲಿ ಖಜಾಂಚಿ ಪ್ರೊ. ಪ್ರತಾಪ್ ಲಿಂಗಯ್ಯ ಇದ್ದಾರೆ.

ನಾಡೋಜ ಪ್ರಶಸ್ತಿ ಪುರಸ್ಕೃತ ಡಾ. ವೂಡೇ ಪಿ. ಕೃಷ್ಣರವರಿಗೆ ಅಭಿನಂದನೆ

by Upayuktha November 4, 2020 0 195

SHARE 1



ಬೆಂಗಳೂರು: ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ, ಹಿರಿಯ ಶಿಕ್ಷಣ ತಜ್ಞ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 28ನೇ ನುಡಿಹಬ್ಬದಲ್ಲಿ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಗೌರವ ಸನ್ಮಾನ ಪುರಸ್ಕೃತರಾದ ಡಾ. ವೂಡೇ ಪಿ. ಕೃಷ್ಣ ಈ ನಾಡು ಕಂಡ ಅಪರೂಪದ ವ್ಯಕ್ತಿತ್ವ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇತ್ತೀಚೆಗೆ ಇವರ ಬದುಕು-ಬರಹ ಸಾಧನೆಗಳನ್ನು ಒಳಗೊಂಡ ಸಾಕ್ಷ್ಯಚಿತ್ರ ರೂಪಿಸಿದೆ.

ಟ್ರಂಪ್ ಮುನ್ನಡೆ: ಅಮೆರಿಕದ ಅಧ್ಯಕ್ಷ ಗಾದಿ ಯಾರಿಗೆ..?

ವಾಷಿಂಗ್ಟನ್: [illegible]

[illegible]



[illegible]

ನ್ಯಾಷನಲ್ ಮೀಡಿಯಾ ಅವಾರ್ಡ್–2020

ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಆಹ್ವಾನ

[illegible] "National Media Award" [illegible]

[illegible] E media.election.eci@gmail.com [illegible] 011-23052133 [illegible]

Printed by : B.K.PRASANNA, Published by : B.K.PRASANNA Edited By. B.K.PRASANNA, Owned by . B.K.PRASANNA
Printed at "VEE KAY PROCESS", No. 390/25, 1st Floor, 'Odiga Complex', Opp. Asha Sweets, Sampige Road, Malleswaram, BANGALORE - 560 003.
Published at , No. 36, Kodigehalli, Sahakaranagar PO, BANGALORE - 560 092. Editor B.K PRASANNA Email: vanthajala@gmail.com M.94481 19247, 94813 09247

ಈ ಸಂಜೆ

ಬುಧವಾರ, 04-11-2020



ಹಂಪಿ ಕನ್ನಡ ವಿಶ್ವವಿದ್ಯಾಲಯ-2020ರ ನಾಡೋಜ ಗೌರವಕ್ಕೆ ಭಾಜರಾದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರೂ ಆದ ಶಿಕ್ಷಣ ತಜ್ಞ ಡಾ.ವೂಡೆ ಪಿ.ಕೃಷ್ಣ ಅವರನ್ನು ಕನ್ನಡಪರ ಸಂಘಟನೆಗಳ ಮುಖಂಡರಾದ ಕನ್ನಡ ಕೃಷ್ಣ, ಪಾಲನೇತ್ರ, ಅಮ್ಮಿ ಚಂದ್ರಕುಮಾರ್, ಸಿ.ಸಿ.ರಾಮಲಿಂಗೇಶ್ವರ ಮತ್ತಿತರರು ಅಭಿನಂದಿಸಿದರು.

ಸಂಜೆವಾಣಿ

ಬೆಂಗಳೂರು
ಬುಧವಾರ 4 ನವೆಂಬರ್ 2020



ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ವೂಡೆ ಪಿ. ಕೃಷ್ಣ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ನಾಡೋಜ ಪ್ರಶಸ್ತಿ ನೀಡಿದ
ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಆಕಾಂಕ್ಷಿ ಶೇಖರ್ ಗೌಡ ಮಾಲಿ ಪಾಟೀಲ್ ಅಭಿನಂದಿಸಿದರು.
ಸಾಹಿತಿಗಳಾದ ಆರ್.ಜಿ. ಹಳ್ಳಿ ನಾಗರಾಜ, ಮಂಜುಳಾ ಶಿವಾನಂದ, ರಾಜಶೇಖರ ಅಂಗಡಿ ಇದ್ದಾರೆ.

3, 2020

ಹಣಮಂತ ದಡ್ಡಿ, ವೂಡೇ ಕೃಷ್ಣಗೆ ನಾಡೋಜ ಗೌರವ

ಪ್ರಜಾವಾಣಿ ವಾರ್ತೆ



ವೂಡೇ ಪಿ. ಕೃಷ್ಣ



ಹಣಮಂತ ದಡ್ಡಿ

ಹೊಸಪೇಟೆ: ಡಾ. ಹಣಮಂತ ಗೋವಿಂದಪ್ಪ ದಡ್ಡಿ, ವೂಡೇ ಪಿ. ಕೃಷ್ಣ ಅವರು ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪದವಿಗೆ ಆಯ್ಕೆಯಾಗಿದ್ದಾರೆ.

ನ. 10ರಂದು ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಆಯೋಜಿಸಿರುವ 28ನೇ ನುಡಿಹಬ್ಬದಲ್ಲಿ ನಾಡೋಜ ಪ್ರದಾನ ಮಾಡಲಾಗುತ್ತದೆ. ಜಮಖಂಡಿಯ ಹಣಮಂತ ದಡ್ಡಿ ಅವರಿಗೆ ವೈದ್ಯಕೀಯ ಕ್ಷೇತ್ರ ಮತ್ತು ಬೆಂಗಳೂರಿನ ವೂಡೇ ಪಿ. ಕೃಷ್ಣ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ನಾಡೋಜ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ನಾಡೋಜ ಆಯ್ಕೆ ಸಮಿತಿಯು ಮೂವರ ಹೆಸರನ್ನು ಶಿಫಾರಸು ಮಾಡಿತು. ಈ ಪೈಕಿ ರಾಜ್ಯಪಾಲರು ಇಬ್ಬರ ಹೆಸರು ಅಂತಿಮಗೊಳಿಸಿದ್ದಾರೆ.

ನ. 10ರ ಬೆಳಿಗ್ಗೆ 11ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ, ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಇಬ್ಬರಿಗೆ ಡಿ.ಲಿಟ್, 74 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಮತ್ತು 32 ವಿದ್ಯಾರ್ಥಿಗಳಿಗೆ ಎಂ.ಫಿಲ್ ಪದವಿ ಪ್ರದಾನ ಮಾಡುವರು. ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ತಿನ (ನ್ಯಾಕ್) ನಿರ್ದೇಶಕ ಪ್ರೊ.ಎಸ್.ಸಿ. ಶರ್ಮಾ ಘಟಿಕೋತ್ಸವ ಭಾಷಣ ಮಾಡುವರು. ಕುಲಪತಿ ಪ್ರೊ.ಸ.ಚಿ. ರಮೇಶ ಉಪಸ್ಥಿತರಿರುವರು.

ಕನ್ನಡಪ್ರಭ ಮಂಗಳವಾರ 3.11.2020

ವೈದ್ಯ ಹಣಮಂತ ದಡ್ಡಿ, ಶಿಕ್ಷಣತಜ್ಞ ವೂಡೇ ಕೃಷ್ಣಗೆ ನಾಡೋಜ ಗೌರವ



ಡಾ. ಹಣಮಂತ



ವೂಡೇ ಪಿ.ಕೃಷ್ಣ

ಹೊಸಪೇಟೆ: ಹಂಪಿ ಕನ್ನಡ ವಿವಿ ಕೊಡಮಾಡುವ ಪ್ರತಿಷ್ಠಿತ ನಾಡೋಜ ಗೌರವ ಪದವಿಗೆ ಬಾಗಲಕೋಟೆಯ ಜಮಖಂಡಿಯವೈದ್ಯ ಹಾಗೂ ಸಮಾಜ ಸೇವಕ ಡಾ. ಹಣಮಂತ ಗೋವಿಂದಪ್ಪ ದಡ್ಡಿ ಮತ್ತು ಬೆಂಗಳೂರಿನ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಭಾಜನರಾಗಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ 28ನೇ ನುಡಿಹಬ್ಬ-ಘಟಿಕೋತ್ಸವದಲ್ಲಿ ನ.10ರ ಬೆಳಗ್ಗೆ 11ಕ್ಕೆ ಮಂಟಪ ಸಭಾಂಗಣದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಪ್ರದಾನ ಮಾಡಲಿದ್ದಾರೆ. ಸಚಿವ ಅಶ್ವತ್ಥ ನಾರಾಯಣ ಡಿ.ಲಿಟ್ ಹಾಗೂ ಪಿಎಚ್.ಡಿ ಪದವಿ ಪ್ರದಾನ ಮಾಡಲಿದ್ದಾರೆ.

ಬೆಂಗಳೂರು
03. 11. 2020 ಮಂಗಳವಾರ

ಹಣಮಂತ ದಡ್ಡಿ, ವೂಡೇ ಕೃಷ್ಣಗೆ ನಾಡೋಜ ಗೌರವ



ಹಣಮಂತ ದಡ್ಡಿ



ವೂಡೇ ಪಿ. ಕೃಷ್ಣ

ಹೊಸಪೇಟೆ: ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಕ್ತ ಸಾಲಿನ ನಾಡೋಜ ಗೌರವಕ್ಕೆ ಡಾ. ಹಣಮಂತ ಗೋವಿಂದಪ್ಪ ದಡ್ಡಿ, ವೂಡೇ ಪಿ. ಕೃಷ್ಣ ಆಯ್ಕೆಯಾಗಿದ್ದಾರೆ. ಜಮಖಂಡಿಯ ದಡ್ಡಿ ಅವರಿಗೆ ವೈದ್ಯಕೀಯ ಕ್ಷೇತ್ರ ಮತ್ತು ಬೆಂಗಳೂರಿನ ವೂಡೇ ಕೃಷ್ಣ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ನಾಡೋಜ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ನ.10ರಂದು ನಡೆಯಲಿರುವ 28ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ವಿ.ಆರ್.ವಾಲಾ ಅವರು ದಡ್ಡಿ ಮತ್ತು ವೂಡೇ ಕೃಷ್ಣ ಅವರಿಗೆ ನಾಡೋಜ ಗೌರವ ಪ್ರದಾನ ಮಾಡಲಿದ್ದಾರೆ.

VIJAYAVANI BENGALURU

2B

ಮಂಗಳವಾರ 3 ನವೆಂಬರ್ 2020

3 NOVEMBER 2020

ದಡ್ಡಿ, ಪಿ.ಕೃಷ್ಣಗೆ ನಾಡೋಜ ಗೌರವ



ಎಚ್.ಜಿ. ದಡ್ಡಿ



ವೂಡೇ ಪಿ.ಕೃಷ್ಣ

ಹೊಸಪೇಟೆ(ಬಳ್ಳಾರಿ): ಬಾಗಲಕೋಟೆ ಜಿಲ್ಲೆ ಜಮಖಂಡಿಯ ದಡ್ಡಿ ಆಸ್ಪತ್ರೆಯ ವೈದ್ಯ ಹಣಮಂತ ಗೋವಿಂದಪ್ಪ ದಡ್ಡಿ ಮತ್ತು ಬೆಂಗಳೂರಿನ ಶೇಷಾದ್ರಿಪುರ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿ, ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ನಾಡೋಜ ಗೌರವ ಪದವಿ ನೀಡಿದ್ದು, ನ.10ರಂದು ನಡೆಯಲಿರುವ ಘಟಿಕೋತ್ಸವದಲ್ಲಿ ಪ್ರದಾನ ನಡೆಯಲಿದೆ. ರಾಜ್ಯಪಾಲ ವಝುಭಾಯಿ ರೂಡಾಭಾಯಿ ವಾಲಾ ಪ್ರದಾನ ಮಾಡಲಿದ್ದಾರೆ. ಇದೇ ವೇಳೆ ಇಬ್ಬರಿಗೆ ಡಿ.ಲಿಟ್ ಪದವಿ, 74 ಪಿಎಚ್.ಡಿ., 32 ಎಂಫಿಲ್, 13 ಬಿ.ಮ್ಯೂಜಿಕ್ ಪದವಿ ಪ್ರದಾನ ನಡೆಯಲಿದೆ.

ವಿಜಯ ಕರ್ನಾಟಕ

ಶನಿವಾರ, 24 ಅಕ್ಟೋಬರ್ 2020, ಬೆಂಗಳೂರು

ನ.17ರಿಂದ ಪದವಿ, ಎಂಜಿನಿಯರಿಂಗ್, ಡಿಪ್ಲೊಮಾ ಕ್ಲಾಸ್ ಸ್ಟಾರ್ಟ್

ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿಗೆ ಕೋವಿಡ್ ಪರೀಕ್ಷೆ ಕಡ್ಡಾಯ

ಹೋಗೋಣ ಕಾಲೇಜಿಗೆ!

■ ವಿಕ ಸುದ್ದಿಲೋಕ ಬೆಂಗಳೂರು

ಕೋವಿಡ್ ಅಪಾಯದ ಕಾರಣ ಅತಂತ್ರ ಸ್ಥಿತಿಯಲ್ಲಿದ್ದ ಕಾಲೇಜುಗಳ ಆರಂಭಕ್ಕೆ ಕೊನೆಗೂ ಮುಹೂರ್ತ ನಿಗದಿಯಾಗಿದೆ. ಕಳೆದ ಏಳು ತಿಂಗಳಿಂದ ಬಂದ್ ಆಗಿರುವ ರಾಜ್ಯದ ಎಲ್ಲಾ ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಕಾಲೇಜುಗಳು ನ.17ರಿಂದ ಪುನರಾರಂಭಿಸಲು ರಾಜ್ಯ ಸರಕಾರ ನಿರ್ಧರಿಸಿದೆ.

ವಿಕ EDU CORNER

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಉನ್ನತ ಶಿಕ್ಷಣ ಸಚಿವರೂ ಆಗಿರುವ ಡಿಸಿಎಂ ಡಾ. ಸಿ. ಎನ್. ಅಶ್ವತ್ಥನಾರಾಯಣ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ (ಯುಜಿಸಿ) ಮಾರ್ಗಸೂಚಿಗಳನ್ವಯ ಅಗತ್ಯ ಸುರಕ್ಷತಾ ಕ್ರಮಗಳೊಂದಿಗೆ ಕಾಲೇಜುಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ.

ಕೋವಿಡ್ ಕಾರ್ಯಪಡೆ ರಚನೆ: ವಿದ್ಯಾರ್ಥಿಗಳಿಗೆ ಸೋಂಕು ಹರಡದಂತೆ ತಡೆಯಲು ಅಗತ್ಯ ಸುರಕ್ಷತಾ ಕ್ರಮಗಳೊಂದಿಗೆ ತರಗತಿ ನಡೆಸುವಂತೆ ಶಿಕ್ಷಣ ಸಂಸ್ಥೆಗಳಿಗೆ ಸರಕಾರ ಸೂಚಿಸಿದೆ. ಈ ಸಂಬಂಧ ಮೇಲ್ವಿಚಾರಣೆಗಾಗಿ ಪ್ರತಿಯೊಂದು ಶಿಕ್ಷಣ ಸಂಸ್ಥೆಗಳಲ್ಲಿ 'ಕೋವಿಡ್ ಕಾರ್ಯಪಡೆ' ರಚಿಸಲಾಗುತ್ತದೆ. ಅಲ್ಲದೆ, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕೋವಿಡ್ ಕಾರ್ಯಪಡೆ ರಚನೆಗೆ ಸೂಚಿಸಲಾಗಿದೆ. »04



ಕೈಗೊಂಡಿರುವ ಕ್ರಮಗಳೇನು?

- ಕಾಲೇಜುಗಳ ಎಲ್ಲಾ ಕೊಠಡಿಗಳ ಸ್ಯಾನಿಟೈಸ್
- ತರಗತಿಗಳಿಗೆ ಹಾಜರಾಗುವ ನಿರ್ಧಾರ ವಿದ್ಯಾರ್ಥಿಗಳು, ಪೋಷಕರ ವಿವೇಚನೆಗೆ
- ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶೈಕ್ಷಣಿಕ ಮತ್ತು ಸಾಮಾನ್ಯ ಮಾರ್ಗಸೂಚಿ ಜಾರಿ
- ಡಿಜಿಟಲ್ ಕಲಿಕಾ ನಿರ್ವಹಣಾ ವ್ಯವಸ್ಥೆಗೆ ಕ್ರಮ
- ಇ-ಪಠ್ಯ ಬೋಧನೆಗೆ ನಿರ್ಧಾರ
- ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಸೌಲಭ್ಯ

ಆನ್‌ಲೈನ್ ತರಗತಿಯೂ ಇದೆ

ತರಗತಿಗಳಿಗೆ ಭೌತಿಕ (ಆಫ್‌ಲೈನ್) ಮತ್ತು ಆನ್‌ಲೈನ್ ತರಗತಿಗಳಿಗೆ ಹಾಜರಾಗುವ ಆಯ್ಕೆಯನ್ನು ವಿದ್ಯಾರ್ಥಿಗಳ ವಿವೇಚನೆಗೆ ಬಿಡಲಾಗಿದೆ. ಪ್ರಾಯೋಗಿಕ ತರಗತಿಗಳಿಗೆ ಭೌತಿಕವಾಗಿ ಹಾಜರಿ ಕಡ್ಡಾಯ. ಭೌತಿಕವಾಗಿ ತರಗತಿಗೆ ಹಾಜರಾಗಲು ಇಚ್ಛಿಸುವ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಸಂಬಂಧಿಸಿದ ಶಿಕ್ಷಣ ಸಂಸ್ಥೆಗೆ ಅನುಮತಿ ಪತ್ರ ನೀಡಬೇಕು.

ಸರಕಾರದ ನಿರ್ಧಾರವನ್ನು ಸ್ವಾಗತಿಸುತ್ತೇವೆ. ಆದರೆ ಸರಕಾರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಆರೋಗ್ಯದ ಬಗ್ಗೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು, ಶಿಕ್ಷಣ ಸಂಸ್ಥೆಗಳಲ್ಲಿ ಅವುಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬೇಕು.

- ಡಾ. ಟಿ.ಎಂ.ಮಂಜುನಾಥ್
ಅಧ್ಯಕ್ಷ, ಕರ್ನಾಟಕ ಸರಕಾರಿ ಕಾಲೇಜು ಅಧ್ಯಾಪಕರ ಸಂಘ

ಕಾಲೇಜು ಪ್ರಾರಂಭಕ್ಕೆ ವಿದ್ಯಾರ್ಥಿಗಳಿಂದಲೇ ಬೇಡಿಕೆ ಬಂದಿದೆ. ಕ್ಯಾಂಪಸ್ ಸಂದರ್ಶನ ಹಾಗೂ ಉದ್ಯೋಗ ನೇಮಕಕ್ಕೆ ಅವರು ಕಾಯುತ್ತಿದ್ದಾರೆ. ಹಾಗಾಗಿ ಅವರ ಭವಿಷ್ಯದ ಹಿತದೃಷ್ಟಿಯಿಂದ ಕಾಲೇಜುಗಳ ಆರಂಭಕ್ಕೆ ತೀರ್ಮಾನಿಸಲಾಗಿದೆ. ಎಲ್ಲ ವಿದ್ಯಾರ್ಥಿಗಳಿಗೆ ಸೂಕ್ತ-ಸುರಕ್ಷಿತ ವಾತಾವರಣ ಕಲ್ಪಿಸಲು ಸರಕಾರ ಬದ್ಧವಾಗಿದೆ. ವಿದ್ಯಾರ್ಥಿಗಳು, ಪೋಷಕರ ಅಭಿಪ್ರಾಯಕ್ಕೆ ಆದ್ಯತೆ ನೀಡಲಾಗಿದೆ.

-ಸಿ.ಎನ್.ಅಶ್ವತ್ಥನಾರಾಯಣ ಡಿಸಿಎಂ

ಶುಲ್ಕ ಪಾವತಿ ಗಡುವು ವಿಸ್ತರಣೆ »04

ಹೋಗೋಣ ಕಾಲೇಜಿಗೆ!

» ಮೊದಲ ಪುಟದಿಂದ

ಪಠ್ಯಕ್ರಮ ಕಡಿತ ಇಲ್ಲ: "ಶೈಕ್ಷಣಿಕ ವರ್ಷ ತಡವಾಗಿ ಆರಂಭವಾಗುತ್ತಿದ್ದರೂ ಪಠ್ಯ ಕ್ರಮ ಕಡಿತಗೊಳಿಸುವ ಯಾವುದೇ ನಿರ್ಧಾರ ಸರಕಾರದ ಮುಂದಿಲ್ಲ. ಎಂದಿನಂತೆ ರಜೆ ದಿನಗಳಂದು ಕಾಲೇಜಿಗೆ ರಜೆ ಇರುತ್ತದೆ. ಸೆಮಿಸ್ಟರ್ ಪರೀಕ್ಷೆಗಳನ್ನು ಯಾವಾಗ ನಡೆಸಬೇಕು ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು," ಎಂದು ಡಾ. ಅಶ್ವತ್ಥನಾರಾಯಣ ವಿವರಿಸಿದರು.

ಸಭೆಯಲ್ಲಿ ಸರಕಾರದ ಶೈಕ್ಷಣಿಕ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ, ಕಾಲೇಜು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜಿ.ಕುಮಾರ್ ನಾಯಕ್, ಆಯುಕ್ತ ಪಿ.ಪ್ರದೀಪ್ ಸೇರಿದಂತೆ ಮತ್ತಿತರರಿದ್ದರು.

ಕಾಲೇಜು ಆರಂಭ ಸ್ವಾಗತಾರ್ಹ. ಶೇ.10ರಷ್ಟು ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾದರೂ ಅಗತ್ಯ ಮುಂಜಾಗ್ರತಾ ಕ್ರಮಗಳೊಂದಿಗೆ ನಾವು ಕಾಲೇಜುಗಳನ್ನು ನಡೆಸುತ್ತೇವೆ.

- ಡಾ. ವೂಡೆ ಪಿ. ಕೃಷ್ಣ
ಕಾರ್ಯದರ್ಶಿ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಸಮೂಹ




ನಗರದ ಶೇಷಾದ್ರಿಪುರಂ ಕಾಲೇಜು, ಎನ್‌ಎಸ್‌ಎಸ್ ಘಟಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಕೊರೊನಾ ವೈರಸ್ ಕುರಿತು ಹಮ್ಮಿಕೊಳ್ಳಲಾಗಿದ್ದ ಜಾಗೃತಿ ಸೈಕಲ್ ಜಾಥಾಗೆ ಶಿಕ್ಷಣದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಚಾಲನೆ ನೀಡಿದರು. ಎನ್‌ಎಸ್‌ಎಸ್ ಅಧಿಕಾರಿ ಡಾ.ಗಣನಾಥಶೆಟ್ಟಿ ಎಕ್ಕೂರು ಮತ್ತಿತರರಿದ್ದರು.

ಪ್ರಜಾವಾಣಿ ಶುಕ್ರವಾರ • ಅಕ್ಟೋಬರ್ 23, 2020



ಶೇಷಾದ್ರಿಪುರ ಕಾಲೇಜು ನಗರದಲ್ಲಿ ಗುರುವಾರ ಆಯೋಜಿಸಿದ್ದ 'ಜಲ ಸಂರಕ್ಷಣೆಯ ಭೌತಿಕ ಮತ್ತು ಸಾಮಾಜಿಕ ಆಯಾಮಗಳು' ಕುರಿತ ಒಂದು ದಿನದ ಕಾರ್ಯಗಾರವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಿದರು. ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಗಣನಾಥ ಶೆಟ್ಟಿ ಎಕ್ಕಾರು, ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ಎಂ.ಎಸ್. ನಟರಾಜ್, ಪರಿಸರ ನೀತಿ ಮತ್ತು ಆಡಳಿತದ ಹಿರಿಯ ತಜ್ಞ ಡಾ. ಶರಚ್ಚಂದ್ರ ಲೇಲೆ, ಪ್ರಾಂಶುಪಾಲೆ ಡಾ. ಮೀರಾ ಎಚ್.ಎನ್, ರಾಜ್ಯ ಎನ್‌ಎಸ್‌ಎಸ್ ಕೋಶದ ಅನುಷ್ಠಾನ ಅಧಿಕಾರಿ ಡಾ. ಪೂರ್ಣಿಮಾ ಜೋಗಿ ಹಾಗೂ ಎನ್‌ಎಸ್‌ಎಸ್ ಅಧಿಕಾರಿ ಪ್ರೊ. ಪ್ರತಾಪ್ ಲಿಂಗಯ್ಯ ಇದ್ದರು

ಈ ಸಂಜೆ
ಗುರುವಾರ, 22-10-2020



ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಲಸಂರಕ್ಷಣೆಯ ಬೌದ್ಧಿಕ ಮತ್ತು ಸಾಮಾಜಿಕ ಆಯಾಮಗಳ ಕುರಿತ ಕಾರ್ಯಾಗಾರವನ್ನು ಶಿಕ್ಷಣ ತಜ್ಞ ಡಾ.ವೂಡೆ ಪಿ.ಕೃಷ್ಣ ಉದ್ಘಾಟಿಸಿದರು. ಡಾ.ಗುಣನಾಥಶೆಟ್ಟಿ, ಎಂ.ಎಸ್.ನಟರಾಜ್, ಸಂಪನ್ಮೂಲ ವ್ಯಕ್ತಿ ಡಾ.ಶರಶ್ಚಂದ್ರ ಲೇಲೆ, ಡಾ.ಮೀರಾ, ಡಾ.ಪೂರ್ಣಿಮಾ ಜೋಗಿ, ಪ್ರೊ.ಪ್ರತಾಪ್ ಲಿಂಗಯ್ಯ ಮತ್ತಿತರರು ಪಾಲ್ಗೊಂಡಿದ್ದರು.

ಕೊರೋನಾ ವಾರಿಯರ್ಸ್



ಗಾಂಧಿ ಜಯಂತಿ ಸಮಾರಂಭದಲ್ಲಿ ಕೊರೋನಾ ಪೀಡಿತರ ಆರೈಕೆಗಾಗಿ ವಿಶೇಷವಾಗಿ ಶ್ರಮಿಸಿದ ವಿಜಯಪುರದ ಪತ್ರಕರ್ತೆ ಎಂ. ಶೋಭಾ ಕಿಶೋರ್‌ಕುಮಾರ್ ಅವರಿಗೆ ಗಾಂಧಿ ಸ್ಮಾರಕ ನಿಧಿ ಗೌ|| ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಕೊರೋನಾ ವಾರಿಯರ್ಸ್ ಪ್ರಶಸ್ತಿ ನೀಡಿ ಗೌರವಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದಾರೆ.

ಹೊಸ ದಿಗಂತ ಶನಿವಾರ, 3 ಅಕ್ಟೋಬರ್ 2020,

ಮಹಾತ್ಮರ ಬಾಳು ಕೃತಿಗೆ ಪುರಸ್ಕಾರ



ಬೆಂಗಳೂರು: ಬಾ ಬಾಪು 150ನೇ ಜನ್ಮ ವರ್ಷಾಚರಣೆ ಮತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಗಾಂಧಿ ಭವನದ ಮಹಾದೇವ ಸಭಾಂಗಣದಲ್ಲಿ ಹಿರಿಯ ಗಾಂಧಿವಾದಿ ಡಾ.ಎನ್.ಎಸ್.ಸುಬ್ಬರಾವ್ ಉದ್ಘಾಟಿಸಿದರು.

ಡಾ.ಎಲ್.ಹನುಮಂತಯ್ಯ ಅವರು ವೇಮಗಲ್ ಸೋಮಶೇಖರ್ ಅವರ ಮಹಾತ್ಮರ ಬಾಳು ಕೃತಿಗೆ ಜಯಶ್ರೀ ಟ್ರಸ್ಟ್ ಪುರಸ್ಕಾರ ಪ್ರದಾನ ಮಾಡಿದರು. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಬಾಲ ಮಹಾಭಾರತ ಕೃತಿಯನ್ನು ಮಾಜಿ ಸಂಸದ ಎಚ್. ಹನುಮಂತಪ್ಪ ಅವರು ಬಿಡುಗಡೆ ಮಾಡಿದರು.

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಯಾಕೂಬ್ ಕೊಯ್ಯಾರ್ ಮತ್ತು ಎನ್‌ಎಸ್‌ಎಸ್ ಅಧಿಕಾರಿ ಡಾ.ಗಣನಾಥಶೆಟ್ಟಿ ಎಕ್ಕಾರು ಅವರಿಗೆ ಗೌರವ ಪುರಸ್ಕಾರ ಪ್ರದಾನ ಮಾಡಲಾಯಿತು. ಇದೇ ವೇಳೆ ಡಾ.ನಿರಂಜನ ವಾನಳ್ಳಿ ಅವರ ಗಾಂಧಿಯೊಳಗೊಬ್ಬ ಪತ್ರಕರ್ತ, ಪ್ರೊ.ಸತ್ಯನಾರಾಯಣರಾವ್ ಅಣತಿ ಅವರ ಚರಕ ಸಂಹಿತೆ, ವೇಮಗಲ್ ಸೋಮಶೇಖರ್ ಅವರ ನಂದಿ ಗಿರಿಧಾಮದಲ್ಲಿ ಗಾಂಧಿ, ವನಜಾಕ್ಷಿ ಕೆ. ಅವರ ಸ್ವಚ್ಛಭಾರತಿ, ಡಾ.ವೂಡೇ ಪಿ. ಕೃಷ್ಣ ಅವರ ಗಾಂಧಿ ಮತ್ತು ಅಧ್ಯಾತ್ಮಿಕ ಸುಸ್ಥಿರತೆ, ಎಂ.ಬಸವಯ್ಯ ಅವರ ನನ್ನ ಮನಸಿನ ಭಾರತ ಕೃತಿಗಳು ಬಿಡುಗಡೆಗೊಳಿಸಲಾಯಿತು. ಕೊರೋನಾ ವಾರಿಯರ್ಸ್‌ಗಳನ್ನು ಸನ್ಮಾನಿಸಲಾಯಿತು. ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಭವನದ ಸದಸ್ಯ ಎನ್.ಆರ್.ವಿಶುಕುಮಾರ್ , ದಿನೇಶ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ

೧೩ ಅಕ್ಟೋಬರ್, ೨೦೨೦



ಗ್ರಾಮೋದ್ಯೋಗ ಉಳಿಸಿ ಆಂದೋಲನದ ಕೈಉತ್ಪನ್ನಗಳ ಪ್ರದರ್ಶನ ಮಾರಾಟ ಪ್ರಾರಂಭವಾಗಿದ್ದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಉದ್ಘಾಟಿಸಿದರು. ಈ ವೇಳೆ ರಂಗಕರ್ಮಿ ಪ್ರಸನ್ನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಇದ್ದರು.

ಶುಕ್ರವಾರ 2 ಅಕ್ಟೋಬರ್ 2020
2 OCTOBER 2020

ರಕ್ತದಾನ ಆಂದೋಲನವಾಗಬೇಕು



ವಿಜಯವಾಣಿ ಚಿತ್ರ

ಕರ್ನಾಟಕ ರೆಡ್‌ಕ್ರಾಸ್ ಸಂಸ್ಥೆ ಗುರುವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆಯಲ್ಲಿ ಎಸ್. ನಾಗಣ್ಣ, ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ಬೆಂಗಳೂರು: ಕರೊನಾ ಸಂದರ್ಭದಲ್ಲಿ ರಕ್ತದ ಕೊರತೆ ಎದುರಾಗಿದ್ದು, ಸ್ವಯಂಪ್ರೇರಿತ ರಕ್ತದಾನ ಆಂದೋಲನವಾಗಬೇಕಾದ ಅಗತ್ಯವಿದೆ ಎಂದು ರೆಡ್‌ಕ್ರಾಸ್ ಸಂಸ್ಥೆ ಸಭಾಪತಿ ಎಸ್. ನಾಗಣ್ಣ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರೆಡ್‌ಕ್ರಾಸ್ ಸಂಸ್ಥೆ ಗುರುವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಕ್ತ ಸದುಪಯೋಗವಾಗಬೇಕು ಲಾಭರಹಿತ ಸಂಸ್ಥೆಗಳಿಗೆ ಸೇವಾ ಮನೋಭಾವದ ಸಂಸ್ಥೆಗಳಿಗೆ ರಕ್ತವನ್ನು ಕೊಡುವ ವ್ಯವಸ್ಥೆಯಾಗಬೇಕು ಎಂದರು.

ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ

ದೇಶಕ್ಕೆ 135 ಲಕ್ಷ ಯೂನಿಟ್ ರಕ್ತದ ಅಗತ್ಯವಿದೆ. ಈ ಬಗ್ಗೆ ಮಾಧ್ಯಮಗಳಲ್ಲಿ ಹೆಚ್ಚಿನ ಪ್ರಚಾರದ ಅಗತ್ಯವಿದೆ. ಹಾಗೆಂದು ರಕ್ತದಾನ ಎಂಬುದು ಉದ್ದಿಮೆಯೂ ಆಗಬಾರದು ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಆರೋಗ್ಯಕರ ಮನಸ್ಸುಗಳನ್ನು ಕಟ್ಟುವ ಕೆಲಸವಾಗಬೇಕು. ಕರೊನಾದಂತಹ ಕ್ಲಿಷ್ಟ ಸಮಯದಲ್ಲಿ ರೆಡ್ ಕ್ರಾಸ್ ಸಂಸ್ಥೆ 25 ರಕ್ತದಾನ ಶಿಬಿರಗಳನ್ನು ಆಯೋಜನೆ ಮಾಡಿ ಅಗತ್ಯವಿರುವ ಬಡರೋಗಿಗಳಿಗೆ ರಕ್ತವನ್ನು ಪೂರೈಸಿದೆ ಎಂದು ತಿಳಿಸಿದರು. ರೆಡ್ ಕ್ರಾಸ್ ಸಂಸ್ಥೆಯ ರಕ್ತದಾನ ಉಪ ಸಮಿತಿ ಸದಸ್ಯರಾದ ರಾಜೀವ್ ಚಂದ್ರಶೇಖರ್ ರಕ್ತದಾನದ ಮಹತ್ವವನ್ನು ತಿಳಿಸಿದರು. ಉಪ ಸಭಾಪತಿ ವಿ.ಎಸ್.ಎಸ್. ಕುಮಾರ್ ಉಪಸ್ಥಿತರಿದ್ದರು. ರಕ್ತದಾನ ಶಿಬಿರಗಳನ್ನು ಆಯೋಜಿಸಲು ಸಹಕರಿಸಿದ 10 ಸ್ವಯಂಪ್ರೇರಿತ ಸಂಸ್ಥೆಗಳ ಮುಖ್ಯಸ್ಥರನ್ನು ಸನ್ಮಾನಿಸಲಾಯಿತು.

ಈ ಸಂಜೆ


Thu, 01 October 2020



ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ ರೆಡ್‌ಕ್ರಾಸ್ ಭವನದಲ್ಲಿಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಕ್ತದಾನಿಗಳನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ. ಪಿ. ಕೃಷ್ಣ, ರೆಡ್‌ಕ್ರಾಸ್ ಸಂಸ್ಥೆಯ ರಾಮ ಚಂದ್ರಶೇಖರ್, ಸಂಸ್ಥೆ ರಾಜ್ಯ ಶಾಖೆಯ ಸಭಾಪತಿ ಎಸ್. ನಾಗಣ್ಣ, ಕುಮಾರ್, ಶ್ರೀನಿವಾಸಮೂರ್ತಿ ಮತ್ತಿತರರು ಹಾಜರಿದ್ದರು.

ಈ ಸಂಜೆ

Wed, 30 September 2020



ಶೇಷಾದ್ರಿಪುರಂ ಕಾಲೇಜಿನಲ್ಲಿಂದು ನಡೆದ ಮಾದಕ ವಸ್ತು ಪರಿಣಾಮ ಕುರಿತು ಜಾಗೃತಿ ಸಭೆಯನ್ನು ಬೆಂಗಳೂರು ವಿವಿ ಉಪ ಕುಲಪತಿ ಎಸ್.ಜಾಫೆಟ್ ಉದ್ಘಾಟಿಸಿದರು. ಡಾ.ಗೋಪಿನಾಥ ಶೆಟ್ಟಿ, ಶಿಕ್ಷಣ ತಜ್ಞ ಡಾ.ವೂಡೆ ಪಿ.ಕೃಷ್ಣ, ಎಂ.ಎಸ್.ನಟರಾಜ್, ಕೃಷ್ಣಸ್ವಾಮಿ, ಡಾ.ಸತೀಶ್ ಗೌಡ, ಡಾ.ಪ್ರತಿಮಾ ಮೂರ್ತಿ , ಪ್ರತಾಪ್ ಸಿಂಗಯ್ಯ , ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಎಸ್.ಬೋಸ್ ಮತ್ತಿತರರು ಹಾಜರಿದ್ದರು.

ಕನ್ನಡಪ್ರಭ Thu, 24 September 2020

ಸಸಿ ನೆಡುವುದಕ್ಕಿಂತ ಸಂರಕ್ಷಣೆ ಮುಖ್ಯ

ವೃಕ್ಷ ಮಹಾ ದಾಸೋಹವನ್ನು ಉದ್ಘಾಟಿಸಿ ಸುಶೀಲಮ್ಮ ಅಭಿಮತ



ದೇವನಹಳ್ಳಿ ತಾಲೂಕು ಕೋರಮಂಗಲ ಬಯಲು ಬಂದಿಖಾನೆಯಲ್ಲಿ ನಡೆದ ವೃಕ್ಷ ಮಹಾದಾಸೋಹ ಸಮಾರಂಭವನ್ನು ಸುಮಂಗಲಿ ಸೇವಾಶ್ರಮದ ಸುಶೀಲಮ್ಮ ಉದ್ಘಾಟಿಸಿದರು.

• ಕನ್ನಡಪ್ರಭ ವಾರ್ತೆ ದೇವನಹಳ್ಳಿ

ಪ್ರಕೃತಿ ಸಂರಕ್ಷಣೆ ಎಲ್ಲರ ಕರ್ತವ್ಯ. ಆದ್ದರಿಂದ ಗಿಡಗಳನ್ನು ಬೆಳೆಸುವುದು ಅವಶ್ಯವಾಗಿದೆ ಎಂದು ಸುಮಂಗಲಿ ಸೇವಾಶ್ರಮ ಅಧ್ಯಕ್ಷೆ ಡಾ.ಎಸ್.ಜಿ. ಸುಶೀಲಮ್ಮ ಹೇಳಿದರು.

ತಾಲೂಕು ಕೋರಮಂಗಲ ಬಯಲು ಬಂದಿಖಾನೆ ಆವರಣದಲ್ಲಿ ವಿಜಯಪುರ ಬಸವ ಕಲ್ಯಾಣ ಮಠದ ಮಹದೇವ ಸ್ವಾಮೀಜಿ ಸಾನಿಧ್ಯದಲ್ಲಿ ಒಂದು ಕೋಟಿ ಸಸಿ ನೆಟ್ಟು ಪೋಷಿಸುವ ವೃಕ್ಷ ಮಹಾ ದಾಸೋಹದ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರಿನ ಸುಮಂಗಲಿ ಸೇವಾಶ್ರಮ. ಕರ್ನಾಟಕ ಅಂಚೆ ನೌಕರರ ಸಾಹಿತ್ಯ ಬಳಗ ಹಾಗೂ ಜೈ ಭಾರತ್ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ದೇವನಹಳ್ಳಿ ತಾಲೂಕು ವಿಜಯಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ವೆಂಕಟಾಪುರ ಬಳಿಯ ಎರಡು ಕೆರೆಗಳ 2,300 ಎಕರೆ ಪ್ರದೇಶವಿದ್ದು, ಅಲ್ಲಿ ಒಂದು ಲಕ್ಷ ಗಿಡಗಳನ್ನು ನೆಡುವ ಗುರಿ ಹೊಂದಲಾಗಿದೆ. ಯಾರಿಗೆ ಮನೆಗಳ ಹತ್ತಿರ ಸಸಿಗಳನು ನೆಟ್ಟು ಸಂರಕ್ಷಣೆ ಮಾಡುವ ಆಸಕ್ತಿ ಇದೆಯೋ ಅವರೆಲ್ಲರೂ ಕಡ್ಡಾಯವಾಗಿ ಸಸಿ ನೆಟ್ಟು ಪೋಷಿಸಿ. ಸಸಿಗಳನ್ನು ಬೆಳೆಸಲು ಆಸಕ್ತಿ ಉಳ್ಳವರು ಬಯಸಿದ ಜಾತಿಯ ಸಸಿಗಳನ್ನು ನೀಡುವ ವ್ಯವಸ್ಥೆ ಮಾಡುತ್ತೇವೆ ಎಂದರು.

ಸಮಾಜ ಸೇವಾ ಸಮಿತಿ ಕಾರ್ಯದರ್ಶಿ ಎಚ್.ಜಿ. ಶೋಭಾ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಅಲ್ಲದೆ ಅನೇಕ ಪರಿಸರಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ಘೋಷಣೆಗಳನ್ನು ಕೂಗುತ್ತಾರೆ. ಆದರೆ, ಅದರಂತೆ ನಡೆಯಲು ಆಯೋಜಕರೇ ವಿಫಲರಾಗುತ್ತಾರೆ. ಈ ಬಯಲು ಬಂಧಿಖಾನೆಯಲ್ಲಿ ಸಾಕಷ್ಟು ಜಮೀನಿದ್ದು, ಗಿಡಗಳನ್ನು ಬೆಳೆಸುವ ಹಾಗೂ ಸಂರಕ್ಷಿಸುವ ಅವಕಾಶ ಇದೆ ಎಂದರು.

ಬೆಂಗಳೂರು ಪೋಸ್ಟ್‌ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಬಯಲು ಬಂದಿಖಾನೆಯ ಅಧಿಕಾರಿ ಮಲ್ಲಿಕಾರ್ಜುನ ಕಿ. ಮೂರಿ, ಅರಣ್ಯ ಇಲಾಖೆ ವ್ಯವಸ್ಥಾಪಕ ಎಂ. ವಿ. ರತ್ನ, ನಿವೃತ್ತ ಇಒ ರಾಮಾಂಜಿನಪ್ಪ, ಭಾರತ ಜನಜಾಗೃತಿ ಸೇನೆ ರಾಜ್ಯಾಧ್ಯಕ್ಷ ಡಾ.ಸಿ. ಮುನಿಯಪ್ಪ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಅಧಿಕಾರಿ ಅಕ್ಷತಾ ರೈ, ಅಂಚೆ ರತ್ನ ಪುರಸ್ಕೃತರಾದ ಡಾ. ನಾರಾಯಣಸ್ವಾಮಿ ಮಾತನಾಡಿದರು. ಜೈ ಭಾರತ್ ಸಂಸ್ಥೆ ಅಧ್ಯಕ್ಷ ಬಿಜ್ಜವಾರ ಸುಬ್ರಮಣ್ಯ ಸ್ವಾಗತ ಕೋರಿದರು, ಪ್ರಶಾಂತ್ ವಂದನೆ ಅರ್ಪಿಸಿದರು.

ಉದಯಕಾಲ
www.udayakala.news
ಶನಿವಾರ, ಜುಲೈ 11, 2020

ವರುಣಾ ನಾಲಾ ಹೋರಾಟದಿಂದ ಕಾವೇರಿ ಚಳವಳಿವರೆಗಿನ ನೆಲದ ನೆನಪು

ಮಂಡ್ಯ ಜಿಲ್ಲೆಯ ಅಸ್ಮಿತೆ ಹೋರಾಟಗಾರ ಜಿ.ಮಾದೇಗೌಡ!

ಡಾ.ಜಿ.ಮಾದೇಗೌಡ ಸಮಾಜ ಸೇವಾ ಪ್ರಶಸ್ತಿ ಭಾಜನ ವೂಡೇ ಪಿ.ಕೃಷ್ಣ ಬಣ್ಣನೆ

ಉದಯಕಾಲ ನ್ಯೂಸ್

ಮಂಡ್ಯ: ಮಂಡ್ಯ ಜಿಲ್ಲೆಯ ಅಸ್ಮಿತೆ, ಹಿರಿಯ ಹೋರಾಟಗಾರ ಜಿ. ಮಾದೇಗೌಡ ಅವರು ನಾಡಿನ ಹಿರಿಯ ಚೇತನ ಹಾಗೂ ಸಾಕ್ಷಿಪ್ರಜ್ಞೆ. 92 ವರ್ಷ ತುಂಬಿದ ಅವರು ತುಂಬು ಜೀವನ ಅನುಭವಿಸಿದ್ದಾರೆ. ಅವರ ಅನುಭವ ಸಾರ ಮುಂದಿನ ಪೀಳಿಗೆಗೆ ಮುಟ್ಟಬೇಕು. ಅವರ ಆತ್ಮಕಥನ ಪುಸ್ತಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಠ್ಯದಲ್ಲಿ ಅಳವಡಿಸಬೇಕು. ವಿವಿಗಳಲ್ಲಿ ಸಂಶೋಧನೆಗೆ ಯುವಕರು ಅಥವಾ ವಿದ್ಯಾರ್ಥಿಗಳು ಅವರನ್ನು ಪ್ರೇರೇಪಿಸಿಕೊಂಡು ಸಂಶೋಧನಾ ಮಹಾಪ್ರಬಂಧ ಮಂಡಿಸಲಿ. ಅವರ ದಾಖಲಾತಿ ಪ್ರಬಂಧ ಹೊರ ಹೊಮ್ಮಲಿ ಎಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ.ವೂಡೇ ಪಿ.ಕೃಷ್ಣ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಗರದ ಗಾಂಧಿ ಭವನದಲ್ಲಿ ಡಾ.ಜಿ.ಮಾದೇಗೌಡ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ 20ನೇ ವರ್ಷದ ರಾಜ್ಯ ಮಟ್ಟದ ಡಾ. ಜಿ. ಮಾದೇಗೌಡ ಸಮಾಜಸೇವಾ ಮತ್ತು ಸಾವಯವ ಕೃಷಿಕ ಪ್ರಶಸ್ತಿ ಪ್ರದಾನ ಹಾಗೂ ಡಾ. ಜಿ. ಮಾದೇಗೌಡರ ಆತ್ಮಕಥನ ನೆಲದ ನೆನಪು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.



ಪ್ರತಿಯವರು ಡಾಕ್ಯುಮೆಂಟೇಷನ್ ನಲ್ಲಿ ಅದ್ಭುತ ಕಲೆಗಾರರು. ಆ ನಿಟ್ಟಿನಲ್ಲಿ ಮಾದೇಗೌಡರು ರೈತರು, ಶಿಕ್ಷಣದಂತಹ ಜನಪರ ಕಾರ್ಯಗಳ ಬಗ್ಗೆ ಒಲವು ಇಟ್ಟುಕೊಂಡವರು. ಅವರು ಮಾಡಿರುವ ಎಲ್ಲಾ ಕೆಲಸ ಕಾರ್ಯಗಳನ್ನು ದಾಖಲಿಸುವ ಕಾರ್ಯವನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಮಾದೇಗೌಡರು ಅರ್ಥಪೂರ್ಣವಾಗಿ ಬದುಕನ್ನು ನಡೆಸಿರುವುದರ ಕುರಿತು ನೆಲದ ನೆನಪಿನಲ್ಲಿ ಚಿತ್ರಿಸಲಾಗಿದೆ. ಸರಳವಾದ ಭಾಷೆಯಲ್ಲಿದೆ. ನೇರವಾಗಿ ಮಾತನಾಡಿರುವುದನ್ನು ಬಿಂಬಿಸಿದ್ದಾರೆ. ಕಷ್ಟ ನಷ್ಟ, ಸಿಹಿ-ಕಹಿ ವಿಚಾರಗಳನ್ನೂ ಪುಸ್ತಕದಲ್ಲಿ ದಾಖಲಿಸಿದ್ದಾರೆ ಎಂದು ಅವರು ಶ್ಲಾಘಿಸಿದರು.

ಮಾದೇಗೌಡರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬ ನಿಟ್ಟಿನಲ್ಲಿ ಅವರು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ವರುಣಾ ನಾಲಾ ಹೋರಾಟದಲ್ಲಿ ಮಾದೇಗೌಡರು ಮುಂಚೂಣಿಗೆ ಬಂದವರು. ನಂತರ ಕಾವೇರಿ ಚಳವಳಿಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡು ನೇತೃತ್ವ ವಹಿಸಿದ್ದರು. ಮಾದೇಗೌಡರು ರಾಜ್ಯ, ರಾಷ್ಟ್ರಕ್ಕೆ ಬೇಕಾದವರು. ಗಾಂಧೀಜಿ ಅವರನ್ನು ಅನುಸರಿಸುವವರು. ಸಮಾಜಕ್ಕೆ ಪ್ರಯೋಜನಕಾರಿಯಾಗಿ ಕಾಣಿಸಿಕೊಳ್ಳುತ್ತಾರೆ ಎಂಬುದಕ್ಕೆ ಇವರೇ ನಿದರ್ಶನವಾಗಿದ್ದಾರೆ ಎಂದು ಬಣ್ಣಿಸಿದರು.


ಅವರು ಶಿಕ್ಷಣ ಸಂಸ್ಥೆಗಳು, ಅಧ್ಯಯನ ಕೇಂದ್ರಗಳು, ಗಾಂಧಿ ಗ್ರಾಮ ಇವೆಲ್ಲವನ್ನು ಗ್ರಾಮೀಣ ಭಾಗದ ಮಕ್ಕಳಿಗೆ ಸಿಗಬೇಕು, ಸಮಾಜದ ಒಳಿತಿಗಾಗಿ ಸ್ಥಾಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ, ಡಾ.ಜಿ. ಮಾದೇಗೌಡ ಸಮಾಜ ಸೇವಾ ಪ್ರಶಸ್ತಿಯನ್ನು ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತ ಡಾ. ವೂಡೇ ಪಿ. ಕೃಷ್ಣ ಹಾಗೂ ಸಾವಯವ ಪ್ರಶಸ್ತಿಯನ್ನು ಸಾವಯವ ಕೃಷಿಕ ವಾಟಹಳ್ಳಿ ಶ್ರೀನಿವಾಸ್ ಅವರಿಗೆ ಪ್ರದಾನ ಮಾಡಲಾಯಿತು.

ಟ್ರಸ್ಟ್ ಅಧ್ಯಕ್ಷ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾಪಕ ಅಧ್ಯಕ್ಷ ಡಾ. ಜಿ. ಮಾದೇಗೌಡ, ಭಾರತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಧು ಜಿ. ಮಾದೇಗೌಡ, ಉಪಾಧ್ಯಕ್ಷರಾದ ಬಿ.ಎಂ. ನಂಜೇಗೌಡ, ಸಿದ್ದೇಗೌಡ ಇತರರು ಭಾಗವಹಿಸಿದ್ದರು.

ಆತ್ಮಕಥನ ನೆಲದ ನೆನಪು ಪುಸ್ತಕ ಬಿಡುಗಡೆ

ಸುದ್ದಿ ಸಂಕೀರ್ಣ 11/7/2020 ಮಂಡ್ಯ



ಮಂಡ್ಯ : ನಗರದ ಗಾಂಧಿ ಭವನದಲ್ಲಿ ಡಾ. ಜಿ.ಮಾದೇಗೌಡ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ 20ನೇ ವರ್ಷದ ರಾಜ್ಯ ಮಟ್ಟದ ಡಾ. ಜಿ. ಮಾದೇಗೌಡ ಸಮಾಜಸೇವಾ ಮತ್ತು ಸಾವಯವ ಕೃಷಿಕ ಪ್ರಶಸ್ತಿ ಪ್ರದಾನ ಹಾಗೂ ಡಾ. ಜಿ. ಮಾದೇಗೌಡರ ಆತ್ಮಕಥನ ನೆಲದ ನೆನಪು ಪುಸ್ತಕ ಬಿಡುಗಡೆ ಸಮಾರಂಭ ನಡೆಯಿತು.

ಕಾರ್ಯಕ್ರಮದಲ್ಲಿ ಡಾ. ಜಿ. ಮಾದೇಗೌಡ ಸಮಾಜ ಸೇವಾ ಪ್ರಶಸ್ತಿಯನ್ನು ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತ ಡಾ. ಪ್ರೊ.ಡೇ ಓ. ಕೃಷ್ಣ ಹಾಗೂ ಸಾವಯವ ಪ್ರಶಸ್ತಿಯನ್ನು ಸಾವಯವ ಕೃಷಿಕ ಪಾಲಹಳ್ಳಿ ಶ್ರೀನಿವಾಸ್ ಅವರಿಗೆ ಪ್ರದಾನ ಮಾಡಲಾಯಿತು.

ಮಾದೇಗೌಡರ ಆತ್ಮಕಥನ ನೆಲದ ನೆನಪು ಪುಸ್ತಕ ಬಿಡುಗಡೆ ಮಾಡಿದ ಪ್ರೊ.ಡೇ ಕೃಷ್ಣ ಮಾತನಾಡಿ, ಜಿ. ಮಾದೇಗೌಡರು ನಾಡಿನ ಹಿರಿಯ ಚೇತನ ಹಾಗೂ ಸಾಕ್ಷಿಪ್ರಜ್ಞೆ ಎಂದು ಹೇಳಿದರು.

92 ವರ್ಷ ತುಂಬಿದ ಹಿರಿಯ ಜೀವನವನ್ನು ಅನುಭವಿಸಿದ್ದಾರೆ. ಅವರ ಅನುಭವ ಸಾರ ಮುಂದಿನ ಪೀಳಿಗೆಗೆ ಮುಟ್ಟಬೇಕು. ಅವರ ಆತ್ಮಕಥನ ಪುಸ್ತಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಠ್ಯದಲ್ಲಿ ಅಳವಡಿಸಬೇಕು. ಪಿ.ವಿ.ಗಳಲ್ಲೂ ಸಂಶೋಧನೆಗೆ ಯುವಕರು ಅಥವಾ ವಿದ್ಯಾರ್ಥಿಗಳು ಅವರನ್ನು ಪ್ರೇರೇಪಿಸಿಕೊಂಡು ಸಂಶೋಧನಾ ಮಹಾ ಪ್ರಬಂಧವನ್ನು ಮಂಡಿಸಲಿ. ಅಂತಹ ದಾಖಲಾತಿ ಪ್ರಬಂಧ ಹೊರ ಹೊಮ್ಮಲಿ ಎಂದು ಹೇಳಿದರು.

ಪ್ರತೀಕರು ಡಾಕ್ಯುಮೆಂಟೇಷನ್‌ನಲ್ಲಿ ಆದ್ಯುತ ತಲೆಗಾರರು, ಆ ನಿಟ್ಟಿನಲ್ಲಿ ಮಾದೇಗೌಡರು ರೈತರು, ಶಿಕ್ಷಣದಂತಹ ಜನಪರ ಕಾರ್ಯಗಳ ಬಗ್ಗೆ ಒಲವು ಇಟ್ಟುಕೊಂಡಿದ್ದವರು. ಅವರು ಮಾಡಿರುವ ಎಲ್ಲಾ ಕೆಲಸ ಕಾರ್ಯಗಳನ್ನು ದಾಖಲಿಸುವ ಕಾರ್ಯವನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಮಾದೇಗೌಡರು ಅರ್ಥಪೂರ್ಣವಾಗಿ ಬದುಕನ್ನು ನಡೆಸಿರುವುದರ ಕುರಿತು ಚಿತ್ರಿಸಲಾಗಿದೆ. ಸರಳವಾದ ಭಾಷೆಯಲ್ಲಿದೆ. ನೇರವಾಗಿ ಮಾತನಾಡಿರುವುದನ್ನು ಬಿಂಬಿಸಿದ್ದಾರೆ. ಕಷ್ಟ, ನಷ್ಟ, ಸಿಹಿ-ಕಹಿ ವಿಚಾರಗಳನ್ನೂ ಸಹ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಮಾದೇಗೌಡರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬ ನಿಟ್ಟಿನಲ್ಲಿ ಅವರು ಶಿಕ್ಷಣ ಸಂಸ್ಥೆಯನ್ನೂ ಸ್ಥಾಪಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರು.

ವರುಣಾ ನಾಲಾ ಹೋರಾಟದಲ್ಲಿ ಮಾದೇಗೌಡರು ಮುಂಚೂಣಿಗೆ ಬಂದವರು. ನಂತರ ಕಾವೇರಿ ಚಳವಳಿಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡು ನೇತೃತ್ವ ವಹಿಸಿದ್ದರು. ಮಾದೇಗೌಡರು ರಾಜ್ಯ, ರಾಷ್ಟ್ರಕ್ಕೆ ಬೇಕಾದವರು. ಗಾಂಧೀಜಿಯವರನ್ನು ಅನುಸರಿಸಿದವರು. ಸಮಾಜಕ್ಕೆ ಪ್ರಯೋಜನಕಾರಿಯಾಗಿ ಕಾಣಿಸಿಕೊಳ್ಳುತ್ತಾರೆ ಎಂಬುದಕ್ಕೆ ಇವರೇ ನಿದರ್ಶನರಾಗಿದ್ದಾರೆ ಎಂದು ಬಣ್ಣಿಸಿದರು.

ಅವರು ಶಿಕ್ಷಣ ಸಂಸ್ಥೆಗಳು, ಆಧ್ಯಾತ್ಮಿಕ ಕೇಂದ್ರಗಳು, ಗಾಂಧಿ ಗ್ರಾಮ ಇವೆಲ್ಲವೂ ಗ್ರಾಮೀಣ ಭಾಗದ ಮಕ್ಕಳಿಗೆ ಸಿಗಬೇಕು. ಸಮಾಜದ ಒಳಿತಿಗಾಗಿ ಸ್ಥಾಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಟ್ರಸ್ಟ್ ಅಧ್ಯಕ್ಷ, ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಬಿ.ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾಪಕ ಅಧ್ಯಕ್ಷ ಡಾ. ಜಿ. ಮಾದೇಗೌಡ, ಭಾರತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಧು ಜಿ. ಮಾದೇಗೌಡ, ಉಪಾಧ್ಯಕ್ಷರಾದ ಬಿ.ಎಂ. ನಂಜೇಗೌಡ, ಸಿದ್ದೇಗೌಡ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ತಹಶೀಲ್ದಾರ್ ಹತ್ಯೆ ಖಂಡಿಸಿ ...

VK
ವಿಜಯ ಕರ್ನಾಟಕ
ಬುಧವಾರ, 1 ಏಪ್ರಿಲ್ 2020, ಬೆಂಗಳೂರು

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ಪಾಠ

■ ವಿಕ ಸುದ್ದಿಲೋಕ ಬೆಂಗಳೂರು

ಲಾಕ್‌ಡೌನ್ ವ್ಯವಸ್ಥೆ ಜಾರಿಯಲ್ಲಿದ್ದರೂ ವಿದ್ಯಾರ್ಥಿಗಳ ಪಾಠ, ಪ್ರವಚನಕ್ಕೆ ಧಕ್ಕೆಯಾಗದಂತೆ ಆನ್‌ಲೈನ್ ತರಗತಿಗಳನ್ನು ನಡೆಸಲು ಶೇಷಾದ್ರಿಪುರಂ ಎಜುಕೇಶನ್ ಟ್ರಸ್ಟ್ ಮುಂದಾಗಿದೆ.

ಈ ಹಿನ್ನೆಲೆಯಲ್ಲಿ, ತರಗತಿಯಲ್ಲಿ ಕುಳಿತು ಪಾಠ ಕೇಳಿದಂತಹ ಅನುಭವ ನೀಡಲು ವಿಶೇಷವಾದ 'ಸ್ಲೇಟ್ ಬೋರ್ಡ್' ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ಆನ್‌ಲೈನ್ ವ್ಯವಸ್ಥೆಯಲ್ಲಿ ಕಾಲೇಜು, ತರಗತಿ, ಸೆಕ್ಷನ್, ಸೆಮಿಸ್ಟರ್ ಹಾಗೂ ಕೋರ್ಸ್‌ಗಳ ಆಧಾರದ ಮೇಲೆ ಸುಮಾರು 150ಕ್ಕೂ ಹೆಚ್ಚು ರೂಮ್‌ಗಳನ್ನು ವಿಂಗಡಿಸಲಾಗಿದೆ. ಪ್ರತಿ ರೂಮ್‌ಗಳಿಗೂ ಪ್ರತ್ಯೇಕ ಐಡಿ(ಗುರುತಿನ ಸಂಖ್ಯೆ)ಯನ್ನು ನೀಡಲಾಗಿದೆ.

ವಿದ್ಯಾರ್ಥಿಗಳು ತಮ್ಮ ಮೊಬೈಲ್ ಫೋನ್, ಡೆಸ್ಕ್‌ಟಾಪ್ ಅಥವಾ ಲ್ಯಾಪ್‌ಟಾಪ್‌ಗಳ ಮೂಲಕ ಈ ಐಡಿಗಳನ್ನು ಬಳಸಿಕೊಂಡು ತಮ್ಮ ಕಾಲೇಜು, ತರಗತಿ, ಸೆಕ್ಷನ್, ಸೆಮಿಸ್ಟರ್ ಹಾಗೂ ಕೋರ್ಸ್‌ಗಳಿಗೆ ಸಂಬಂಧಿಸಿದ ರೂಮ್‌ಗಳಿಗೆ ಪ್ರವೇಶ ಪಡೆಯಬಹುದಾಗಿದೆ. ಆನ್‌ಲೈನ್ ತರಗತಿಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಈಗಾಗಲೇ ವೇಳಾಪಟ್ಟಿಯನ್ನು ನೀಡಲಾಗಿದ್ದು, ವೇಳಾಪಟ್ಟಿಯ ಆಧಾರದಲ್ಲಿ ಪಾಠ, ಪ್ರವಚನಗಳು ಬಿತ್ತರಗೊಳ್ಳಲಿವೆ.

ಕೆಲವು ಬಾರಿ ಉಪನ್ಯಾಸಕರು ನೇರವಾಗಿ ಆನ್‌ಲೈನ್ ಮೂಲಕ ಬೋಧನೆ ಮಾಡಿದರೆ, ಮತ್ತೆ ಕೆಲವು ಬಾರಿ ವಿಡಿಯೊ, ಆಡಿಯೊ ಹಾಗೂ ಪಿಡಿಎಫ್ ಫೈಲ್‌ಗಳ ಮೂಲಕ ಉಪನ್ಯಾಸ ನಡೆಯಲಿದೆ. ಪಾಠದ ಬಗ್ಗೆ ಯಾವುದೇ ಅನುಮಾನಗಳು ಬಂದರೂ ವಿದ್ಯಾರ್ಥಿಗಳಿಗೆ ಪ್ರಶ್ನೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉಪನ್ಯಾಸಕರು ಆನ್‌ಲೈನ್ ಮೂಲಕವೇ ಉತ್ತರ ನೀಡಲಿದ್ದಾರೆ.

"ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಹೊಸ ತಂತ್ರಜ್ಞಾನದೊಂದಿಗೆ ಬೋಧನೆ ಮಾಡಲು ನಮ್ಮ ಶಿಕ್ಷಣ ಸಂಸ್ಥೆ ಮುಂದಾಗಿದೆ. ಕೊರೊನಾದಂತಹ ಯಾವುದೇ ಸಮಸ್ಯೆಗಳು ಎದುರಾದರೂ ನಮ್ಮ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಹಿನ್ನಡೆ ಮಾಡುವುದಿಲ್ಲ ಎಂಬುದನ್ನು ನಿರೂಪಿಸಿರುವುದು ಸಂತಸದ ವಿಚಾರವಾಗಿದೆ," ಎಂದು ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ತಿಳಿಸಿದ್ದಾರೆ.

ಮಾದೇಗೌಡರ ಆತ್ಮಕಥನ ನೆಲದ ನೆನಪು ಪುಸ್ತಕ ಬಿಡುಗಡೆ

[illegible] ಆತ್ಮಕಥನ [illegible] ನೆರವೇರಿಸಿದರು.

ಮುಖ್ಯ ಅತಿಥಿ ಡಾ. ಜಿ. [illegible] ಸಾಮಾಜಿಕ [illegible] ಡಾ. ಪ್ರೊ. ಜಿ. [illegible]



[illegible] ಜೀವನವನ್ನು [illegible] ಅವರ [illegible] ಮುಂದಿನ [illegible] ಮುಟ್ಟಬೇಕು. ಅವರ ಆತ್ಮಕಥನ ಪುಸ್ತಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವ [illegible] ಅವರ [illegible] ಅಥವಾ ವಿದ್ಯಾರ್ಥಿಗಳು ಇವರನ್ನು ಪ್ರೇರೇ[illegible]ಪಿಸಿಕೊಂಡು ಸಂಶೋಧನಾ ಮಹಾ ಪ್ರಬಂಧವನ್ನು ಮಂಡಿಸಲಿ. ಅಂತಹ ದಾಖಲಾತಿ ಪ್ರಬಂಧ ಹೊರ ಹೊಮ್ಮಲಿ ಎಂದು ಹೇಳಿದರು.

ಬ್ರಿಟೀಷರು ಡಾಕ್ಯುಮೆಂಟೇಷನ್‌ನಲ್ಲಿ ಅದ್ಭುತ ಕಲೆಗಾರರು. ಆ ನಿಟ್ಟಿನಲ್ಲಿ ಮಾದೇಗೌಡರು ರೈತರು, ಶಿಕ್ಷಣದಂತಹ ಜನಪರ ಕಾರ್ಯಗಳ ಬಗ್ಗೆ ಒಲವು ಇಟ್ಟುಕೊಂಡಿದ್ದವರು. ಅವರು ಮಾಡಿರುವ ಎಲ್ಲಾ ಕೆಲಸ ಕಾರ್ಯಗಳನ್ನು ದಾಖಲಿಸುವ ಕಾರ್ಯವನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಮಾದೇಗೌಡರು ಅರ್ಥಪೂರ್ಣವಾಗಿ ಬದುಕನ್ನು ನಡೆಸಿರುವುದರ ಕುರಿತು ಚಿತ್ರಿಸಲಾಗಿದೆ. ಸರಳವಾದ ಭಾಷೆಯಲ್ಲಿದೆ. ನೇರವಾಗಿ [illegible]ಟಿರುವುದನ್ನು ಬಿಂಬಿಸಿದ್ದಾರೆ. ಕಷ್ಟ, ನಷ್ಟ, ಸಿಹಿ-ಕಹಿ ವಿಚಾರಗಳನ್ನೂ ಸಹ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಮಾದೇಗೌಡರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬ ನಿಟ್ಟಿನಲ್ಲಿ ಅವರು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರು.

ವರುಣಾ ನಾಲಾ ಹೋರಾಟದಲ್ಲಿ ಮಾದೇಗೌಡರು ಮುಂಚೂಣಿಗೆ ಬಂದವರು. ನಂತರ ಕಾವೇರಿ ಚಳವಳಿಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡು ನೇತೃತ್ವ ವಹಿಸಿದ್ದರು. ಮಾದೇಗೌಡರು ರಾಜ್ಯ, ರಾಷ್ಟ್ರಕ್ಕೆ [illegible] ಗಾಂಧಿ [illegible]ವನ್ನು ಅನುಸರಿಸಿದವರು, ಸಮಾಜಕ್ಕೆ ಪ್ರಯೋಜನಕಾರಿಯಾಗಿ ಕಾಣಿಸಿಕೊಳ್ಳುತ್ತಾರೆ ಎಂಬುದಕ್ಕೆ ಇವರೇ ನಿದರ್ಶನರಾಗಿದ್ದಾರೆ ಎಂದು ಬಣ್ಣಿಸಿದರು.

ಅವರು ಶಿಕ್ಷಣ ಸಂಸ್ಥೆಗಳು, ಆಧ್ಯಾತ್ಮಿಕ ಕೇಂದ್ರಗಳು, ಗಾಂಧಿ ಗ್ರಾಮ ಇವೆಲ್ಲವೂ ಗ್ರಾಮೀಣ ಭಾಗದ ಮಕ್ಕಳಿಗೆ ಸಿಗಬೇಕು. ಸಮಾಜದ [illegible] ಸ್ಥಾಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಟ್ರಸ್ಟ್ ಅಧ್ಯಕ್ಷ, ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಬಿ. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾಪಕ ಅಧ್ಯಕ್ಷ ಡಾ. ಜಿ. ಮಾದೇಗೌಡ, ಭಾರತೀ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಧು ಜಿ. ಮಾದೇಗೌಡ, [illegible] ನಂಜೇಗೌಡ, [illegible] ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.


ನೈಕ್ಷಣಿಕವಾಗಿ ಚಟುವಟಿಕೆಗಳು ಆರಂಭಗೊಂಡಿವೆ ಎಂದು ಹೇಳಿದರು.

ಯೋಜನೆ ಇ... ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಮತ್ತು ಸಿಮೆಂಟ್ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ ಎಂದು ದೂರಿನಲ್ಲಿ ತಿಳಿಸಿದೆ.

ಡಾ. ವೂಡೇ ಪಿ. ಕೃಷ್ಣ, ಪಾಲಹಳ್ಳಿ ಶ್ರೀನಿವಾಸ್‌ಗೆ ಜಿ.ಮಾದೇಗೌಡ ಪ್ರಶಸ್ತಿ

ಮಂಡ್ಯ : ನಗರದ ಗಾಂಧಿ ಭವನದಲ್ಲಿ ಡಾ. ಜಿ. ಮಾದೇಗೌಡ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ 20ನೇ ವರ್ಷದ ರಾಜ್ಯ ಮಟ್ಟದ ಡಾ. ಜಿ. ಮಾದೇಗೌಡ ಸಮಾಜಸೇವಾ ಮತ್ತು ಸಾವಯವ ಕೃಷಿ ಪ್ರಶಸ್ತಿ ಪ್ರದಾನ ಹಾಗೂ ಡಾ. ಜಿ. ಮಾದೇಗೌಡರ ಆತ್ಮಕಥನ ನೆಲದ ನೆನಪು ಪುಸ್ತಕ ಬಿಡುಗಡೆ ಸಮಾರಂಭ ನಡೆಯಿತು.



ಕಾರ್ಯಕ್ರಮದಲ್ಲಿ ಡಾ. ಜಿ. ಮಾದೇಗೌಡ ಸಮಾಜ ಸೇವಾ ಪ್ರಶಸ್ತಿಯನ್ನು ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತ ಡಾ. ವೂಡೇ ಪಿ. ಕೃಷ್ಣ ಹಾಗೂ ಸಾವಯವ ಪ್ರಶಸ್ತಿಯನ್ನು ಸಾವಯವ ಕೃಷಿಕ ಪಾಲಹಳ್ಳಿ ಶ್ರೀನಿವಾಸ್ ಅವರಿಗೆ ಪ್ರದಾನ ಮಾಡಲಾಯಿತು.

ಮಾದೇಗೌಡರ ಆತ್ಮಕಥನ ನೆಲದ ನೆನಪು ಪುಸ್ತಕ ಬಿಡುಗಡೆ ಮಾಡಿದ ವೂಡೇ ಕೃಷ್ಣ ಮಾತನಾಡಿ, ಜಿ. ಮಾದೇಗೌಡರು ನಾಡಿನ ಹಿರಿಯ ಚೇತನ ಹಾಗೂ ಸಾಕ್ಷಿಪ್ರಜ್ಞೆ ಎಂದು ಹೇಳಿದರು.

92 ವರ್ಷ ತುಂಬಿದ ಹಿರಿಯರು ಜೀವನವನ್ನು ಅನುಭವಿಸಿದ್ದಾರೆ. ಅವರ ಅನುಭವ ಸಾರ ಮುಂದಿನ ಪೀಳಿಗೆಗೆ ಮುಟ್ಟಬೇಕು. ಅವರ ಆತ್ಮಕಥನ ಪುಸ್ತಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಠ್ಯದಲ್ಲಿ ಅಳವಡಿಸಬೇಕು. ವಿ.ವಿ.ಗಳಲ್ಲೂ ಸಂಶೋಧನೆಗೆ ಯುವಕರು ಅಥವಾ ವಿದ್ಯಾರ್ಥಿಗಳು ಅವರನ್ನು ಪ್ರೇರೇಪಿಸಿಕೊಂಡು ಸಂಶೋಧನಾ ಮಹಾ ಪ್ರಬಂಧವನ್ನು ಮಂಡಿಸಲಿ. ಅಂತಹ ದಾಖಲಾತಿ ಪ್ರಬಂಧ ಹೊರ ಹೊಮ್ಮಲಿ ಎಂದು ಹೇಳಿದರು.

ಬ್ರಿಟೀಷರು ಡಾಕ್ಯುಮೆಂಟೇಷನ್‌ನಲ್ಲಿ ಅದ್ಭುತ ಕಲೆಗಾರರು. ಆ ನಿಟ್ಟಿನಲ್ಲಿ ಮಾದೇಗೌಡರು ರೈತರು, ಶಿಕ್ಷಣದಂತಹ ಜನಪರ ಕಾರ್ಯಗಳ ಬಗ್ಗೆ ಒಲವು ಇಟ್ಟುಕೊಂಡಿದ್ದವರು. ಅವರು ಮಾಡಿರುವ ಎಲ್ಲಾ ಕೆಲಸ ಕಾರ್ಯಗಳನ್ನು ದಾಖಲಿಸುವ ಕಾರ್ಯವನ್ನು ಮಾಡಬೇಕು ಎಂದು ಸಲಹೆ ನೀಡಿದರು.


ಮಾದೇಗೌಡರು ಅರ್ಥಪೂರ್ಣವಾಗಿ ಬದುಕನ್ನು ನಡೆಸಿರುವುದರ ಕುರಿತು ಚಿತ್ರಿಸಲಾಗಿದೆ. ಸರಳವಾದ ಭಾಷೆಯಲ್ಲಿದೆ. ನೇರವಾಗಿ ಮಾತನಾಡಿರುವುದನ್ನು ಬಿಂಬಿಸಿದ್ದಾರೆ. ಕಷ್ಟ, ನಷ್ಟ, ಸಿಹಿ-ಕಹಿ ವಿಚಾರಗಳನ್ನೂ ಸಹ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಮಾದೇಗೌಡರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬ ನಿಟ್ಟಿನಲ್ಲಿ ಅವರು ಶಿಕ್ಷಣ ಸಂಸ್ಥೆಯನ್ನೂ ಸ್ಥಾಪಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರು.

ತರುಣಾ ಶಾಲಾ ಹೋರಾಟದಲ್ಲಿ ಮಾದೇಗೌಡರು ಮುಂಚೂಣಿಗೆ ಬಂದವರು. ನಂತರ ಕಾವೇರಿ ಚಳವಳಿಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡು ನೇತೃತ್ವ ವಹಿಸಿದ್ದರು. ಮಾದೇಗೌಡರು ರಾಜ್ಯ, ರಾಷ್ಟ್ರಕ್ಕೆ ಬೇಕಾದವರು. ಗಾಂಧೀಜಿಯವರನ್ನು ಅನುಸರಿಸಿದವರು. ಸಮಾಜಕ್ಕೆ ಪ್ರಯೋಜನಕಾರಿಯಾಗಿ ಕಾಣಿಸಿಕೊಳ್ಳುತ್ತಾರೆ ಎಂಬುದಕ್ಕೆ ಇವರೇ ನಿದರ್ಶನರಾಗಿದ್ದಾರೆ ಎಂದು ಬಣ್ಣಿಸಿದರು.

ಅವರು ಶಿಕ್ಷಣ ಸಂಸ್ಥೆಗಳು, ಆಧ್ಯಾತ್ಮಿಕ ಕೇಂದ್ರಗಳು, ಗಾಂಧಿ ಗ್ರಾಮ ಇವೆಲ್ಲವೂ ಗ್ರಾಮೀಣ ಭಾಗದ ಮಕ್ಕಳಿಗೆ ಸಿಗಬೇಕು. ಸಮಾಜದ ಒಳಿತಿಗಾಗಿ ಸ್ಥಾಪಿಸಿದ್ದಾರೆ ಎಂದರು.


ಟ್ರಸ್ಟ್ ಅಧ್ಯಕ್ಷ, ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಬಿ. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾಪಕ ಅಧ್ಯಕ್ಷ ಡಾ. ಜಿ. ಮಾದೇಗೌಡ, ಭಾರತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಧು ಜಿ. ಮಾದೇಗೌಡ, ಉಪಾಧ್ಯಕ್ಷರಾದ ಬಿ.ಎಂ. ನಂಜೇಗೌಡ ಇದ್ದರು.

ಪ್ರಜಾವಾಣಿ
ಬುಧವಾರ ● ಮೇ 27, 2020



2. ರೆಡ್‌ಕ್ರಾಸ್ ಹಾಗೂ ರೋಟರಿ ಇಂಟರ್ ನ್ಯಾಷನಲ್ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ (ಎಡದಿಂದ ಐದನೆಯವರು) ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ರೋಟರಿ ಸಂಸ್ಥೆಯ ಆನಂದ್ ರಾಮಚಂದ್ರ ಅವರಿಂದ ರಕ್ತದ ಯುನಿಟ್ ಸ್ವೀಕರಿಸಿದರು. ರೆಡ್‌ಕ್ರಾಸ್ ರಾಜ್ಯ ಸಂಯೋಜಕ ರಾಜು ಚಂದ್ರಶೇಖರ್, ನಟ ಶೈನ್ ಶೆಟ್ಟಿ, ಕಾರ್ಖಾನೆಗಳ ಸಹಾಯಕ ನಿರ್ದೇಶಕ ಎಂ.ಎ ಸೋಮಶೇಖರ್, ರೋಟರಿ ಸಂಸ್ಥೆಯ ಯು.ಬಿ. ಭಟ್, ಶಿಕ್ಷಣ ತಜ್ಞ ಬಿ.ಎ. ಅನಂತರಾಮ್ ಇದ್ದರು

ಸಂಯುಕ್ತ ಕರ್ನಾಟಕ ಮಂಗಳವಾರ, 26, ಮೇ, 2020




ರಾಜ್ಯ ರೆಡ್‌ಕ್ರಾಸ್ ಸಂಸ್ಥೆ ಮತ್ತು ರೋಟರಿ ಇಂಟರ್ ನ್ಯಾಷನಲ್ ಸಂಯುಕ್ತಾಶ್ರಯದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ರೆಡ್‌ಕ್ರಾಸ್ ಚಿನ್ನದ ಪದಕ ವಿಜೇತ ಹಾಗೂ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರು ದಾನಿಗಳು ನೀಡಿದ ರಕ್ತದ ಯೂನಿಟ್ ಅನ್ನು ರೋಟರಿ ಆನಂದ್ ರಾಮಚಂದ್ರ ಅವರಿಂದ ಸ್ವೀಕರಿಸಿದರು. ಈ ವೇಳೆ ಬಿಗ್‌ಬಾಸ್ ಶೋ ವಿಜೇತ ಶೈನ್‌ಶೆಟ್ಟಿ ಮತ್ತಿತರರಿದ್ದರು.

ನಂ.1 ವಿಜಯವಾಣಿ
VIJAYAVANI >> BENGALURU


ಮಂಗಳವಾರ 26 ಮೇ 2020
26 MAY 2020

ವಿಜಯವಾಣಿ ಚಿತ್ರ




ರಾಜ್ಯ ರೆಡ್ ಕ್ರಾಸ್ ಹಾಗೂ ರೋಟರಿ ಇಂಟರ್‌ನ್ಯಾಷನಲ್ ಸಂಸ್ಥೆ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಆನಂದ ರಾಮಚಂದ್ರ ನೀಡಿದ್ದ ರಕ್ತದ ಬ್ಯಾಗ್ ಅನ್ನು ರೆಡ್ ಕ್ರಾಸ್ ಸಂಸ್ಥೆ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಸ್ವೀಕರಿಸಿದರು. ನಟ ಶೈನ್ ಶೆಟ್ಟಿ, ಶಿಕ್ಷಣ ತಜ್ಞ ಬಿ.ಎ. ಅನಂತರಾಮ್ ಮತ್ತಿತರರಿದ್ದರು.

ಸಂಜೆವಾಣಿ ಸೋಮವಾರ, 25 ಮೇ 2020



ರಾಜ್ಯ ರೆಡ್ ಕ್ರಾಸ್ ಸಂಸ್ಥೆ ಮತ್ತು ರೋಟರಿ ಇಂಟರ್ ನ್ಯಾಷನಲ್ ಸಹಯೋಗದೊಂದಿಗೆ ನಡೆದ ವಿಶೇಷ ರಕ್ತದಾನ ಶಿಬಿರದಲ್ಲಿ ರೆಡ್ ಕ್ರಾಸ್ ಚಿನ್ನದ ಪದಕ ವಿಜೇತೆ, ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರು, ದಾನಿಗಳು ನೀಡಿದ ರಕ್ತದ ಯೂನಿಟ್ ಅನ್ನು ರೋಟರಿ ಆನಂದ ರಾಮಚಂದ್ರ ಅವರಿಂದ ಸ್ವೀಕರಿಸಿದರು. ರೆಡ್ ಕ್ರಾಸ್ ರಾಜ್ಯ ಸಂಚಾಲಕ ರಾಜು ಚಂದ್ರಶೇಖರ್, ಬಿಗ್ ಬಾಸ್ ವಿಜೇತ ಶೈನ್ ಶೆಟ್ಟಿ, ಕಾರ್ಖಾನೆಗಳ ಸಹಾಯಕ ನಿರ್ದೇಶಕ ಎಂ.ಎ. ಸೋಮಶೇಖರ್, ಮಾಜಿ ಗೌರ್ನರ್ ಯು.ಬಿ. ಭಟ್, ಶಿಕ್ಷಣ ತಜ್ಞ ಬಿ.ಎ. ಅನಂತರಾಮ್ ಇದ್ದಾರೆ.

ವಿಜಯ ಕರ್ನಾಟಕ ಸೋಮವಾರ,25 ಮೇ 2020



ರೆಡ್ ಕ್ರಾಸ್ ವತಿಯಿಂದ ಬನಶಂಕರಿಯಲ್ಲಿ ಶನಿವಾರ ಆಯೋಜಿಸಿದ್ದ ರಕ್ತದಾನ ಶಿಬಿರವನ್ನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಉದ್ಘಾಟಿಸಿದರು. ಚಿತ್ರನಟ ಶೈನ್ ಶೆಟ್ಟಿ, ರೆಡ್ ಕ್ರಾಸ್ ಸಂಸ್ಥೆಯ ರಾಜು ಮೊದಲಾದವರು ಹಾಜರಿದ್ದರು.

ಕೊರೊನಾ ಹುಟ್ಟೂರಲ್ಲೇ ಶಾಲೆ ಶುರು

ಮಾರಣಾಂತಿಕ ಕೊರೊನಾ ವೈರಸ್‌ನಿಂದ ಜಗತ್ತು ಅಕ್ಷರಶಃ ನಲುಗುತ್ತಿದೆ. ಶಾಲಾ ಕಾಲೇಜು, ಅಂಗಡಿ ಮುಂಗಟ್ಟು ಮುಚ್ಚಲ್ಪಟ್ಟಿವೆ. ಜಗತ್ತಿನ ಬಹುತೇಕ ದೇಶಗಳಲ್ಲಿ ಶಾಲೆಗಳು ಯಾವಾಗ ಪುನಾರಂಭಗೊಳ್ಳುತ್ತವೆ ಎಂಬುದು ಇನ್ನೂ ಖಚಿತವಾಗಿಲ್ಲ. ಆದರೆ ಇಂತಹ ಕಠಿಣ ಸಂದರ್ಭದಲ್ಲಿಯೂ ಡೆನ್ಮಾರ್ಕ್ ಮತ್ತು ಚೀನಾದಲ್ಲಿ ಸುಮಾರು ಮೂರು ತಿಂಗಳ ನಂತರ ಶಾಲೆಗಳು ಪುನಾರಂಭಗೊಂಡಿವೆ. ಈ ಎರಡು ದೇಶಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಅನುಸರಿಸುತ್ತಿರುವ ಸುರಕ್ಷಾ ಕ್ರಮಗಳು ಮತ್ತು ಮಾರ್ಗದರ್ಶಿ ಸೂತ್ರಗಳು ಇತರೆ ದೇಶಗಳಿಗೆ ಮಾದರಿಯಾಗಿವೆ.

ಬೋಧನಾ ನಿಯಮದಲ್ಲಿ ಬದಲಾವಣೆ: ಮಕ್ಕಳೆಲ್ಲ ಒಂದೆಡೆ ಸೇರಿದಾಗ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಕಷ್ಟ ಎಂಬ ಕಾರಣಕ್ಕೆ ಡೆನ್ಮಾರ್ಕ್‌ನಲ್ಲಿ ಬೋಧನಾ ಕ್ರಮದಲ್ಲೇ ಬದಲಾವಣೆ ಮಾಡಲಾಗಿದೆ. ಅಂದರೆ ಒಬ್ಬ ಶಿಕ್ಷಕ ಒಂದೇ ತರಗತಿಯಲ್ಲಿ ಪಾಠ ಮಾಡಬೇಕು. ಕೊರೊನಾಗಿಂತ ಮುಂಚೆ ಇದ್ದಂತೆ ಬೇರೆ ಬೇರೆ ಪೀರಿಯಡ್‌ಗಳಿಗೆಂದು ಬೇರೆ ಬೇರೆ ತರಗತಿಗಳಿಗೆ ಹೋಗುವಂತಿಲ್ಲ. ಒಬ್ಬನೇ ಶಿಕ್ಷಕ ಇತರೆ ಶಿಕ್ಷಕರು ಬೋಧಿಸುತ್ತಿದ್ದ ವಿಷಯಗಳನ್ನು ಬೋಧಿಸಬೇಕು. ಹೀಗೆ ಮಾಡುವುದರಿಂದ ಅನಗತ್ಯ ಓಡಾಟ ತಪ್ಪಿಸಬಹುದು ಎಂಬುದು ಅಲ್ಲಿನ ಶಿಕ್ಷಣ ಇಲಾಖೆಯ ಲೆಕ್ಕಾಚಾರ. ಈ ಕಾರಣಕ್ಕಾಗಿಯೇ ಇಲ್ಲಿನ ಶಾಲೆಗಳಲ್ಲಿ ಗಂಟೆ ಬಾರಿಸುವುದಿಲ್ಲ. ವಿದ್ಯಾರ್ಥಿಗಳು, ಶಿಕ್ಷಕರು ಒಂದೇ ಸಮಯದಲ್ಲೇ ಊಟ, ತಿಂಡಿಗೆ ತೆರಳಬೇಕು. ಇಂತಹದ್ದೊಂದು ನಿಯಮ ಪಾಲಿಸುವ ಮೂಲಕ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಓಡಾಟವನ್ನು ಕಡಿಮೆ ಮಾಡಲಾಗಿದೆ ಎನ್ನುತ್ತಾರೆ ಡೆನ್ಮಾರ್ಕ್‌ನ ಕೋಪನ್ ಹ್ಯಾಗನ್‌ನಲ್ಲಿರುವ ರೈಗಾರ್ಡ್ಸ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿರುವ ಅಂತಾರಾಷ್ಟ್ರೀಯ ಪ್ರಾಥಮಿಕ ಶಾಲೆಯ ಮುಖ್ಯಸ್ಥೆ ಶೆರ್ಲಿ ಜಾಕೋಬ್‌ಸನ್.

ಸೋಷಿಯಲ್ ಡಿಸ್ಟೆನ್ಸ್ ಹ್ಯಾಟ್: ಚೀನಾದ ಹ್ಯಾಂಗ್‌ಝೌ ಪ್ರಾಂತ್ಯದ ಯಾಂಗ್‌ಜೆಂಗ್ ಪ್ರಾಥಮಿಕ ಶಾಲೆಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಸೋಷಿಯಲ್ ಡಿಸ್ಟೆನ್ಸ್ ಹ್ಯಾಟ್‌ಗಳನ್ನು ಮಕ್ಕಳಿಗೆ ನೀಡಲಾಗಿದೆ. ಒಂದು ಮೀಟರ್ ಅಂತರವಿರುವಂತೆ 2 ಕೋಲುಗಳ ಸಹಾಯದಿಂದ ಈ ಟೋಪಿಯನ್ನು ತಯಾರಿಸಲಾಗಿದೆ. ಮಕ್ಕಳೆಲ್ಲ ಒಟ್ಟಿಗೆ ಒಂದೆಡೆ ಸೇರಿದಾಗ ಸಾಮಾಜಿಕ ಅಂತರದ ಬಗ್ಗೆ ತಿಳಿ ಹೇಳುವುದು ಕಷ್ಟ ಎನ್ನುವ ಕಾರಣಕ್ಕೆ ಈ ಉಪಾಯ ಮಾಡಲಾಗಿದೆ.

ಸಮಯದಲ್ಲಿ ಬದಲಾವಣೆ : ಡೆನ್ಮಾರ್ಕ್‌ನಲ್ಲಿ ಎಲ್ಲ ಮಕ್ಕಳು ಒಂದೇ ಸಮಯಕ್ಕೆ ಬಂದರೆ ದಟ್ಟಣೆ ಉಂಟಾಗುತ್ತದೆ ಎಂಬ ಕಾರಣಕ್ಕೆ ಪ್ರತಿ ತರಗತಿಯ ಮಕ್ಕಳು ಶಾಲೆಗೆ ಬರಲು ವಿಭಿನ್ನ ಸಮಯ ನಿಗದಿಪಡಿಸಲಾಗಿದೆ. ಪ್ರತಿ 15 ನಿಮಿಷದ ಅಂತರದಲ್ಲಿ ಶಾಲೆಗೆ ಬರುವಂತೆ ಮಕ್ಕಳಿಗೆ ಸೂಚಿಸಲಾಗಿದೆ. ಮಕ್ಕಳನ್ನು ಪೋಷಕರು ಗೇಟ್ ಬಳಿಯೇ ಡ್ರಾಪ್ ಮಾಡಿ ಹೋಗಬೇಕು. ಗುಡ್ ಬೈ ಹೇಳಲು ಶಾಲೆ ಒಳಗೆ ಬರುವಂತಿಲ್ಲ ಎನ್ನುತ್ತಾರೆ ಡೆನ್ಮಾರ್ಕ್‌ನ ರೋಸ್ಕಿಲ್ಡೆಯಲ್ಲಿರುವ ಸ್ಟಟ್ ಜೋಸೆಫ್ ಅಂತಾರಾಷ್ಟ್ರೀಯ ಶಾಲೆಯ ಅಂತಾರಾಷ್ಟ್ರೀಯ ವಿಭಾಗದ ಮುಖ್ಯಸ್ಥ ಡೊಮಿನಿಕ್ ಮಹೇರ್.

ಕೈಗಳನ್ನು ಮತ್ತೆ ಮತ್ತೆ ತೊಳೆಯುತ್ತಿರಿ: ಲಾಕ್‌ಡೌನ್‌ಗಿಂತಲೂ ಮೊದಲೂ ವಿದ್ಯಾರ್ಥಿಗಳಿಗೆ ಕೈತೊಳೆಯುವ ಅಭ್ಯಾಸ ರೂಢಿಸಲಾಗಿತ್ತು. ಈಗ ಹೆಚ್ಚು ಬಾರಿ ತೊಳೆಯುವಂತೆ ಪ್ರೇರೇಪಿಸಿದ್ದೇವೆ. ಅದಕ್ಕಾಗಿ ಹೆಚ್ಚುವರಿ ಕೈ ತೊಳೆಯುವ ಸೌಲಭ್ಯಗಳನ್ನು ಅನುಷ್ಠಾನಗೊಳಿಸಿದ್ದೇವೆ. ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ, ಕೊಠಡಿಗಳನ್ನು ಬದಲಾಯಿಸಿದಾಗ, ತಿನ್ನುವ ಮೊದಲು, ತಿಂದ ನಂತರ, ಆಟ ಆಡಿ ಬಂದ ನಂತರ ಹೀಗೆ ವಿದ್ಯಾರ್ಥಿಗಳು ಶಾಲೆಗೆ ಪ್ರವೇಶಿಸಿದ ನಂತರ ದಿನಕ್ಕೆ 6ರಿಂದ 8 ಬಾರಿ ಕೈ ಗಳನ್ನು ತೊಳೆಯುವ ಅಭ್ಯಾಸ ಮಾಡಿಸಲಾಗಿದೆ ಎಂದು ಮಹೇರ್ ಹೇಳಿದ್ದಾರೆ.

ಜತೆಗೆ ಶಾಲೆಯಲ್ಲಿ ಕತ್ತರಿ, ಬಣ್ಣದ ಪೆನ್ಸಿಲ್‌ಗಳು ಮತ್ತು ಕಲಾ ರಚನೆಗೆ ಸಂಬಂಧಿಸಿದ ವಸ್ತುಗಳನ್ನು ವಿದ್ಯಾರ್ಥಿಗಳು ಸ್ವತಃ ತರಬೇಕು. ಜತೆಗೆ ಅವುಗಳನ್ನು ಬೇರೆ ವಿದ್ಯಾರ್ಥಿಗಳ ಜತೆ ಹಂಚಿಕೊಳ್ಳುವಂತಿಲ್ಲ ಎಂಬ ನಿಯಮವನ್ನು ಜಾರಿಗೆ ತರಲಾಗಿದೆ ಎಂದು ಅವರು ಹೇಳಿದ್ದಾರೆ.

ದೇಹದ ತಾಪಮಾನ ಪರಿಶೀಲನೆ : ಚೀನಾದಲ್ಲಿ ವಿದ್ಯಾರ್ಥಿಗಳು ಮತ್ತು ಶಾಲಾ ಸಿಬ್ಬಂದಿಯ ದೇಹದ ತಾಪಮಾನವನ್ನು ಪರಿಶೀಲಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. 'ಯಾವುದೇ ವ್ಯಕ್ತಿಯ ತಾಪಮಾನ 37.3 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದ್ದರೆ ಮತ್ತೆ ಅವರ ತಾಪಮಾನವನ್ನು ಚೆಕ್ ಮಾಡಲಾಗುತ್ತದೆ ' ಎಂದು ಶಾಂಘೈನಲ್ಲಿರುವ ನಾರ್ತ್ ಆಂಗ್ಲಿಯಾ ಚೈನೀಸ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಮ್ಯಾಕ್‌ರಾಬರ್ಟ್ ಹೇಳುತ್ತಾರೆ.

ಶಾಲಾ ಪ್ರವೇಶ ದ್ವಾರದಲ್ಲಿ ಹ್ಯಾಂಡ್ ಸ್ಯಾನಿಟೈಸೇಷನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜತೆಗೆ ತ್ಯಜಿಸಿದ ಮಾಸ್ಕ್‌ಗಳನ್ನು ಹಾಕಲು ಡಸ್ಟ್‌ಬಿನ್‌ಗಳನ್ನು ಇಡಲಾಗಿದೆ. ಜತೆಗೆ ಯಾರಾದರೂ ಅನಾರೋಗ್ಯಕ್ಕೀಡಾದರೆ ಅವರನ್ನು ಪ್ರತ್ಯೇಕವಾಗಿ ಇಡಲು ಎರಡು ಐಸೋಲೇಷನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ರಾಬರ್ಟ್ ತಿಳಿಸಿದ್ದಾರೆ.

ವಿಭಿನ್ನವಾಗಿವೆ ತರಗತಿ

ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಒಂದೆಡೆ ಸೇರಬಾರದು ಎಂಬ ಕಾರಣಕ್ಕೆ ತರಗತಿಗಳನ್ನು ವಿಭಜಿಸಲಾಗಿದೆ. ಮಕ್ಕಳು ಸಾಂಪ್ರದಾಯಿಕ ಕಲಿಕೆಗೆ ಅಂದರೆ ಶಿಕ್ಷಕರನ್ನು ನೋಡುತ್ತ ಕಲಿಯುವ ಮನಸ್ಥಿತಿಗೆ ಒಗ್ಗಿಹೋಗಿದ್ದಾರೆ. ಹೀಗಾಗಿ ಪ್ರತಿ ಮಗುವಿಗೆ ಪ್ರತ್ಯೇಕ ಡೆಸ್ಕ್ ನೀಡಲಾಗಿದ್ದು, ಅಲ್ಲಿಯೇ ಅವರು ಕುಳಿತುಕೊಳ್ಳಬೇಕು. ಎದ್ದು ಓಡಾಡುವಂತಿಲ್ಲ. ಇದರಿಂದ ವಿದ್ಯಾರ್ಥಿಗಳು ಪರಸ್ಪರ ಹತ್ತಿರ ಕುಳಿತುಕೊಳ್ಳುವ ಅಪಾಯವನ್ನು ಕಡಿಮೆ ಮಾಡಲಾಗಿದೆ. ಜತೆಗೆ ಪಠ್ಯಕ್ರಮಕ್ಕಿಂತ ಮಕ್ಕಳು ಸೃಜನಶೀಲ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲಾಗುತ್ತಿದೆ ಎಂದು ಜಾಕೋಬ್ ತಿಳಿಸಿದ್ದಾರೆ.



ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಗುವುದು. ಆದರೆ, ಬೆಂಗಳೂರಿನಂತಹ ಮಹಾ ನಗರದಲ್ಲಿ ತಂದೆ-ತಾಯಿ ಇಬ್ಬರು ಉದ್ಯೋಗಿಗಳಾಗಿರುವುದರಿಂದ ಮಕ್ಕಳು ಶಾಲೆ ಬರುವ ಮುನ್ನ ಮತ್ತು ಶಾಲೆಯಿಂದ ಹೋದ ಬಳಿಕ ಅವರ ನೋಡಿಕೊಳ್ಳುವವರು ಯಾರು ಎಂಬ ಪ್ರಶ್ನೆ ಕಾಡುತ್ತಿದೆ. ಅಂತಿಮವಾಗಿ ಶಾಲೆಗಳನ್ನು ನಡೆಸಲು ಸರಕಾರ ನಿರ್ಧರಿಸುವ ಮಾನದಂಡವನ್ನು ನೋಡಿಕೊಂಡು ತೀರ್ಮಾನಿಸಲಾಗುವುದು.

-ಪ್ರೊ ಡಿ ಪಿ. ಕೃಷ್ಣ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ



ಮೊದಲಿನಿಂದಲೂ ಶಾಲೆ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗಿದೆ. ಮುಂದೆಯೂ ಇನ್ನಷ್ಟು ಹೆಚ್ಚಿನ ಮುತುವರ್ಜಿ ವಹಿಸಲಾ ಗುವುದು. ಎಲ್ಲಾ ಮಕ್ಕಳಿಗೂ ಮಾಸ್ಕ್ ಹಾಗೂ ಸ್ಯಾನಿಟೈಸರ್ ಹಾಕುವುದು ಕಡ್ಡಾಯ. ಆದರೆ ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ಬಗ್ಗೆ ಚಿಂತಿಸಲಾಗುತ್ತಿದೆ. ಸರಕಾರ ನಿರ್ಧಾರ ಕೈಗೊಂಡ ಬಳಿಕ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗಲಿದೆ.

-ಕೆ.ಪೂರ್ಣಿಮಾ ಶ್ರೀನಿವಾಸ್ ಸಿಇಒ, ಸೀ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್

ಪೇರೆಂಟ್ಸ್ ಏನೆನ್ನುತ್ತಾರೆ?

ಸದ್ಯದ ಪರಿಸ್ಥಿತಿಯಲ್ಲಿ ಮೂರು ಪ್ರಮುಖ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ.

ಕೊರೊನಾ ಯಾವಾಗ ಮುಗಿಯುತ್ತದೆ?

ಮಕ್ಕಳಿಗೆ ಶಾಲೆ ಪ್ರಾರಂಭವಾಗುವುದು ಯಾವಾಗ?

ಕೊರೊನಾ ಮುಗಿದ ಮೇಲೆ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಮಕ್ಕಳ ಆರೋಗ್ಯ ಮತ್ತು ಸುರಕ್ಷತೆ ಹೇಗೆ? ಎನ್ನುವುದು. ಈಗ ಮಕ್ಕಳ ವಿದ್ಯಾಭ್ಯಾಸದ ಜತೆಗೆ ಅವರ ಆರೋಗ್ಯ ರಕ್ಷಣೆಯ ಕುರಿತು ಹೆಚ್ಚಿನ ಕಾಳಜಿವಹಿಸಬೇಕಿದೆ. ಈ ನಿಟ್ಟಿನಲ್ಲಿ ಮಕ್ಕಳಲ್ಲಿ ಈಗಿನಿಂದಲೇ ಸ್ವಚ್ಛತೆ ಮತ್ತು ಮುನ್ನೆಚ್ಚರಿಕೆಯ ಬಗ್ಗೆ ಅರಿವು ಮೂಡಿಸಬೇಕಿದೆ. ಆದರೆ ಅಂಗನವಾಡಿ, ಒಂದು, ಎರಡನೇ ತರಗತಿಗೆ ಹೋಗುವಂತಹ ಪುಟ್ಟ ಮಕ್ಕಳಲ್ಲಿ ಸ್ವಚ್ಛತೆ, ಸಾಮಾಜಿಕ ಅಂತರ ಹಾಗೂ ಮಾಸ್ಕ್‌ಗಳ ಬಗ್ಗೆ ಅರಿವು ಮೂಡಿಸುವುದು ಕಷ್ಟ. ಹಾಗಾಗಿ ಎಲ್ಲಾ ಮಕ್ಕಳ ಹಾಗೂ ಶಿಕ್ಷಕರ ಆರೋಗ್ಯ ದೃಷ್ಟಿಯಿಂದ ಶಾಲೆ ಪ್ರಾರಂಭವಾದ ಬಳಿಕ, ಪ್ರತಿ ದಿನ ಪ್ರಾಥಮಿಕ ಆರೋಗ್ಯ ತಪಾಸಣೆ ನಡೆಸಬೇಕು. ನಂತರ ಶಾಲೆಯ ಒಳಗೆ ಪ್ರವೇಶಿಸಲು ಅವಕಾಶ ಕೊಡಬೇಕು. ಮಕ್ಕಳಿಗೆ ಮರುಬಳಕೆ ಮಾಡಬಹುದಾದ ಮಾಸ್ಕ್ ಕಡ್ಡಾಯವಾಗಿ ಧರಿಸುವಂತೆ ಸೂಚನೆ ನೀಡಬೇಕು. ಶಾಲಾ ಆವರಣ ಹಾಗೂ ತರಗತಿಗಳನ್ನು ನಿತ್ಯವೂ ರೋಗಾಣು ಮುಕ್ತ ಔಷಧಗಳನ್ನು ಸಿಂಪಡಿಸಿ ಸ್ವಚ್ಛಗೊಳಿಸಬೇಕು. ಮಕ್ಕಳು ಸ್ಯಾನಿಟೈಸರ್ ಬಾಟಲ್ ಅನ್ನು ಕೊಂಡೊಯ್ಯ ಬೇಕು. ಮೂಗು, ಬಾಯಿ, ಕಣ್ಣು ಮುಖ ಮುಟ್ಟುವ ಮೊದಲು ಸ್ಯಾನಿಟೈಸರ್‌ನಿಂದ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳುವಂತೆ ಸೂಚಿಸಬೇಕು. ಈ ವಿಷಯಗಳ ಕುರಿತು ಎಲ್ಲಾ ಪೋಷಕರು ಮತ್ತು ಶಾಲಾ ಆಡಳಿತ ಮಂಡಳಿಗಳು ಸಹ ಒಮ್ಮತ ಅಭಿಪ್ರಾಯ ಹೊಂದಿದಾಗ ಮಾತ್ರ ಮುಂಬರುವ ಸಮಸ್ಯೆಗಳನ್ನು ಮೊದಲೇ ತಡೆಯಬಹುದು.



| ದಿವ್ಯಾ ಸಂತೋಷ್ ಬೆಂಗಳೂರು

ಪ್ರಜಾವಾಣಿ ಸೋಮವಾರ • ಮೇ 11, 2020

‘ಮದ್ಯ ಮಾರಾಟ ನಿಲ್ಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಾಕ್‌ಡೌನ್ ಅವಧಿಯಲ್ಲಿ ಸಂಪೂರ್ಣ ಸ್ಥಗಿತವಾಗಿದ್ದ ಮದ್ಯಮಾರಾಟವನ್ನು ಆರ್ಥಿಕ ಸಂಕಷ್ಟದ ಕಾರಣ ಮತ್ತೆ ಆರಂಭಿಸಿದ್ದು ಸರಿಯಲ್ಲ. ಸಮಾಜ ಮತ್ತು ಕುಟುಂಬದಲ್ಲಿ ಶಾಂತಿ ನೆಲೆಸಬೇಕಾದರೆ ಮದ್ಯ ಮಾರಾಟವನ್ನು ಸಂಪೂರ್ಣ ಸ್ಥಗಿತಗೊಳಿಸಬೇಕು’ ಎಂದು ಹಲವಾರು ಸಂಘಟನೆಗಳ ಪ್ರಮುಖರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬೆಂಗಳೂರು ಪರಿಸರ ಪ್ರತಿಷ್ಠಾನದ ಅ.ನಾ.ಯಲ್ಲಪ್ಪ ರೆಡ್ಡಿ, ಗ್ರಾಮ ಸೇವಾ ಸಂಘದ ಪ್ರಸನ್ನ, ಕರ್ನಾಟಕ ರಾಜ್ಯ ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್, ಕಬ್ಬು ಬೆಳೆಗಾರರ ಸಂಘದ ಕುರುಬೂರು ಶಾಂತಕುಮಾರ್, ಪ್ರಾಂತ ರೈತ ಸಂಘದ ಜೆ.ಸಿ. ಬಯ್ಯಾ ರೆಡ್ಡಿ, ದಲಿತ ಸಂಘರ್ಷ ಸಮಿತಿಯ ಲಕ್ಷ್ಮೀನಾರಾಯಣ ನಾಗವಾರ, ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಸಹಿತ ಹಲವರು ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

‘ಲಾಕ್‌ಡೌನ್ ಅವಧಿಯಲ್ಲಿ ಮದ್ಯ ಮಾರಾಟ ನಿಷೇಧದಿಂದಾಗಿ ಲಕ್ಷಾಂತರ ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದವು. ಜನರ ಆರೋಗ್ಯ ಸುಧಾರಿಸಿತ್ತು, ಕುಟುಂಬಗಳಲ್ಲಿ, ಸಮಾಜದಲ್ಲಿ ಹಿಂಸೆ, ದೌರ್ಜನ್ಯಗಳು ಬಹುತೇಕ ನಿಂತೇ ಹೋಗಿದ್ದವು. ಅಪರಾಧಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿತ್ತು’ ಎಂದು ಅವರು ಹೇಳಿದ್ದಾರೆ.

‘ಈಗ ಅದೆಲ್ಲವೂ ನುಚ್ಚು ನೂರಾಗಿದೆ. ಸರ್ಕಾರದ ಬೊಗ್ಗಸಕ್ಕೆ ಆದಾಯ ಬೇಕು ಎನ್ನುವ ಕಾರಣಕ್ಕೆ ಲಾಕ್‌ಡೌನ್ ಇನ್ನೂ ಮುಗಿಯದೇ ಇರುವಾಗಲೇ ರಾಜ್ಯದಾದ್ಯಂತ ಮದ್ಯದಂಗಡಿಗಳನ್ನು ತೆರೆಯಲಾಗಿದೆ. ಮತ್ತೆ ಹಿಂಸೆ, ದೌರ್ಜನ್ಯ, ಅಪರಾಧಗಳು ತಾಂಡವವಾಡುತ್ತಿವೆ. ರೋಗ ನಿರೋಧಕತೆ ಬೆಳೆಸಿಕೊಳ್ಳಬೇಕಾದ ಜನ ಮದ್ಯಪಾನದಿಂದ ಮತ್ತಷ್ಟು ದುರ್ಬಲರಾಗಿ ಕೋವಿಡ್‌ಗೆ ಸುಲಭದ ತುತ್ತಾಗುವ ಅಪಾಯ ಇದೆ’ ಎಂದು ಬೊಟ್ಟುಮಾಡಿ ತೋರಿಸಿದ್ದಾರೆ.

ಇತರ ಹಲವು ಸಂಘಟನೆಗಳ ಪ್ರಮುಖರಾದ ಬಡಗಲಪುರ ನಾಗೇಂದ್ರ, ಜೆ.ಎಂ.ವೀರಸಂಗಯ್ಯ, ವಿ.ನಾಗರಾಜ್, ಮಾವಳ್ಳಿ ಶಂಕರ್, ಎನ್.ನಾಗರಾಜ್, ವೊಡೆ ಪಿ.ಕೃಷ್ಣ, ಬಸವರಾಜ ಗುರಿಕಾರ, ಎಲ್.ಕಾಳಪ್ಪ, ಆಲಿಬಾಬಾ, ಪ್ರೊ.ಹನುಮಂತು, ಡಾ.ಗೋಪಾಲ ದಾಬಡೆ ಅವರೂ ಪತ್ರಕ್ಕೆ ಸಹಿ ಹಾಕಿದ್ದಾರೆ.

ಸಂಯುಕ್ತ ಕರ್ನಾಟಕ 17 ಮಾರ್ಚ್ 2020 ಮಂಗಳವಾರ

ನನ್ನ ಅನುಭವಕ್ಕೆ ಕೆಲಸ ಬೇಕು



ಪಿಯುಸಿ ಮುಗಿಸಿದ ನಂತರ, ಹೊಟ್ಟೆಪಾಡಿನ ಕಡೆಗೆ ಗಮನ ಕೊಡಲೇ ಬೇಕಿತ್ತು. ದುಡ್ಡನ್ನು ಒಟ್ಟುಗೂಡಿಸಿಕೊಂಡು ನೇರಾನೇರ, ಪರಿಚಯವೇ ಇಲ್ಲದ ಬೆಂಗಳೂರಿಗೆ ಬಂದಿಳಿದು ಬಿಟ್ಟೆ. ನಿಜಕ್ಕೂ ಇಲ್ಲಿನ ಜನದಟ್ಟಣೆ, ಅಪರಿಚಿತರ ಸಾಗರ ನೋಡಿ ಅಕ್ಷರಶ: ಗಾಬರಿ ಆಗಿಬಿಟ್ಟೆ.

ನಂಬುವುದು ಬಿಡುವುದು ನಿಮಗೆ ಬಿಟ್ಟದ್ದು. ಎರಡು–ಮೂರು ಧಿನ ಡಾಕ್ಟರ್ ರಾಜಕುಮಾರ್ ಅವರ ಮನೆಯ ಹತ್ತಿರ ಎಡತಾಕಿದೆ. ಅವರನ್ನು ಕಾಣಲಾಗಲಿಲ್ಲ.

ಬಸ್ಸ್ಟ್ಯಾಂಡಿಗೆ ಬಂದು ಅಲ್ಲೇ ಮಲಗುತ್ತಿದ್ದೆ. ಬೆಳಗ್ಗೆ ಸುಲಭ್ ಶೌಚಾಲಯದಲ್ಲಿ ಸ್ನಾನ ಮುಗಿಸಿ, ಬೀದಿ ಬದಿಯಲ್ಲಿ ತಿಂಡಿ ತಿನ್ನುವುದು, ನಂತರ ಕೆಲಸಕ್ಕಾಗಿ ಕಲಿಯುವುದು ಅಭ್ಯಾಸವಾಗಿ ಹೋಯಿತು.

ಈ ಮಧ್ಯೆ ಇದ್ದ ಬದ್ದದ್ದೆಲ್ಲ ಪಿಕ್ ಪ್ಯಾಕೆಟ್ ಆಗಿ ಹೋಯ್ತು, ಕಂಗಾಲಾಗಿ ಬಿಟ್ಟೆ. ಸನ್ಮಾನ್ ಹೋಟೆಲಿನಲ್ಲಿ ಕೊಟ್ಟ ಕೆಲಸ ಮಾಡಿದೆ. ತಿಂಡಿ, ಊಟ ಮತ್ತು ನಿದ್ದೆಗೆ ಜಾಗ ಆಯ್ತು. ಉಳಿದ ಸಮಯದಲ್ಲಿ ಕನಸಿನ ಬೆನ್ನೇರಿ ಕೆಲಸದ ಹುಡುಕಾಟ, ಸುತ್ತಾಟ' ಕೊಪ್ಪಳ ಜಿಲ್ಲೆಯ ಹನುಮಸಾಗರ ಗ್ರಾಮದ ನಿವಾಸಿ ಶಿವಪುತ್ರ ಕೆ ವೈ ಮುಚ್ಚು ಮರೆ ಇಲ್ಲದೆ ಹೇಳುತ್ತಲೇ ಇದ್ದರು.

▪ ಆದರೂ ಒಂದೊಳ್ಳೆ ಲಿಂಕ್ ಸಿಕ್ಕಿತು ?

ಮನಸ್ಸು ಸರಿ ಇದ್ದರೆ , ಪ್ರಾಮಾಣಿಕತೆ ಇದ್ದರೆ ಅದು ಸಿಕ್ಕೇ ಸಿಕ್ಕುತ್ತದೆ ಸರ್. ಯಾರೋ, ನಿರ್ದೇಶಕ ಎಂ ಡಿ ಕೌಶಿಕ್ ಅವರನ್ನು ಪರಿಚಯಿಸಿದರು. 'ತಿರುವುಗಳು' ಎನ್ನುವ ಅವರ ಧಾರಾವಾಹಿಯಲ್ಲಿ ಕೆಲಸ ಪ್ರಾರಂಭಿಸಿದೆ. ಅದು ನನ್ನನ್ನು ಇಲ್ಲಿಯವರೆವಿಗೂ ಕರೆತಂದಿದೆ ಎನ್ನುವುದಕ್ಕೆ ಸಂತೋಷವಾಗುತ್ತಿದೆ.

▪ ಹಂತ ಹಂತವಾಗಿ ಬೆಳೆದಿದ್ದೀರಿ ?

ಖಂಡಿತ ಹೌದು. ಸೆಟ್ ಬ್ವಾಯ್ ಆಗಿ, ಸಹಾಯಕ ಛಾಯಾಗ್ರಾಹಕನಾಗಿ, ಸಹ ಛಾಯಾಗ್ರಾಹಕನಾಗಿ, ಸೌಂಡ್ ರೆಕಾರ್ಡಿಸ್ಟ್ ಆಗಿ, ಆಗಾಗ್ಗೆ ಅವಕಾಶ ದೊರೆತ ಕಡೆ ನಟನೆಯನ್ನು ಮಾಡುತ್ತಾ, ಈಗ ಸ್ವತಂತ್ರವಾಗಿ ಛಾಯಾಗ್ರಹಣ ಮಾಡುತ್ತಿದ್ದೇನೆ. ಪ್ರತಿಯೊಂದು ಅಗುಳಿನ ಬೆಲೆಯೂ ನನಗೆ ಬಹಳ ಚೆನ್ನಾಗಿ ಗೊತ್ತಿದೆ.

▪ ನಡೆದು ಬಂದ ದಾರಿ ಹಿಂತಿರುಗಿ ನೋಡಿದಾಗ ?

'ತನಿಖೆ', 'ಚಿನ್ನ ನೀ ನಗುತಿರು' ನಾನು ಪುಟ್ಟದಾಗಿ ಕೆಲಸ ನಿರ್ವಹಿಸಿದ ಸಿನಿಮಾಗಳು. ಇತ್ತೀಚೆಗೆ ಡೀಲ್, ಜಾಗೃತಿ, ಆರೋಹಣ, ಲೈಟಾಗಿ ಲವ್ವಾಗಿದೆ ಚಿತ್ರಗಳ ಛಾಯಾಗ್ರಹಣದ ಜವಾಬ್ದಾರಿಯನ್ನು ಕೂಡಾ ಹೊತ್ತಿದ್ದೆ. ಕಿರುತೆರೆ ಮತ್ತು ಬಹಳಷ್ಟು ಸಿನಿಮಾಗಳಿಗೆ ಎರಡು ಯೂನಿಟ್ ಇದ್ದಾಗ, ಪ್ಯಾಚ್ ವರ್ಕ್‌ಗಳು ಇದ್ದಾಗ ಬಳಸಿಕೊಳ್ಳುತ್ತಲೇ ಇರುತ್ತಾರೆ.

▪ ಕಿರುತೆರೆಯ ಸಾಧನೆ ಏನು?

ಅಲ್ಲೂ ಅಷ್ಟೇ. ನಟನೆಯ ಜೊತೆಗೆ ಸಹ ಛಾಯಾಗ್ರಹಣ, ನಂತರ ಛಾಯಾಗ್ರಾಹಕನಾಗಿ ಜೀವನ ಪೂರೈಸಿದ್ದೇನೆ. ಗಂಗೋತ್ರಿ, ರಂಗೋಲಿ, ರಥಸಪ್ತಮಿ, ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ, ಪುಟ್ಟಗೌರಿ ಮದುವೆ, ಯಾರೇ ನೀ ಮೋಹಿನಿ ಹೀಗೆ ಈ ದಾರಿ ವಿಸ್ತಾರವಾಗಿಯೂ ಇದೆ, ಅಷ್ಟೇ ದೂರವಾಗಿಯೂ ಇದೆ.

ಬಹಳಷ್ಟಕ್ಕೆ ಪ್ಯಾಚ್ ವರ್ಕ್, ಸಾವಿರಾರು ಪ್ರಕರಣಗಳಿಗೆ ಛಾಯಾಗ್ರಾಹಕನಾಗಿ ಕೆಲಸ ಮಾಡಿದ್ದೇನೆ.

ತುಂಬಾ ಸಾಕ್ಷ್ಯಚಿತ್ರಗಳಿಗೆ ಛಾಯಾಗ್ರಾಹಕನಾಗಿಯೂ ದುಡಿದಿರುವುದನ್ನು ನೆನಪು ಮಾಡಿಕೊಳ್ಳಲೇಬೇಕು.

ಈ ಪೈಕಿ ಶೇಷಾದ್ರಿಪುರಂ ಕಾಲೇಜಿನ ಗೌರವ ಕಾರ್ಯದರ್ಶಿಗಳಾದ ವೂಡೆ ಪಿ ಕೃಷ್ಣ ಅವರು ಕುರಿತಾದ ಸಾಕ್ಷ್ಯಚಿತ್ರಕ್ಕೆ ಆತ್ಮೀಯ ಪುಟ್ಟಸ್ವಾಮಿ ಅವರು ಛಾಯಾಗ್ರಹಣ ಮಾಡಿಸಿದ್ದರು. ಅದು ಸೊಗಸಾಗಿ ಮೂಡಿಬಂದಿದೆ.

▪ ಅನಿಸಿಕೆ ಏನು ?

ನಾನೊಬ್ಬ ಪಕ್ಕಾ ಛಾಯಾಗ್ರಾಹಕ. ನಂಬಿದ ನಿರ್ಮಾಪಕ, ನಿರ್ದೇಶಕರಿಗೆ ಹೆಸರು ತರುವಂತಹ ವೃತ್ತಿಪರ. ಶಿವಪುತ್ರ ಹನುಮಸಾಗರ ಅಂದಾಕ್ಷಣ ನಿರ್ಮಾಪಕರು ಒಳ್ಳೆಯ ಕೆಲಸಗಾರ ಎನ್ನಬೇಕು. ಹಾಗಿದೆ ನಾನು ನಡೆದು ಬಂದ ಹಾದಿ, ಗಳಿಸಿರುವ ಕೆಲಸದ ಅನುಭವ.

ನನಗೆ ಇನ್ನೊಂದಿಷ್ಟು ಒಳ್ಳೆಯ ಹಾಗೂ ನಿರಂತರವಾದ ಕೆಲಸ ಬೇಕು. ಅದನ್ನು ಕೊಟ್ಟವರಿಗೆ ನಾನೆಂದು ಚಿರಋಣಿ ಆಗಿರುತ್ತೇನೆ. ಅದಷ್ಟೇ ನನ್ನ ವಿನಮ್ರ ಮನವಿ.

ಶಾಸ್ತ್ರೀಯ ಭಾಷಾ ಹೋರಾಟದಲ್ಲಿ ದೇಜಗೌ ಅವರಿಗೆ ಬಲಗೈ ಆಗಿದ್ದ ಡಾ|| ಎಂ.ಜಿ.ಆರ್. ಅರಸು ಅವರಿಗೆ ಆತ್ಮೀಯ ಸನ್ಮಾನ



ಡಾ|| ಅಂಬಾ ಅರಸು ಮತ್ತು ಡಾ|| ಎಂ.ಜಿ.ಆರ್. ಅರಸು ದಂಪತಿಗಳಿಗೆ ಸನ್ಮಾನ, ಡಾ. ಕಮಲಾ ಹಂಪನಾ, ರತ್ನಾ ಹಾಲಪ್ಪಗೌಡ, ಎಂ. ತಿಮ್ಮಯ್ಯ, ಡಾ. ವೂಡೇ ಪಿ. ಕೃಷ್ಣ, ಕೆ.ರಾಜಕುಮಾರ್ ಮತ್ತು ಪಿ.ಜಿ.ಆರ್. ಸಿಂಧ್ಯಾ ಇದ್ದಾರೆ.

ಬೆಂಗಳೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ 23-2-2020ರಂದು ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಏರ್ಪಡಿಸಿದ್ದ ಸಂಭ್ರಮದ ಸಮಾರಂಭದಲ್ಲಿ 75 ತುಂಬಿದ ಹಾಗೂ ದಾಂಪತ್ಯ ಜೀವನದ 50 ವರ್ಷಗಳನ್ನು ಪೂರೈಸಿದ ಮೈಸೂರಿನ ಡಾ|| ಎಂ.ಜಿ.ಆರ್. ಅರಸು ಮತ್ತವರ ಪತ್ನಿ ಡಾ|| ಅಂಬಾ ಅರಸು ದಂಪತಿಗಳನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಹನಿಗವಿತೆಗಳ ಸರದಾರಿಣಿ ಎಂದು ಖ್ಯಾತರಾದ ಪದ್ಮಾವತಿ ಚಂದ್ರು ಅವರ 'ನನ್ನ ಪ್ರೀತಿಯ ಭಾವನೆಗಳು' ಚುಟುಕು ಸಂಕಲನ ಲೋಕಾರ್ಪಣೆಗೊಂಡಿತು. ಎಂ. ವೀರಶೇಖರಸ್ವಾಮಿ ನಿರೂಪಿಸಿದ ಕಾರ್ಯಕ್ರಮ ಗಿರಿ ವಾಸವಿ ಮಂಡಳಿಯ ಕಾರ್ಯಕರ್ತರು ನಾಡ ಗೀತೆ ಹಾಡುವುದರೊಂದಿಗೆ ಆರಂಭವಾಯಿತು. ಬೆಂ.ಜಿ.ಚು. ಸಾ. ಪರಿಷತ್ತಿನ ಅಧ್ಯಕ್ಷ ಶ್ರೀ.ರಾ.ವಿಜಯಸಮರ್ಥ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಹಿರಿಯ ಸಾಹಿತಿ, ನಾಡೋಜ ಡಾ. ಕಮಲಾಹಂಪನಾ ಸಮಾರಂಭವನ್ನು ಉದ್ಘಾಟಿಸಿದರು. ದಿನಕರ ದೇಸಾಯಿ, ಎಂ. ಅಕಬರ್ ಆಲಿ ಮೊದಲಾದ ದಿಗ್ಗಜರು ಕಟ್ಟಿ ಬೆಳೆಸಿದ ಚುಟುಕು ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಡಾ|| ಎಂಜಿ.ಆರ್.ಅರಸು, ಶ್ರೀ.ರಾ. ವಿಜಯಸಮರ್ಥ, ರತ್ನಾ ಹಾಲಪ್ಪ ಗೌಡ ಮೊದಲಾದವರನ್ನು ಅಭಿನಂದಿಸಿದರು.

ಮುಖ್ಯ ಅತಿಥಿಯಾಗಿದ್ದ ಮಾಜಿ ಸಚಿವ, ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯಮುಖ್ಯಸ್ಥ ಪಿ.ಜಿ.ಆರ್.ಸಿಂಧ್ಯಾ 'ಅರಸುಅವರು ಚುಟುಕು ಸಾಹಿತ್ಯ ಪರಿಷತ್ತಿನ ಪಯಣದಲ್ಲಿ ವಿಲೀನವಾಗಿದ್ದಾರೆ. ಜಾತ್ಯತೀತ ಮನೋಭಾವದ ಅವರು ಯಾವ ರಾಜಕೀಯ ಪಕ್ಷದ ಜೊತೆಗೂ ತಮ್ಮನ್ನು ಗುರ್ತಿಸಿಕೊಂಡವರಲ್ಲ. ಎಲ್ಲಾ ಪಕ್ಷಗಳಲ್ಲೂ ಅವರ ಗೆಳೆಯರಿದ್ದಾರೆ. ಡಾ. ದೇಜಗೌ ಅವರ ಬಲಗೈನಂತಿದ್ದ ಅರಸು ಕನ್ನಡ ಶಾಸ್ತ್ರೀಯ ಭಾಷೆ ಹೋರಾಟದಲ್ಲಿ ವಹಿಸಿದ ಪಾತ್ರ ಅವಿಸ್ಮರಣೀಯ. ಹಿರಿಯ ಸಾಹಿತಿ, ಪತ್ರಕರ್ತರಾಗಿದ್ದ ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರಿಗೂ ಇವರು ಬಹಳ ಆಪ್ತರಾಗಿದ್ದರು' ಎಂದು ಹೇಳಿದರು.

ಅಭಿನಂದನಾ ನುಡಿಗಳನ್ನಾಡಿದ ಹಿರಿಯ ಕನ್ನಡ ಪರ ಚಿಂತಕ, ಸಾಹಿತಿ ಕೆ. ರಾಜಕುಮಾರ್ 'ಕಟ್ಟುವಿಕೆ ಅರಸು ಅವರ ರಕ್ತದಲ್ಲೇ ಬಂದಿದೆ. ತಾವೊಬ್ಬರೇ ಬೆಳೆಯದೆ ಇತರರನ್ನೂ ಬೆಳೆಸಿದ್ದಾರೆ ಅವರು ಸುದೀರ್ಘ ಸಾರ್ವಜನಿಕ ಜೀವನದಲ್ಲಿ ಸ್ವಾರ್ಥಿಯಾಗದ ನಿಷ್ಕಾಮ ಕರ್ಮಯೋಗಿ. ಅಂಬಾ ಅರಸು ತಮ್ಮ ಪತಿ ಡಾ|| ಎಂ.ಜಿ.ಆರ್. ಅರಸು ಅವರ ಬದುಕಿನ ಸೆಲೆಯಾಗಿದ್ದಾರೆ. ಮರಿಮಕ್ಕಳನ್ನು ಕಂಡರೂ ಈ ದಂಪತಿಗಳು ಆರೋಗ್ಯವಂತರಾಗಿದ್ದಾರೆ. ಹೀಗೆಯೇ ಆರೋಗ್ಯವಂತರಾಗಿ ನೂರ್ಕಾಲ ಕನ್ನಡ ಸೇವೆ ಮಾಡುತ್ತಿರಲಿ' ಎಂದು ಹಾರೈಸಿದರು.

ಗಣ್ಯ ಅತಿಥಿಯಾಗಿದ್ದ ಕ.ಕ್ರಿ ಮತ್ತು ವಾ. ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಮಾತನಾಡಿ, ಅತ್ಯಂತ ಸಮರ್ಥರನ್ನು ಸನ್ಮಾನಿಸುವ ನೆಪದಲ್ಲಿ ಅತ್ಯಂತ ಸಮರ್ಥರನ್ನು ವೇದಿಕೆ ಮೇಲೆ ಸೇರಿಸಿರುವ ವಿಜಯ ಸಮರ್ಥರ, ಸಾಮರ್ಥ್ಯ ಮೆಚ್ಚುವಂತಹುದು ಎಂದರಲ್ಲದೆ, ಡಾ|| ಅರಸು ಅವರು ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.

'ನನ್ನ ಪ್ರೀತಿಯ ಭಾವನೆಗಳು', ಚುಟುಕು ಸಂಕಲನದ ಕರ್ತೃ ಪದ್ಮಾವತಿ ಚಂದ್ರು ತಮ್ಮ ಸಂಕಲನ ಹೊರಬರಲು ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದ ಸಮರ್ಪಿಸಿದರು. ಸಂಕಲನದ ಅನೇಕ ಚುಟುಕುಗಳನ್ನು ವಾಚಿಸಿದರು.

ಹನಿಗವನಗಳಿಗೇ ಮಿಸಲಾದ ಕೌಸ್ತುಭ ಪತ್ರಿಕೆಯ ಸಂಪಾದಕಿ ರತ್ನಾ ಹಾಲಪ್ಪ ಗೌಡ ಚುಟುಕು ಸಾಹಿತ್ಯ ಪರಿಷತ್ತನ್ನು ಸೃಜನಾತ್ಮಕವಾಗಿ ಬೆಳೆಸುತ್ತಿರುವ ಡಾ|| ಅರಸು ಅವರನ್ನು ಅಭಿನಂದಿಸಿದರು. 'ಅವರ ಸಂಪೂರ್ಣ ಸಹಾಯ, ಸಹಕಾರದಿಂದಲೇ ನಾನು ಅಮೆರಿಕಾ ಮತ್ತಿತರ ದೇಶಗಳಲ್ಲಿ ಚುಟುಕು ಕವಿಗೋಷ್ಠಿ ನಡೆಸಿದ್ದೇನೆ' ಎಂದು ಹೇಳಿದರು.

ತಮ್ಮನ್ನು ಆತ್ಮೀಯವಾಗಿ ಸನ್ಮಾನಿಸಿದುದಕ್ಕೆ ಶ್ರೀ.ರಾ..ವಿಜಯಸಮರ್ಥ ಮತ್ತು ಸಂಗಾತಿಗಳಿಗೆ ಕೃತಜ್ಞತೆ ಸಮರ್ಪಿಸಿದ ಡಾ|| ಎಂ.ಜಿ.ಆರ್. ಅರಸು 'ಚುಟುಕು ಸಾಹಿತ್ಯ ಪರಿಷತ್ತನ್ನು ಕಟ್ಟಲು ತಮಗೆ ಮಾರ್ಗದರ್ಶನ ಮಾಡಿದ ದೇ.ಜ.ಗೌ, ಎಚ್.ಎಸ್.ಕೆ., ಅಕಬರ್ ಆಲಿ ಮೊದಲದ ದಿಗ್ಗಜರನ್ನು ಸ್ಮರಿಸಿಕೊಂಡರು. 'ಜಗದ ಜಾಡಮಾಲಿಗಳು ಚುಟುಕು ಸಾಹಿತಿಗಳು. ಚುಟುಕು ಸಾಹಿತ್ಯ ಮುದುಡಿದ ಮನಸ್ಸುಗಳನ್ನು ಅರಳಿಸುತ್ತದೆ' ಎಂದರಲ್ಲದೆ, ಮನಸ್ಸುಗಳಲ್ಲಿ ಗುಮಾನಿಗೆ ಅವಕಾಶ ಕೊಡಬೇಡಿ ಎಂದು ಚುಟುಕು ಕವಿಗಳಿಗೆ ಕಿವಿ ಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಇಡೀ ಬದುಕಿನ ಸಾರವನ್ನು ತಮ್ಮ ಚುಟುಕು ಭಾಷಣದಲ್ಲಿ ವ್ಯಕ್ತ ಪಡಿಸಿದ ಡಾ|| ಅರಸು ಅವರನ್ನು ಅಭಿನಂದಿಸಿದರು. ಹಿತ ಮಿತವಾದ ಆಹಾರವಿದ್ದಂತೆ, ಕಡಿಮೆ ಶಬ್ಧಗಳಲ್ಲಿ ಮನಸ್ಸಿಗೆ ಹಿತ ಉಂಟು ಮಾಡುವುದೇ ಚುಟುಕು ಸಾಹಿತ್ಯ ಇಂತಹ ಸಾಹಿತ್ಯಕ್ಕೆ ಸಂಬಂಧಪಟ್ಟ ಒಳ್ಳೆಯ ಮಾತುಗಳನ್ನು ಕೇಳಿ ನನಗೆ 10 ಪುಸ್ತಕಗಳನ್ನು ಓದಿದಷ್ಟೇ ಆನಂದ ಉಂಟಾಗಿದೆ ಎಂದು ಹೇಳಿದರು.

ಹಿರಿಯ ಸಾಹಿತಿ ಸಿಸಿರಾ ನಿರ್ವಹಿಸಿದ ಚುಟುಕು ಕವಿಗೋಷ್ಠಿಯಲ್ಲಿ ಕೋ.ಲ. ರಂಗನಾಥರಾವ್, ಪತ್ತಂಗಿ ಎಸ್. ಮುರಳಿ, ಮ. ಸುರೇಶ್‌ಬಾಬು, ಬಿ. ಶೃಂಗೇಶ್ವರ, ಕುವರ ಯಲ್ಲಪ್ಪ ಮೊದಲಾದವರು ಸ್ವರಚಿತ ಚುಟುಕುಗಳನ್ನು ವಾಚಿಸಿದರು. ಲೀಲಾ ವಾಸುದೇವ್ 'ಚುಟುಕು ಸಾಹಿತ್ಯದ ಪಿತಾಮಹ ಚುಟುಕು ಬುದ್ಧಿಯ ಎಂ.ಜಿ.ಆರ್. ಅರಸು' ಶೀರ್ಷಿಕೆಯ ಕವನ ವಾಚಿಸಿದರು.

ವಿವಿಧ ಜಿಲ್ಲೆಗಳ ಚುಟುಕು ಕವಿಗಳು ಡಾ|| ಅರಸು ದಂಪತಿಗಳನ್ನು ವೈಯಕ್ತಿಕ ನೆಲೆಯಲ್ಲಿ ಸನ್ಮಾನಿಸಿದರು.

ವಿಜಯ ಕರ್ನಾಟಕ VK

ಸೋಮವಾರ, 2 ಮಾರ್ಚ್ 2020, ಬೆಂಗಳೂರು

ಗಾಂಧೀಜಿ ಸ್ಮರಣೆ ಕಾರ್ಯದಲ್ಲೂ ಜಿಲ್ಲಾಡಳಿತಗಳಲ್ಲಿ ನಿಧಾನಗತಿ

ಜಿಲ್ಲೆಗಳ ಗಾಂಧಿ ಭವನ ನಿರ್ಮಾಣಕ್ಕೆ ಗ್ರಹಣ

■ ಎನ್.ಪ್ರಸನ್ನಕುಮಾರ್ ಬೆಂಗಳೂರು ಗ್ರಾಮಾಂತರ
prasanna.kumar3@timesgroup.com

ಮಹಾತ್ಮ ಗಾಂಧೀಜಿ ವಿಚಾರಧಾರೆಗಳನ್ನು ಯುವ ಪೀಳಿಗೆಗೆ ಪ್ರಚುರಪಡಿಸಲು ಪ್ರತಿ ಜಿಲ್ಲೆಯಲ್ಲೂ ಗಾಂಧಿ ಭವನ ನಿರ್ಮಿಸುವ ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಗೆ ಗ್ರಹಣ ಹಿಡಿದಿದೆ.

ಪ್ರತಿ ಜಿಲ್ಲೆಯಲ್ಲೂ ಮೂರು ಕೋಟಿ ರೂ. ವೆಚ್ಚದಲ್ಲಿ ಗಾಂಧಿ ಭವನ ನಿರ್ಮಿಸುವ ಉದ್ದೇಶದಿಂದ 2016-17ನೇ ಸಾಲಿನ ಬಜೆಟ್‌ನಲ್ಲಿ ಗಾಂಧಿ ಭವನ ನಿರ್ಮಾಣಕ್ಕೆಂದು 90 ಕೋಟಿ ರೂ. ಮೊತ್ತದ ಯೋಜನೆ ಪ್ರಕಟಿಸಿ ನಂತರದ ವರ್ಷದಲ್ಲಿ ಅನುದಾನ ಕೂಡ ಬಿಡುಗಡೆಗೊಳಿಸಲಾಗಿತ್ತು. 25 ಜಿಲ್ಲೆಗಳಿಗೆ ತಲಾ 3 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಿದ್ದರೂ ಅನುಷ್ಠಾನಕ್ಕೆ ತರುವಲ್ಲಿ ಜಿಲ್ಲಾಡಳಿತಗಳು ಮುಂದಾಗಿಲ್ಲ.

ವಾಸ್ತು ಶಿಲ್ಪಿಗಳಿಂದ ನೀಲನಕ್ಷೆ

ಕೆಲವು ಜಿಲ್ಲೆಗಳಲ್ಲಿ ಬಿಡುಗಡೆಯಾಗಿರುವ ಅನುದಾನಕ್ಕೆ ಪೂರಕವಾಗಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದರೆ, ಕೆಲವು ಜಿಲ್ಲೆಗಳಲ್ಲಿ ಭೂಮಿ ಗುರುತಿಸುವ ಕಾರ್ಯಕ್ಕೆ ಜಿಲ್ಲಾಡಳಿತ ಆಸಕ್ತಿ ತೋರದ ಪರಿಣಾಮ ಅನುದಾನ ಜಿಲ್ಲಾಧಿಕಾರಿ ಖಜಾನೆಯಲ್ಲೇ ಉಳಿದಿದೆ. ಗಾಂಧಿ ಭವನ ಕಟ್ಟಡ ಯಾವ ಮಾದರಿಯಲ್ಲಿ ಇರಬೇಕು ಎಂದು ವಾಸ್ತು ಶಿಲ್ಪಿಗಳಿಂದ ನೀಲನಕ್ಷೆ ಸಿದ್ಧಪಡಿಸಿ, ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ಭವನದ ರೂಪುರೇಷೆ ಹೇಗಿರಬೇಕು ಎಂಬ ಸಂಪೂರ್ಣ ಚಿತ್ರಣವನ್ನು ಸಿದ್ಧಪಡಿಸಿಕೊಟ್ಟಿದ್ದರೂ ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅಧಿಕಾರಿಗಳು ಮಾತ್ರ ಆಸಕ್ತಿ ತೋರಿಲ್ಲ.

ಪ್ರಗತಿಯ ನೋಟ

ನಿವೇಶನ ಮಂಜೂರು ಮಾಡದ ಕಾರಣ ಕೆಲವು ಜಿಲ್ಲೆಗಳಲ್ಲಿ ಭವನ ನಿರ್ಮಾಣ ಕಾರ್ಯ ಇನ್ನೂ ಟೇಕಾಫ್ ಆಗಿಲ್ಲ. ಮೈಸೂರು, ಉಡುಪಿ ಜಿಲ್ಲೆಯಲ್ಲಿ ನಿವೇಶನ ಮಂಜೂರಾಗಿದ್ದರೂ 20 ಲಕ್ಷ ರೂ. ಮಾತ್ರ ಅನುದಾನ ಬಿಡುಗಡೆ ಆಗಿರುವುದರಿಂದ ಉಳಿದ ಅನುದಾನಕ್ಕಾಗಿ ಕಾಯಲಾಗುತ್ತಿದ್ದರೆ, ಬೀದರ್ ಜಿಲ್ಲೆಯಲ್ಲಿ 1 ಎಕರೆ ಜಾಗ ಮಂಜೂರಾಗಿದ್ದರೂ ಕಾಮಗಾರಿಯೇ ಆರಂಭಗೊಂಡಿಲ್ಲ.

ಚಾಮರಾಜನಗರ, ಕೋಲಾರ, ಧಾರವಾಡದಲ್ಲಿ ಕಟ್ಟಡದ ಅಂದಾಜು ವೆಚ್ಚದ ಅನುಮೋದನೆ ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿವೇಶನ ಮಂಜೂರಾಗಿದ್ದರೂ ಅದು ತಕರಾರು ಇರುವುದರಿಂದ ಬೇರೆ ನಿವೇಶನ ಒದಗಿಸುವಂತೆ ಜಿಲ್ಲಾಧಿಕಾರಿಗಳು ತಹಸೀಲ್ದಾರರಿಗೆ ಸೂಚಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಟ್ಟಡ ಕಾಮಗಾರಿ ಆರಂಭಿಸಬೇಕಿದೆ.



ಫಸ್ಟ್ ಬಳ್ಳಾರಿ

ಬಳ್ಳಾರಿ ಜಿಲ್ಲೆಯಲ್ಲಿ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದು ಕಾಂಪೌಂಡ್ ಹಾಗೂ ಇನ್ನಿತರ ಸಣ್ಣಪುಟ್ಟ ಕೆಲಸ ಬಾಕಿ ಇದ್ದು ಶೇ.80ರಷ್ಟು ಕಾಮಗಾರಿ ಮುಕ್ತಾಯಗೊಂಡಿದೆ. ಉತ್ತರಕನ್ನಡ ಜಿಲ್ಲೆಯ ಅಂಕೋಲದಲ್ಲಿರುವ ಗಾಂಧಿ ಸ್ಮಾರಕ ಭವನವನ್ನು ಅಭಿವೃದ್ಧಿಪಡಿಸಿ ಗಾಂಧಿ ಭವನವನ್ನಾಗಿ ಮಾರ್ಪಡಿಸುವಂತೆ ಜಿಲ್ಲಾಧಿಕಾರಿಗೆ ಶಿಫಾರಸು ಮಾಡಲಾಗಿದೆ.

ದೇಶದಲ್ಲೇ ಪ್ರಥಮ

ಗಾಂಧೀಜಿ ಅವರ 150ನೇ ಜಯಂತೋತ್ಸವದ ಆಚರಣೆ ವೇಳೆಗೆ (2019ರ ಅಕ್ಟೋಬರ್ 2ರೊಳಗೆ) ಎಲ್ಲಾ ಜಿಲ್ಲೆಗಳಲ್ಲೂ ಗಾಂಧಿ ಭವನ ನಿರ್ಮಿಸುವ ಯೋಜನೆಯನ್ನು ದೇಶದಲ್ಲೇ ಪ್ರಥಮ ಬಾರಿಗೆ ಕೈಗೆತ್ತಿಕೊಂಡಿರುವುದರ ಜೊತೆಗೆ ಗಾಂಧೀಜಿ ಅವರ ವಿಚಾರಧಾರೆಗಳನ್ನು ಪ್ರಚಾರ ಪಡಿಸುವುದರ ಜತೆಗೆ ಗಾಂಧೀಜಿ ಹೆಸರಿನಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ಏಕೈಕ ರಾಜ್ಯ ಕರ್ನಾಟಕ ಎಂದೇ ಹೇಳಲಾಗುತ್ತಿದೆ.

ನಿವೇಶನ ಗುರುತಿಸದ ಜಿಲ್ಲೆಗಳು

ಕಲಬುರಗಿ, ಯಾದಗಿರಿ, ಬಾಗಲಕೋಟೆ, ಗದಗ, ಮಂಡ್ಯ, ಚಿಕ್ಕಮಗಳೂರು, ಬೆಂಗಳೂರು ನಗರ, ರಾಮನಗರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ

ನಿರ್ಮಾಣ ಕಾರ್ಯ ಆರಂಭ

ರಾಯಚೂರು, ಕೊಪ್ಪಳ, ಬೆಳಗಾವಿ, ಹಾವೇರಿ, ಕೊಡಗು, ಹಾಸನ, ಚಿಕ್ಕಬಳ್ಳಾಪುರ, ದಾವಣಗೆರೆ ಜಿಲ್ಲೆ

ಗಾಂಧೀಜಿ ಅವರ ಹೆಸರಿನಲ್ಲಿ ಅತಿ ಹೆಚ್ಚು ಕಾರ್ಯಕ್ರಮ ಮಾಡುತ್ತಿರುವ ರಾಜ್ಯ ನಮ್ಮದು. ಮಹಾತ್ಮ ಗಾಂಧೀಜಿ ಅವರ 150ನೇ ಜಯಂತ್ಯುತ್ಸವ ಆಚರಣೆ ವೇಳೆಗೆ ಎಲ್ಲ ಜಿಲ್ಲೆಗಳಲ್ಲಿ ಗಾಂಧಿ ಭವನ ತೆರೆಯಬೇಕು ಎಂಬ ಮಹಾದಾಸೆಯಿಂದ ಸರಕಾರ 90 ಕೋಟಿ ರೂ. ಮೊತ್ತದ ಯೋಜನೆ ಘೋಷಿಸಿದ್ದರೂ ಜಿಲ್ಲಾಡಳಿತಗಳು ಮಾತ್ರ ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಳಂಬ ಮಾಡುತ್ತಿವೆ.

-ವೂಡೇ ಪಿ.ಕೃಷ್ಣ ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ



ಪ್ರಜಾ ಪ್ರಗತಿ

ಸಂಸ್ಕೃತದ ಭವಿಷ್ಯಕ್ಕಿಂತ ಸಂಸ್ಕೃತವೇ ಭವಿಷ್ಯ

ವೆಬಿನಾರ್ ಕಾರ್ಯಕ್ರಮದಲ್ಲಿ ಡಾ|| ವ್ರೂಡೆ ಪಿ ಕೃಷ್ಣನುಡಿ






ತುಮಕೂರು

ತುಮಕೂರು ನಗರದ ಗಂಗಸಂದ್ರದಲ್ಲಿರುವ ಶೇಷಾದ್ರಿಪುರಂ ಕಾಲೇಜಿನಲ್ಲಿ ರಾಷ್ಟ್ರೀಯ ಶಿಕ್ಷಣನೀತಿ-2020 ಮತ್ತು ಸಂಸ್ಕೃತ ಶಿಕ್ಷಣ ಎಂಬ ವಿಷಯದ ಬಗ್ಗೆ ರಾಷ್ಟ್ರಮಟ್ಟದ ವೆಬಿನಾರ್‌ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ|| ವ್ರೂಡೆ ಪಿ ಕೃಷ್ಣರವರು ಉಪಸ್ಥಿತರಿದ್ದು, ಉದ್ಘಾಟನ ಭಾಷಣದಲ್ಲಿ ಯಾವುದೇ ಒಂದು ದೇಶದ ಪ್ರಗತಿ ಮತ್ತುಏಕತೆಗೆಒಂದೇ ಭಾಷೆಯ ಅವಶ್ಯಕತೆ ಇದೆ. ಹೆಚ್ಚು ಹೆಚ್ಚು ಜನರು ಸಂಸ್ಕೃತವನ್ನು ಓದಿ ತಮ್ಮ ಜ್ಞಾನವನ್ನು ಬೆಳೆಸಿಕೊಂಡು ದೇಶದ ಉನ್ನತಿಗೆ ಶ್ರಮಿಸಬೇಕು ಎಂದುಹೇಳಿದರು. ಮುಂದುವರಿದು ಪ್ರಾದೇಶಿಕ ಭಾಷೆಗಳಲ್ಲಿ ಶೇ. 50 ಕ್ಕಿಂತ ಹೆಚ್ಚು ಪದಗಳು ಸಂಸ್ಕೃತಪದಗಳೇ, ಆದ್ದರಿಂದಸುಲಭವಾಗಿ ಆ ಆ ಭಾಷೆಗಳನ್ನು ಅರ್ಥ ಮಾಡಿಕೊಳ್ಳಬಹುದು ಎಂದು ಹೇಳಿದರು. ಸಂಸ್ಕೃತ ಪ್ರಮೋಶನ್ ಫೌಂಡೇಶನ್‌ನ ಟ್ರಸ್ಟೀ ಕಾರ್ಯದರ್ಶಿಗಳೂ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀ ಚಮೂ ಕೃಷ್ಣಶಾಸ್ತ್ರಿಯವರು ಮುಖ್ಯವಕ್ತಾರರಾಗಿ ಉಪಸ್ಥಿತರಿದ್ದರು. ಅವರು ಮಾತನಾಡಿ ರಾಷ್ಟ್ರೀಯ ಶಿಕ್ಷಣ ನೀತಿ-2020 ರಲ್ಲಿಸಂಸ್ಕೃತಕ್ಕೆ ಹೆಚ್ಚು ಒತ್ತುಕೊಡಲಾಗಿದೆ. ಸಂಸ್ಕೃತಕ್ಕೆ ಭವಿಷ್ಯವಿಲ್ಲ ಎಂದಲ್ಲಆದರೆ ಸಂಸ್ಕೃತವೇ ಮುಂದಿನ ಭವಿಷ್ಯ ಸಂಸ್ಕೃತದಲ್ಲಿರುವ ಜ್ಞಾನ ಭಂಡಾರವನ್ನು ತಮ್ಮದಾಗಿಸಿಕೊಳ್ಳಬೇಕು. ಈ ಶಿಕ್ಷಣ ನೀತಿಯಲ್ಲಿ ಏನು ಪಾಠ ಮಾಡಬೇಕು ಎನ್ನುವುದಕ್ಕಿಂತ ಹೇಗೆ ಪಾಠ ಮಾಡಬೇಕು ಎನ್ನುವುದರ ಬಗ್ಗೆ ಹೆಚ್ಚು ಒತ್ತುಕೊಡಲಾಗಿದೆ. ಹಾಗೂ ಸಂಸ್ಕೃತದಲ್ಲಿರುವ ಜ್ಞಾನ ಭಂಡಾರವನ್ನು ಸಂಸ್ಕೃತ ಮಾಧ್ಯಮದಲ್ಲಿಯೇ ಕಲಿಯಬೇಕು ಎಂದು ಹೇಳಿ, ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಸಂಸ್ಕೃತ ಶಿಕ್ಷಣದ ಬಗ್ಗೆ ವಿಸ್ತಾರವಾಗಿ ಮಾಹಿತಿಯನ್ನು ನೀಡಿದರು. ಶ್ರೋತೃಗಳು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ನೀಡಿ ಸಂದೇಹಗಳನ್ನು ಪರಿಹರಿಸಿದರು. ಈ ಕಾರ್ಯಕ್ರಮದಲ್ಲಿ 8 ರಾಜ್ಯಗಳಿಂದ 490ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಸಂಸ್ಕೃತ ಪ್ರಿಯರು ಭಾಗವಹಿಸಿದರು. ಕಾಲೇಜಿನ ಪ್ರಾಚಾರ್ಯರಾದ ಶ್ರೀ ಜಗದೀಶ್ ಜಿ.ಟಿ.ಯವರು ಸ್ವಾಗತಿಸಿ, ಗಣ್ಯರ ಪರಿಚಯವನ್ನು ಮಾಡಿಕೊಟ್ಟರು. ಸಂಸ್ಕೃತ ಉಪನ್ಯಾಸಕಿಯಾದ ಪ್ರೇಮಾ ಅನಂತರವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಪ್ರಜಾವಾಣಿ ಸೋಮವಾರ • ಮಾರ್ಚ್ 2, 2020



ಕಾರ್ಯಕ್ರಮದಲ್ಲಿ ಪ್ರೊ.ಸಿ.ಎನ್‌.ಆರ್‌.ರಾವ್ ಮತ್ತು ಇಂದುಮತಿ ದಂಪತಿಯನ್ನು ಸನ್ಮಾನಿಸಲಾಯಿತು. ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಘದ ಪ್ರಧಾನ ಅಧ್ಯಕ್ಷ ಪ್ರೊ. ಕೆ.ಎಸ್‌. ರಂಗಪ್ಪ, ಶಿಕ್ಷಣತಜ್ಞ ಡಾ. ವೂಡೇ.ಪಿ.ಕೃಷ್ಣ, ಶೇಷಾದ್ರಿಪುರ ಶಿಕ್ಷಣದತ್ತಿಯ ಅಧ್ಯಕ್ಷ ಎನ್‌.ಆರ್‌.ಪಂಡಿತಾರಾಧ್ಯ, ಪ್ರಾಚಾರ್ಯ ಡಾ.ಎಸ್‌.ಎನ್‌. ವೆಂಕಟೇಶ್‌, ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಶಂತನುದಾಸ್ ಇದ್ದರು

‘ವಿಜ್ಞಾನ ಜನರಿಂದ ಬೆಳೆಯಬೇಕು’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಜನರಿಂದ ವಿಜ್ಞಾನದ ಬೆಳವಣಿಗೆಯಾಗಬೇಕೇ ಹೊರತು, ಸರ್ಕಾರದಿಂದಲ್ಲ. ಈ ದಿಸೆಯಲ್ಲಿ ಮಕ್ಕಳು ವಿಜ್ಞಾನದ ಕಡೆಗೆ ಹೆಚ್ಚಿನ ಆಸಕ್ತಿ ಹೊಂದಬೇಕು’ ಎಂದು ಹಿರಿಯ ವಿಜ್ಞಾನಿ ಪ್ರೊ.ಸಿ.ಎನ್.ಆರ್. ರಾವ್ ಹೇಳಿದರು.

ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಘದ ಸಹಯೋಗದಲ್ಲಿ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಜಾತಿ-ಭೇದ, ಎಲ್ಲೆಗಳಿರದ ಈ ಕ್ಷೇತ್ರದಲ್ಲಿ ಎಲ್ಲರೂ ಮನಃಪೂರ್ವಕವಾಗಿ ಸಾಧನೆ ಮಾಡಿದರೆ ನಿಶ್ಚಿತವಾಗಿ ಯಶಸ್ಸು ಗಳಿಸಲು ಸಾಧ್ಯ’ ಎಂದರು.

ಈ ಸಂಜೆ
01-03-2020

ವಿದ್ಯಾರ್ಥಿಗಳಿಗೆ ಗ್ರಂಥಾಲಯಗಳು ಎರಡನೆ ಮನೆಯಾಗಲಿ: ಶ್ರೀಧರ್



ಬೆಂಗಳೂರು, ಮಾ.1- ವಿದ್ಯಾರ್ಥಿಗಳಿಗೆ ಗ್ರಂಥಾಲಯಗಳು ಎರಡನೆ ಮನೆಯಂತಾಗಬೇಕು. ಆಗ ಮಾತ್ರ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮಾಜಿ ಮುಖ್ಯಸ್ಥ ಡಾ.ಎಂ.ಎಸ್.ಶ್ರೀಧರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತ, ಗ್ರಂಥಾಲಯಗಳನ್ನು ಬಳಕೆದಾರರ ಸ್ನೇಹ ಜಗತ್ತಾಗಿ ಪರಿವರ್ತಿಸಲು ಮತ್ತು ಸಾಮಾಜಿಕ ಕೇಂದ್ರಿತವಾಗಿಸುವಂತೆ ಮನವಿ ಮಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ರಮೇಶ್ ಅವರು ಸ್ಮಾರ್ಕ್ ತಂತ್ರಜ್ಞಾನ ಬಳಸಿಕೊಂಡು ಗ್ರಂಥಾಲಯ ಹೇಗೆ ರೂಪಾಂತರವಾಗಬೇಕೆಂಬ ವಿಷಯದ ಕುರಿತು ವಿವರಣೆ ನೀಡಿದರು.

ತುಮಕೂರು ವಿವಿಯ ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕ ರೂಪೇಶ್‌ಕುಮಾರ್ ಅವರು ಡಿಜಿಟಲ್ ದೊಮೇನ್‌ನಲ್ಲಿ ಬಳಕೆದಾರರ ವರ್ತನೆ ಎಂಬ ವಿಷಯದ ಬಗ್ಗೆ ವಿವರಣೆ ನೀಡಿದರು.

ಜೆಆರ್‌ಡಿ ಟಾಟಾ ಸ್ಮಾರಕ ಗ್ರಂಥಾಲಯದ ಮುಖ್ಯಸ್ಥ ಡಾ.ಆನಂದ ಬೈರಪ್ಪ ಅವರು ಶೈಕ್ಷಣಿಕ ಗ್ರಂಥಾಲಯದಲ್ಲಿ ನವೀನ ರೀತಿಯ ಮಾಹಿತಿ ಸೇವೆ ಒದಗಿಸುವುದರ ಬಗ್ಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ, ಧರ್ಮದರ್ಶಿ ಅಶೋಕ್, ಕೃಷ್ಣಸ್ವಾಮಿ, ಗ್ರಂಥಾಲಯ ಸಲಹೆಗಾರರಾದ ಪುಟ್ಟಸ್ವಾಮಿ, ಪ್ರಾಂಶುಪಾಲರಾದ ಸತೀಶ್, ಗ್ರಂಥಪಾಲಕ ಯೋಗಾನಂದ ಉಪಸ್ಥಿತರಿದ್ದರು.

ದಿಂಗಾಲೇಶ್ವರ ಸ್ವಾಮೀಜಿ ಅಭಿಪ್ರಾಯ ಮಹಾತ್ಮಾ ಗಾಂಧೀಜಿ 150ನೇ ಜಯಂತಿ ವರ್ಷಾಚರಣೆ

ಮಹಾನ್ ನಾಯಕರ ತತ್ವಾದರ್ಶ ಅಳವಡಿಸಿಕೊಳ್ಳಿ

■ ವಿಜಯವಾಣಿ ಸುದ್ದಿಜಾಲ ಹಾವೇರಿ

ಗಾಂಧೀಜಿಯವರ ಸ್ವಾಭಿಮಾನ, ದೇಶಾಭಿಮಾನದ ಬದುಕು ನಮ್ಮೆಲ್ಲರಿಗೂ ಆದರ್ಶ. ಇಂತಹ ಮಹಾನ್ ನಾಯಕರ ತತ್ವಾದರ್ಶಗಳನ್ನು ಜೀವನದಲ್ಲಿ ರೂಢಿಸಿಕೊಂಡು, ದೇಶ ಕಟ್ಟುವ ಕೆಲಸಕ್ಕೆ ಮುಂದಾಗಬೇಕು ಎಂದು ಬಾಲೆಹೊಸೂರ ದಿಂಗಾಲೇಶ್ವರಮಠದ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ನಗರದ ಹುಕ್ಕೇರಿಮಠದ ಶಿವಾನುಭವ ಮಂಟಪದಲ್ಲಿ ಮಹಾತ್ಮಾ ಗಾಂಧೀಜಿಯವರ 150ನೇ ಜಯಂತಿ ವರ್ಷಾಚರಣೆ ಅಂಗವಾಗಿ ಸೋಮವಾರ ಏರ್ಪಡಿಸಿದ್ದ ರಾಷ್ಟ್ರಪಿತ ಗಾಂಧೀಜಿ, ಕಸ್ತೂರಬಾ ಹಾಗೂ ವಿನೋಬಾಜಿ ಸಂದೇಶಗಳನ್ನು ಶಾಲೆ-ಕಾಲೇಜ್ ವಿದ್ಯಾರ್ಥಿಗಳಿಗೆ ತಲುಪಿಸುವ ಅಭಿಯಾನದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.



ಹಾವೇರಿಯ ಹುಕ್ಕೇರಿಮಠದಲ್ಲಿ ಸೋಮವಾರ ಏರ್ಪಡಿಸಿದ್ದ ರಾಷ್ಟ್ರಪಿತ ಗಾಂಧೀಜಿ, ಕಸ್ತೂರಬಾ ಹಾಗೂ ವಿನೋಬಾಜಿ ಅವರ ಸಂದೇಶಗಳನ್ನು ಶಾಲೆ-ಕಾಲೇಜ್ ವಿದ್ಯಾರ್ಥಿಗಳಿಗೆ ತಲುಪಿಸುವ ಅಭಿಯಾನಕ್ಕೆ ಜಿಲ್ಲಾಧಿಕಾರಿ ಕೃಷ್ಣ ಬಾಜಪೈ ಚಾಲನೆ ನೀಡಿದರು. ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಚೆನ್ನಮ್ಮ ಹಳ್ಳಿಕೇರಿ, ಶಿವಬಸವ ಸ್ವಾಮೀಜಿ ಇತರರಿದ್ದರು.

ಪ್ರಸ್ತುತ ದೇಶದಲ್ಲಿ ಕಲಿತು ವಿದೇಶದಲ್ಲಿ ಸೇವೆ ಸಲ್ಲಿಸುವವರ ಸಂಖ್ಯೆಯೇ ಹೆಚ್ಚಾಗಿದೆ. ಗಾಂಧೀಜಿ ವಿದೇಶದಲ್ಲಿ ಕಲಿತು ದೇಶಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಇದು ನಮಗೂ, ಗಾಂಧೀಜಿಗಿರುವ ವ್ಯತ್ಯಾಸ ತಿಳಿಸುತ್ತದೆ ಎಂದರು. ಅಭಿಯಾನಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಕೃಷ್ಣ ಬಾಜಪೈ, ಸ್ವಾತಂತ್ರ್ಯ ಹೋರಾಟಗಾರ್ತಿ ಚೆನ್ನಮ್ಮ ಹಳ್ಳಿಕೇರಿ, ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವುಡೇ ಪಿ. ಕೃಷ್ಣ, ಮಾಜಿ ಸಂಸದ ಎಚ್. ಹನುಮಂತಪ್ಪ ಮಾತನಾಡಿದರು. 5 ಕಾಲೇಜ್ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಗಾಂಧೀಜಿ ಕುರಿತ ಕಿರು ಪುಸ್ತಕಗಳನ್ನು ವಿತರಿಸಲಾಯಿತು.

ಅಕ್ಕಿಆಲೂರು ವಿರಕ್ತಮಠದ ಶಿವಬಸವ ಸ್ವಾಮೀಜಿ, ಕೂಡಲದ ಗುರುಮಹೇಶ್ವರ ಶಿವಾಚಾರ್ಯರು, ಸೇಡಂನ ತೋಂಟದಾರ್ಯಮಠದ ಸದಾಶಿವ ಸ್ವಾಮೀಜಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷ ತಿಪ್ಪನಗೌಡ್ರ, ಪಪೂ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಸಿ. ಪೀರಜಾದೆ, ಸಾಹಿತಿ ಸತೀಶ ಕುಲಕರ್ಣಿ ಇತರರಿದ್ದರು. ಬಿ. ಬಸವರಾಜ ಸ್ವಾಗತಿಸಿದರು. ನಾಗರಾಜ ನಡುವಿನಮಠ ನಿರೂಪಿಸಿದರು.


ಅವಿನಾಭಾವ ಸಂಬಂಧ

ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಗಾಂಧೀಜಿಯವರಿಗೂ ಹಾವೇರಿಗೂ ಅವಿನಾಭಾವ ಸಂಬಂಧವಿದೆ. ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧೀಜಿ ಜತೆಗೆ ಜಿಲ್ಲೆಯ ಮೈಲಾರ ಮಹದೇವಪ್ಪನವರು ಪಾಲ್ಗೊಂಡಿದ್ದು ಹೆಮ್ಮೆಯ ವಿಷಯ. ಸ್ವಾತಂತ್ರ್ಯ ಹೋರಾಟಕ್ಕಾಗಿ ಜಿಲ್ಲೆಯವರಾದ ತಿರಕಪ್ಪ ಮಡಿವಾಳರ, ವೀರಯ್ಯ ಹಿರೇಮಠ ಅವರ ಬಲಿದಾನ ಸ್ಮರಣೀಯ. ಗಾಂಧೀಜಿಯವರ ಆದರ್ಶಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಈ ಕಾರ್ಯಕ್ರಮದ ಮೂಲಕ ಜಿಲ್ಲೆಯ 50 ಶಾಲೆ-ಕಾಲೇಜ್‌ಗಳಲ್ಲಿ ಉಪನ್ಯಾಸ ಕೊಡಿಸುವ ಸಂಕಲ್ಪ ಮಾಡಲಾಗಿದೆ ಎಂದರು.

ಯತ್ನಾಳ್ ವಿರುದ್ಧ ಕ್ರಮಕ್ಕೆ ಸಾಹಿತಿಗಳ ಆಗ್ರಹ

ಸಂ.ಕ ಸಮಾಚಾರ ಬೆಂಗಳೂರು

ಎಚ್.ಎಸ್. ದೊರೆಸ್ವಾಮಿ ಅವರನ್ನು ಪಾಕ್ ಏಜೆಂಟ್ ಎಂದು ಆರೋಪಿಸಿರುವ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಒತ್ತಾಯಿಸಿದರು.



ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಹೇಳಿಕೆಯನ್ನು ಖಂಡಿಸಿ ಗಾಂಧಿಭವನದಲ್ಲಿ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ರಂಗಕರ್ಮಿ ಪ್ರಸನ್ನ, ಮುಖ್ಯಮಂತ್ರಿ ಚಂದ್ರು, ಬಿ.ಟಿ. ಲಲಿತಾ ನಾಯಕ್, ಕೋಡಿಹಳ್ಳಿ ಚಂದ್ರಶೇಖರ್, ವೂಡೇ ಪಿ. ಕೃಷ್ಣ ಪ್ರತಿಭಟನಾ ಸಭೆ ನಡೆಸಿದರು.

ಶಾಸಕ ಯತ್ನಾಳ್ ಹೇಳಿಕೆಯನ್ನು ಖಂಡಿಸಿ ವಿವಿಧ ಸಂಘಟನೆಗಳು ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ಶಾಸಕ ಯತ್ನಾಳ್ ದೊರೆಸ್ವಾಮಿ ಅವರನ್ನು ನಕಲಿ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸ್ವಾತಂತ್ರ್ಯಕ್ಕಾಗಿ ಅವಿರತ ಶ್ರಮಿಸಿದ ಹಿರಿಯ ಚೇತನಕ್ಕೆ ಪಾಕ್‌ನ ನಿಕಟವರ್ತಿ ಎಂದು ಹೇಳಿ ದೊರೆಸ್ವಾಮಿ ಅವರನ್ನು ಅವಮಾನ ಮಾಡಿದ್ದಾರೆ. ಇಂತಹವರು ಸಮಾಜ-ಕ್ಕೆ ಅಪಾಯಕಾರಿಯಾಗಿದ್ದು ಕೂಡಲೇ ಇವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಹಿರಿಯ ಹೋರಾಟಗಾರರಾಗಿರುವ ದೊರೆಸ್ವಾಮಿ ಅವರು ನಾಡಿನ ಸಾಕ್ಷಿಪ್ರಜ್ಞೆಯಾಗಿದ್ದಾರೆ. ಹಲವು ಜನಪರ ಹೋರಾಟಗಳಲ್ಲಿ ಪಾಲ್ಗೊಂಡು ನಾಡಿನ ಅಭಿವೃದ್ಧಿಗೆ ಅವಿರತ ಶ್ರಮಿಸಿದ್ದಾರೆ. ದೇಶಕ್ಕಾಗಿ ದುಡಿಯುತ್ತಿರುವ ಹಿರಿಯ ಜೀವವನ್ನು ಟೀಕಿಸುವಂತಹ ಕೀಳುಮಟ್ಟಕ್ಕೆ ಯತ್ನಾಳ್ ಇಳಿದಿರುವುದು ಅವರ ಮನಸ್ಥಿತಿಯನ್ನು ತೋರಿಸುತ್ತದೆ ಎಂದು ಟೀಕಿಸಿದರು. ದೊರೆಸ್ವಾಮಿ ತಮ್ಮ ಇಳಿ ವಯಸ್ಸಿನಲ್ಲಿ ಬಡವರು, ಶೋಷಿತರ ಪರವಾಗಿ ಬೀದಿಗಿಳಿದು ಹೋರಾಟ ನಡೆಸುವ ಮೂಲಕ ನಾಡಿನ ಜನರ ಆಸ್ತಿಯಾಗಿದ್ದಾರೆ.

ಅವರ ಮುಂದಾಳತ್ವದ ಹೋರಾಟಗಳಿಂದ ಅನೇಕ ಶೋಷಿತ ಜನಾಂಗ ನೆಲೆ ಕಂಡುಕೊಂಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಬಗ್ಗೆ ಮಾತನಾಡುವಾಗ ಮಾತಿನ ಮೇಲೆ ನಿಗಾ ವಹಿಸಬೇಕು. ಯತ್ನಾಳ್ ಮಾತು ಅವರ ಘನತೆಗೆ ತಕ್ಕುದಾದುದಲ್ಲ ಎಂದರು. ಮಾಜಿ ಶಾಸಕ ಮುಖ್ಯಮಂತ್ರಿ ಚಂದ್ರು ಮಾತನಾಡಿ, ದೊರೆಸ್ವಾಮಿ ಅವರ ಗೌರವಕ್ಕೆ ಚ್ಯುತಿ ಬರುವಂತೆ ಮಾತನಾಡಿರುವ ಶಾಸಕ ಯತ್ನಾಳ್ ಕೂಡಲೇ ಬೇಷರತ್ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಅವರ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ರಂಗಕರ್ಮಿ ಪ್ರಸನ್ನ, ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಕಮ್ಯುನಿಸ್ಟ್ ಪಾರ್ಟಿಯ ಜಿ.ಎನ್. ನಾಗರಾಜ್, ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಗಾಂಧಿವಾದಿ ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ

ಶುಕ್ರವಾರ,28 ಫೆಬ್ರವರಿ 2020



ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಅವರ ಬಗ್ಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೀಡಿದ ಅವಹೇಳನಕಾರಿ ಹೇಳಿಕೆ ಖಂಡಿಸಿ ಗಾಂಧಿ ಪ್ರತಿಷ್ಠಾನ, ಗಾಂಧಿ ಸ್ಮಾರಕ ನಿಧಿ ಹಾಗೂ ಇತರ ಸಂಸ್ಥೆಗಳ ಕಾರ್ಯಕರ್ತರು ಗಾಂಧಿ ಭವನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಬೆಂಗಳೂರು
28.02.2020 ಶುಕ್ರವಾರ
vishwavani.news



ನಗರದ ಗಾಂಧಿ ಭವನದಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಯನ್ನು ಖಂಡಿಸಿ ಗುರುವಾರ ಪ್ರತಿಭಟನೆ ನಡೆಸಲಾಯಿತು. ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್, ಲೇಖಕಿ ಲಲಿತಾ ಬಿ.ಟಿ.ನಾಯಕ್, ಮುಖ್ಯಮಂತ್ರಿ ಚಂದ್ರು, ಪ್ರಗತಿಪರ ಚಿಂತಕರು ಇದ್ದರು.

ಸಂಜೆವಾಣಿ ಗುರುವಾರ, 27 ಫೆಬ್ರವರಿ 2020



ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್ ದೊರೆಸ್ವಾಮಿ ಅವರನ್ನು ನಕಲಿ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಪಾಕ್ ಏಜೆಂಟ್ ಎಂದು ಆರೋಪಿಸಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮೇಲೆ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿ ನಗರದ ಗಾಂಧಿ ಭವನದಲ್ಲಿಂದು ಸಾಹಿತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬೆಂಗಳೂರು, ಫೆ. 27– ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್. ಎಸ್ ದೊರೆಸ್ವಾಮಿ ಅವರನ್ನು ನಕಲಿ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಪಾಕ್ ಏಜೆಂಟ್ ಎಂದು ಆರೋಪಿಸಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮೇಲೆ ಪ್ರಕರಣ ದಾಖಲಿಸಬೇಕೆಂದು ಸಾಹಿತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ಅವರು ಆಗ್ರಹಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿರುವ ದೊರೆಸ್ವಾಮಿ ಅವರು ನಾಡಿನ ಸಾಕ್ಷಿಪ್ರಜ್ಞೆಯಾಗಿದ್ದಾರೆ. ಹಲವು ಜನಪರ ಹೋರಾಟಗಳಲ್ಲಿ ಪಾಲ್ಗೊಂಡು ನಾಡಿನ ಅಭಿವೃದ್ಧಿಗೆ ಅವಿರತ ಶ್ರಮಿಸುತ್ತಿರುವ ದೊರೆಸ್ವಾಮಿ ಅವರನ್ನು ಪಾಕ್ ಏಜೆಂಟ್ ಎಂದು ಆರೋಪಿಸಿರುವ ಯತ್ನಾಳ್ ಅವರನ್ನು ಕೂಡಲೇ ಬಂಧಿಸುವಂತೆ ಅವರು ಆಗ್ರಹಿಸಿದರು.

ನಗರದ ಗಾಂಧಿ ಭವನದಲ್ಲಿ ನಡೆದ ಶಾಸಕ ಯತ್ನಾಳ್ ಹೇಳಿಕೆಯನ್ನು ಖಂಡಿಸಿ ನಡೆದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, .ದೊರೆಸ್ವಾಮಿ ಅವರನ್ನು ಟೀಕಿಸುವಂತಹ ಕೀಳುಮಟ್ಟಕ್ಕೆ ಯತ್ನಾಳ್ ಇಳಿದಿರುವುದು ಅವರ ಮನಃಸ್ಥಿತಿಯನ್ನು ತೋರಿಸುತ್ತದೆ ಎಂದು ವಾಗ್ದಾಳಿ ನಡೆಸಿದರು.

ನಿರ್ಗತಿಕರು, ಬಡವರು, ಶೋಷಿತರ ಪರವಾಗಿ ಇಳಿ ವಯಸ್ಸಿನಲ್ಲಿಯೂ ಬೀದಿಗಿಳಿದು ಹೋರಾಟ ನಡೆಸುವ ದೊರೆಸ್ವಾಮಿ ಅವರು, ನಾಡಿನ ಆಸ್ತಿಯಾಗಿದ್ದಾರೆ. ಅವರ ಹೋರಾಟಗಳು ಹಾಗೂ ಚಳವಳಿಗಳಿಂದ ಶೋಷಿತರಿಗೆ ಎಷ್ಟೋ ವಿಷಯಗಳಲ್ಲಿ ನ್ಯಾಯ ದೊರೆತಿದೆ. ಅಂತಹವರ ವಿರುದ್ಧ ಆರೋಪ ಮಾಡುವುದು ಯತ್ನಾಳ್‌ಗೆ ಶೋಭೆ ತರುತ್ತದೆಯೇ? ಎಂದು ಪ್ರಶ್ನಿಸಿದರು.

ಮಾಜಿ ಶಾಸಕ ಮುಖ್ಯಮಂತ್ರಿ ಚಂದ್ರು ಅವರು ಮಾತನಾಡಿ, ದೊರೆಸ್ವಾಮಿ ಅವರ ವಿರುದ್ಧ ಹೇಳಿಕೆ ನೀಡಿರುವ ಯತ್ನಾಳ್ ಕೂಡಲೇ ನಾಡಿನ ಜನರ ಬೇಷರತ್ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಾಜಿ ಸಚಿವೆ ಬಿ.ಟಿ.ಲಲಿತಾನಾಯಕ್, ಕಮ್ಯುನಿಸ್ಟ್ ಪಾರ್ಟಿಯ ಜಿ.ಎನ್. ನಾಗರಾಜ್ ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಗಾಂಧಿವಾದಿ ವೂಡೇ ಪಿ. ಕೃಷ್ಣ ಇನ್ನಿತರರು ಪಾಲ್ಗೊಂಡಿದ್ದರು.

ಈ ಸಂಜೆ

ಗುರುವಾರ, 27-2-2020



ಶಾಸಕ ಬಸವಗೌಡ ಪಾಟೀಲ್ ಯತ್ನಾಳ್ ಹೇಳಿಕೆಯನ್ನು ಖಂಡಿಸಿ ಇಂದು ಗಾಂಧಿಭವನದ ಬಳಿ ಪ್ರತಿಭಟನೆ ನಡೆಸಲಾಯಿತು. ಕೋಡಿ ಹಳ್ಳಿ ಚಂದ್ರಶೇಖರ್, ವೂಡೆ ಪಿ.ಕೃಷ್ಣ, ಬಿ.ಟಿ.ಲಲಿತಾ ನಾಯಕ್, ಮುಖ್ಯಮಂತ್ರಿ ಚಂದ್ರು ಮತ್ತಿತರ ಪ್ರಗತಿಪರ ಮುಖಂಡರು ಪಾಲ್ಗೊಂಡಿದ್ದರು.

ಸುವರ್ಣ ಸಂಭ್ರಮ
ಉದಯವಾಣಿ
ನಮ್ಮ ಹೃದಯವಾಣಿ • ನಮ್ಮ ಉದಯವಾಣಿ
Bengaluru Edition
Feb 26, 2020 Page No. 3
Powered by: eReleGo.com

ಗಾಂಧೀಜಿ ಭಾಷಣಕ್ಕೆ ಪ್ರಭಾವಿತರಾದ ಶ್ರೀನಿವಾಸಯ್ಯ: ಡಾ.ವೂಡೆ ಪಿ.ಕೃಷ್ಣ | ಡಾ.ಹೊ.ಶ್ರೀನಿವಾಸಯ್ಯ ಸಂಸ್ಮರಣೆ

ಗಾಂಧೀಜಿ ಕುರಿತು ಅಧ್ಯಯನ ಮಾಡುವುದು ಅಗತ್ಯ

ನಾಗಮಂಗಲ: ಇಂದಿನ ಯುವಜನತೆ ಗಾಂಧೀಜಿ ಕುರಿತು ಅಧ್ಯಯನ ಮಾಡಿದರೆ ತಾವಾಗಿಯೇ ಅವರ ತತ್ವಾದರ್ಶ ಮೈಗೂಡಿಸಿಕೊಳ್ಳುವರು, ಮಕ್ಕಳಿಗೆ ದೇಶದ ಮಹನೀಯರ ಕುರಿತು ತಿಳಿಸಬೇಕಾದುದು ಅನಿವಾರ್ಯ ಎಂದು ಬೆಂಗಳೂರು ಗಾಂಧೀ ಭವನದ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಹೇಳಿದರು.

ಇಲ್ಲಿನ ಬಿಜಿಎಸ್ ಪದವಿ ಕಾಲೇಜಿನ ಸಭಾಂಗಣದಲ್ಲಿ ಸಾಂಸ್ಕೃತಿಕ ಕ್ರೀಡಾ, ಕಾರ್ಯಕ್ರಮಗಳ ಸಮಾರೋಪ ಮತ್ತು ಡಾ.ಹೊ.ಶ್ರೀನಿವಾಸಯ್ಯ ಸಂಸ್ಮರಣೆ ಹಾಗೂ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಗಾಂಧೀಜಿ ಪ್ರಭಾವ: ಶ್ರೀನಿವಾಸಯ್ಯ ಮಹಾತ್ಮ ಗಾಂಧೀಜಿಯವರ ತತ್ವಾದರ್ಶಗಳಿಗೆ ಬದ್ಧರಾಗಿ ಬದುಕುತ್ತಿದ್ದಾರೆ. ಗಾಂಧೀಜಿಯನ್ನು ಹತ್ತಿರದಿಂದ ನೋಡಿದವರು. ಶ್ರೀನಿವಾಸಯ್ಯನವರು ಮದ್ರಾಸಿನಲ್ಲಿ ಗಾಂಧೀಜಿಯವರ ಭಾಷಣಕ್ಕೆ ಪ್ರಭಾವಿತರಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಜಿಲ್ಲೆಯ ಕುಗ್ರಾಮದಿಂದ ಬಂದವರೊಬ್ಬರು ಗಾಂಧೀಜಿ ಅನುಯಾಯಿಯಾಗಿದ್ದು ಇಂದು ನಮಗೆಲ್ಲಾ ಆದರ್ಶ ಪ್ರಾಯರಾಗಿದ್ದಾರೆ ಎಂದು ಹೇಳಿದರು.



ಬಿಜಿಎಸ್ ಪದವಿ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾ ಸಮಾರೋಪ, ಡಾ.ಹೊ.ಶ್ರೀನಿವಾಸಯ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಮೊಬೈಲ್‌ನಿಂದ ಹೊರಬನ್ನಿ: ಶ್ರೀನಿವಾಸಯ್ಯ ಪ್ರಶಸ್ತಿ ಸ್ವೀಕರಿಸಿದ ಬೆಂಗಳೂರಿನ ದೀನಬಂಧು ಸಂಸ್ಥೆ ಸಂಸ್ಥಾಪಕ ಜಯದೇವ್ ಮಾತನಾಡಿ, ಮೊಬೈಲ್ ಗೀಳು ಇಂದು ಪ್ರಪಂಚದಲ್ಲಿ ಸುಳ್ಳು ಹೇಳುವುದನ್ನು ಕಲಿಸಿದ್ದಲ್ಲದೇ ಮನುಷ್ಯರ ನಡುವಿನ ಸಂಬಂಧವನ್ನೂ ಕಡಿಮೆ ಮಾಡುತ್ತಿದೆ. ಮೊಬೈಲ್ ಬಳಸುವ ಮನಸ್ಸಿಗೆ ಆದರ್ಶದ ಆಕರಗಳೆಂದರೆ ಏಷಾರಾಮಿ ಜೀವನಕ್ಕೆ ಮಾರು ಹೋಗಿದ್ದಾರೆ ಎಂದು ವಿಷಾದಿಸಿದರು.

ಪರಿಸರ ಉಳಿಸಿ: ಇಂದು ಪರಿಸರದ ಏರುಪೇರುಗಳನ್ನು ಸರಪಡಿಸಿಕೊಳ್ಳದಿದ್ದಲ್ಲಿ ಮುಂದೊಂದು ದಿನ ಪಶ್ಚಾತ್ತಾಪ ಪಡಬೇಕಾಗುತ್ತದೆ. ನಮ್ಮ ಯುವಕರಿಗೆ ಅಭಿಪ್ರಾಯಗಳೇ ಇಲ್ಲವಾಗಿವೆ. ಈ ದೇಶದಲ್ಲಿ ಆಗುತ್ತಿರುವ ಭ್ರಷ್ಟಾಚಾರ, ಅನಾಹುತ, ಪರಿಸರ ತಲ್ಲಣಗಳಿಗೆ ಮಲಗಿ ನಿದ್ರಿಸುತ್ತಿರುವ ಯುವಜನತೆ ಧ್ವನಿಯೆತ್ತಬೇಕೆಂದು ಹೇಳಿದರು.

ಕುವೆಂಪು ಶಿಸ್ತು ಪಾಲಿಸಿ: ಶ್ರೀ ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, ಕುವೆಂಪು ಶಿಸ್ತಿನ ಜೀವನ ನಡೆಸಿದವರು. ಮನಸ್ಸು ಮಲ್ಲಿಗೆಯಂತಿದ್ದರೇ ಮಾತು ಪರಿಮಳದಂತಿರುತ್ತದೆ. ಹಾಗಾಗಿ ನಾವಾಡುವ ಮಾತು ಪಕ್ಕದವರಿಗೆ ನೋವಾದರೇ ಅವರ ಮನಸ್ಥಿತಿ ಏನಾಗ್ತದೆ ಎಂಬುದರ ಅರಿವು ನಮಗಿರಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಾರ್ಷಿಕ ಸಂಚಿಕೆ 'ಗಿರಿ ಕುಸುಮ' ಮತ್ತು ಡಾ.ಎಂ.ಕೆ.ಮಂಜುನಾಥ ರಚಿಸಿರುವ 'ಬೊಂಬೆ ಬೀಡಿನ ದೇವಾಲಯಗಳು' ಕೃತಿ ಬಿಡುಗಡೆ ಮಾಡಲಾಯಿತು. ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಿ.ಆರ್. ಪಾಟೀಲ್, ಶ್ರೀ ಮಠದ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ ,ಶ್ರೀ ಪ್ರಸನ್ನನಾಥ ಸ್ವಾಮೀಜಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎನ್.ಎಸ್.ರಾಮೇಗೌಡ, ಪ್ರಾಂಶುಪಾಲ ಲೋಕೇಶ್ ಮುಂತಾದವರು ಹಾಜರಿದ್ದರು.

ಕನ್ನಡಪ್ರಭ
Wed, 26 February 2020
https://kpepaper.asianetnews.com/c/49369535

ಶಿಕ್ಷಣದಿಂದ ಮಾತ್ರ ಸರ್ವಪ್ರಾಪ್ತಿ: ಶ್ರೀಗಳು

ವಿದ್ಯಾರ್ಥಿಗಳು ಎಲ್ಲ ಕ್ಷೇತ್ರಗಳ ಬಗ್ಗೆ ಅರಿತಾಗ ಸಾಧನೆ ಮಾಡಲು ಸಾಧ್ಯ: ಆದಿಚುಂಚನಗಿರಿಯ ನಿರ್ಮಲಾನಂದನಾಥಸ್ವಾಮಿ ಹೇಳಿಕೆ

• ಕನ್ನಡಪ್ರಭ ವಾರ್ತೆ ನಾಗಮಂಗಲ

ವಿದ್ಯಾರ್ಥಿ ಜೀವನದಲ್ಲಿ ಎಲ್ಲಾ ಕ್ಷೇತ್ರಗಳ ಬಗ್ಗೆ ತಿಳಿದು ಜ್ಞಾನ ಹೆಚ್ಚಿಸಿಕೊಂಡಾಗ ಮಾತ್ರ ಏನಾದರು ಸಾಧನೆ ಮಾಡಲು ಸಾಧ್ಯ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಪಟ್ಟಣದ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳ ಸಮಾರೋಪ ಮತ್ತು ಹೊ.ಶ್ರೀನಿವಾಸಯ್ಯರವರ ಸಂಸ್ಮರಣೆ ಹಾಗೂ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಕಲಿಯುವ ಆಸಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಕಳೆದುಕೊಂಡಿರುವುದನ್ನು ವಿದ್ಯೆಯಿಂದ ಮಾತ್ರ ಎಲ್ಲವನ್ನು ಪಡೆದುಕೊಳ್ಳಲು ಸಾಧ್ಯ. ವಿದ್ಯಾರ್ಥಿಗಳು ಸದಾ ತನ್ನತನವನ್ನು ಒಳ್ಳೆಯತನಕ್ಕೆ ತೆರೆದಿಟ್ಟಿರಬೇಕು. ಯಾವ ವ್ಯಕ್ತಿಯ ಮನಸ್ಸು ಮಲ್ಲಿಗೆಯಂತಿರುತ್ತದೆ ಆ ವ್ಯಕ್ತಿಯ ಮಾತು ಪರಿಮಳದಂತೆ ಹೊರಸೂಸುತ್ತಾನೆ ಎಂದರು.



ನಾಗಮಂಗಲದ ಎಸಿ ಎಸಿ ಕಾಲೇಜಿನಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳ ಸಮಾರೋಪ ಮತ್ತು ಡಾ. ಹೊ.ಶ್ರೀನಿವಾಸಯ್ಯ ಅವರ ಸಂಸ್ಮರಣೆ ಕಾರ್ಯಕ್ರಮದಲ್ಲಿ ಗಿರಿಕುಸುಮ ವಾರ್ಷಿಕ ಸಂಚಿಕೆಯನ್ನು ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಗಣ್ಯರು ಬಿಡುಗಡೆ ಮಾಡಿದರು.

ಪಾಶ್ಚಾತ್ಯ ಸಂಸ್ಕೃತಿ ಬೇಡ: ನಮ್ಮ ದೇಶ ನಮ್ಮ ಸಂಸ್ಕೃತಿಯ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿರಬೇಕು. ಆ ನಿಟ್ಟಿನಲ್ಲಿ ಪ್ರತಿಯೊಬ್ಬ ಯುವಕರು ಸಂಸ್ಕೃತಿಯ ರಕ್ಷಣೆಗೆ ನಿಲ್ಲಬೇಕಿದೆ. ನಮ್ಮ ಸಂಸ್ಕೃತಿ ಆಧ್ಯಾತ್ಮಿಕತೆಯ ನೆಲೆಗಟ್ಟಿನಲ್ಲಿ ಬೆಳೆದು ಬಂದಿದೆ, ಬೇರು ಕಿತ್ತಂತಿರುವ ಪಾಶ್ಚಾತ್ಯ ಸಂಸ್ಕೃತಿಗೆ ಯುವ ಮನಸ್ಸುಗಳು ಮಾರುಹೋಗದೆ ನಮ್ಮ ನಾಡಿನ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಬೆಳೆಯಬೇಕಿದೆ ಎಂದು ಕರೆ ನೀಡಿದರು.

ಡಾ.ಹೊ.ಶ್ರೀನಿವಾಸಯ್ಯ ಟ್ರಸ್ಟ್ ವತಿಯಿಂದ ನೀಡಲಾಗುವ ಡಾ.ಹೊ.ಶ್ರೀನಿವಾಸಯ್ಯ ಸೇವಾ ಪ್ರಶಸ್ತಿ ಸ್ವೀಕರಿಸಿದ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರ ಪುತ್ರ ಜಿ.ಎಸ್.ಜಯದೇವ್ ಮಾತನಾಡಿ, ಅಹಿಂಸೆ ಎಂಬುದು ಎಂದಿಗೂ ಹೇಡಿತನವಲ್ಲ, ದೇಶಕ್ಕೆ ನಷ್ಟವಾಗದಂತೆ ಮತ್ತು ಅಗೌರವವಾಗದಂತೆ ನಡೆದುಕೊಳ್ಳುವುದು ಅಹಿಂಸೆಯಾಗಿರುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಅಹಿಂಸೆ ಬಹಳ ಸಂದರ್ಭಗಳಲ್ಲಿ ದುರ್ಬಳಕೆಯಾಗುತ್ತಿರುವುದು ಶೋಚನೀಯ ಎಂದು ವಿಷಾದಿಸಿದರು.

ಅನುಕರಣೆಯಲ್ಲಿ ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದು ಹೆಚ್ಚಾಗಿರುತ್ತದೆ. ಪ್ರಸ್ತುತ ಮಾಧ್ಯಮಗಳು ಮನುಷ್ಯನ ಮೇಲೆ ದೌರ್ಬಲ್ಯಗಳನ್ನು ಹೆಚ್ಚಿಸುವ ಜತೆಗೆ ಸಮಾಜವನ್ನು ದುರ್ನಡತೆಯ ಕಡೆಗೆ ಕೊಂಡೊಯ್ಯುತ್ತಿವೆ. ಲೈಂಗಿಕತೆ, ಕಳ್ಳತನ, ದರೋಡೆ, ಗುಂಡಾಗಿರಿಯಂತಹ ಸನ್ನಿವೇಶಗಳನ್ನು ಹೊಂದಿರುವಂತಹವನ್ನು ವಿಜೃಂಭಿಸಿ ಪ್ರದರ್ಶನ ನೀಡುತ್ತಿವೆ. ಗಾಂಧೀಜಿಯವರು ಅಂದು ವಿರೋಧಿಸಿದ್ದಂತಹ ಸಪ್ತ ಸಾಮಾಜಿಕ ಪಾತಕಗಳೆ ಇಂದಿನ ಮಾಧ್ಯಮಗಳ ಬಂಡವಾಳವಾಗಿರುವುದು ಬೇಸರದ ಸಂಗತಿಯಾಗಿದೆ. ನಮ್ಮ ನಾಡು ಎತ್ತ ಸಾಗುತ್ತಿದೆ ಎಂಬುದನ್ನು ಅವಲೋಕಿಸಿ ಯುವಕರು ಪ್ರಶ್ನಿಸುವ ಮನೋಭಾವ ಹೊಂದಬೇಕಿದೆ ಎಂದರು.

ಕ್ಯಾಸಿನೋ: ಸಚಿವರ ಅವಿವೇಕತನದ ಹೇಳಿಕೆ

ಕನ್ನಡ ಮತ್ತು ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವ ಸಿ.ಟಿ.ರವಿಯವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ ಜಿ.ಎಸ್.ಸದಾಶಿವ ಅವರು, ಸಚಿವರ ಹೇಳಿಕೆ ಅವರ ಅವಿವೇಕತನವನ್ನು ತೋರ್ಪಡಿಸುತ್ತದೆ. ಸಂಸ್ಕೃತಿ ವೈಭವವನ್ನು ಹೆಚ್ಚಿಸಲು ಪಾಶ್ಚಾತ್ಯವನ್ನು ಅನುಕರಣೆ ಮಾಡಲು ಹೊರಟಿದ್ದಾರೆ. ಆದರಿಂದ ನಾಡಿನ ಸಂಸ್ಕೃತಿ ದುಸ್ಥಿತಿಯತ್ತ ಸಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿದ ಗಾಂಧೀಜಿಯವರ ಅನುಯಾಯಿ ಹಾಗೂ ಮಾಜಿ ಶಾಸಕ ಡಿ.ಆರ್ .ಪಾಟೀಲ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ವಾರ್ಷಿಕ ಸಂಚಿಕೆ ಗಿರಿಕುಸುಮ ಹಾಗೂ ಡಾ.ಎಂ.ಕೆ.ಮಂಜುನಾಥ್ ರಚಿಸಿರುವ ಬೊಂಬೆಬೀಡಿನ ದೇವಾಲಯಗಳು ಎಂಬ ಕೃತಿಗಳನ್ನು ನಿರ್ಮಲಾನಂದನಾಥಸ್ವಾಮೀಜಿ ಬಿಡುಗಡೆ ಮಾಡಿದರು.

ಬೆಂಗಳೂರಿನ ಗಾಂಧಿಭವನದ ಅಧ್ಯಕ್ಷ ಡಾ.ವೂಡೇ, ಪಿ.ಕೃಷ್ಣ, ಡಾ.ಹೊ.ಶ್ರೀನಿವಾಸಯ್ಯ ಟ್ರಸ್ಟ್ ಅಧ್ಯಕ್ಷ ಸದಾನಂದ್, ಪ್ರಾಂಶುಪಾಲ ಡಾ.ಬಿ.ಕೆ.ಲೋಕೇಶ್, ಗಾಂಧಿ ಸ್ಮಾರಕ ಟ್ರಸ್ಟ್‌ನ ಶಿವರಾಜ್, ನರಸಿಂಹಯ್ಯ, ಹೆಚ್.ಟಿ.ಕೃಷ್ಣೇಗೌಡ ಸೇರಿದಂತೆ ಮುಂತಾದವರು ಇದ್ದರು.

ಅನೌಪಚಾರಿಕ ಸಮಾರಂಭದಲ್ಲಿ ಟಿ.ಎಸ್.ಆರ್. ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ

ಡಿ. ಮಹಾದೇವಪ್ಪ ಅವರಿಗೆ ಆತ್ಮೀಯ ಅಭಿನಂದನೆ

ಕನ್ನಡ ಪತ್ರಿಕಾ ರಂಗದ ಭೀಷ್ಮರೆನಿಸಿಕೊಂಡಿದ್ದ ಛೂಬಾಣ ಖ್ಯಾತಿಯ ಟಿ.ಎಸ್. ರಾಮಚಂದ್ರ ರಾಯರ ಹೆಸರಿನಲ್ಲಿ ವಾರ್ತಾ ಇಲಾಖೆ ಕೊಡ ಮಾಡುತ್ತಿರುವ ಪ್ರಶಸ್ತಿಗೆ 2019ರ ಸಾಲಿನಲ್ಲಿ ಭಾಜನರಾಗಿರುವ ಹಾಗೂ ಪತ್ರಕರ್ತರ ವಲಯದಲ್ಲಿ ಅಜಾತ ಶತ್ರು ಎನಿಸಿಕೊಂಡಿರುವ ಡಿ. ಮಹಾದೇವಪ್ಪ ಅವರನ್ನು, ಅವರ ಅಭಿಮಾನಿಗಳು 9.2.2020ರಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಹಿರಿಯ ಚಿಂತಕ ಮನು ಪಾಟೀಲ ಅವರ ನೇತೃತ್ವದಲ್ಲಿ ನಡೆದ ಈ ಸುಂದರ ಸಮಾರಂಭ ಖ್ಯಾತ ಗಾಯಕ ಟಿ.ಎನ್. ನಂಜಪ್ಪ ಬೇಂದ್ರೆ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ಆರಂಭವಾಯಿತು. ಡಾ. ಪ್ರದೀಪ್ ಮಾಲ್ಗುಡಿ ನಿರೂಪಿಸಿದರು.

ಕೆ.ಆರ್. ನಗರ ತಾಲ್ಲೂಕಿನ ಸಣ್ಣ ಹಳ್ಳಿ ಸೌತನಹಳ್ಳಿಯಲ್ಲಿ ಜನಿಸಿ, 7–8 ಕಿಲೋ ಮೀಟರ್ ನಡೆದುಕೊಂಡೇ ಕೆ.ಆರ್. ನಗರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದುದು, ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದ ತಮಗೆ ತಂದೆಯೇ ತಂದೆ–ತಾಯಿ ಎರಡೂ ಆಗಿ ಪೋಷಿಸಿದುದು. ಸುತ್ತೂರು ಹಾಸ್ಟೆಲ್ನಲ್ಲಿದ್ದುಕೊಂಡು ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾಭ್ಯಾಸ ಮಾಡಿದುದು, ಬೇರೆಯವರ ಕಾಸಿಗೆ ಆಸೆಪಡಬೇಡ ಎಂದು ತಂದೆಯವರು ಹೇಳುತ್ತಿದ್ದ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡು, ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಉದ್ಯೋಗ ದೊರೆತರೂ ಅಲ್ಲಿ ನಡೆಯುತ್ತಿದ್ದ ವ್ಯಾಪಕ ಭ್ರಷ್ಟಾಚಾರದಿಂದ ಬೇಸತ್ತು ರಾಜೀನಾಮೆ ಸಲ್ಲಿಸಿ ಹೊರಬಂದುದು, ಆಕಸ್ಮಿಕವಾಗಿ ಪತ್ರಿಕೋದ್ಯಮಕ್ಕೆ ಬಂದುದು, ಲೋಕವಾಣಿ: ವಿಶಾಲ ಕರ್ನಾಟಕ, ಕನ್ನಡ ಪ್ರಭ, ಪ್ರಧಾನ ಸಂಪಾದಕರಾಗಿ ವಿಜಯ ಕರ್ನಾಟಕ, ಈಗ ಮೈಸೂರಿನ ಪ್ರಜಾನುಡಿ ಪತ್ರಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವುದು, ಹೀಗೆ 45 ವರ್ಷಗಳ ತಮ್ಮ ಪತ್ರಿಕೋದ್ಯಮ ವೃತ್ತಿಯ ಅನೇಕ ಘಟನೆಗಳನ್ನು ಡಿ. ಮಹಾದೇವಪ್ಪ ಸ್ಮರಿಸಿಕೊಂಡರು.



ಶ್ರೀ ಮಹದೇವಪ್ಪ ದಂಪತಿಗಳಿಗೆ ಶ್ರೀ ವೂಡೇ ಪಿ ಕೃಷ್ಣ ಅವರಿಂದ ಗೌರವ ಸಮರ್ಪಣೆ,
ಫೋಟೋ: ಡಾ. ಟ. ಗೋವಿಂದರಾಜು

650 ರೂ. ಸಂಬಳದ ಸಬ್ ರಿಜಿಸ್ಟ್ರಾರ್ ಆಫೀಸಿನ ಕೆಲಸ ಬಿಟ್ಟು ಕನ್ನಡ ಪ್ರಭದಲ್ಲಿ 200 ರೂ. ಸಂಬಳದ ಕೆಲಸಕ್ಕೆ ಸೇರಿದ್ದು ತಮಗೇನೂ ಬೇಸರವಾಗಲಿಲ್ಲ ಎಂದು ಹೇಳಿದ ಮಹಾದೇವಪ್ಪ ಸಭಿಕರ ಅನೇಕ ಪ್ರಶ್ನೆಗಳನ್ನು ಉತ್ತರಿಸಿದರು. "ಇಂದಿರಾಗಾಂಧಿ ಅಂತಹವರಿಗೂ ಹೆದರದಿದ್ದ ಖಾದ್ರಿ ಶಾಮಣ್ಣ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದೆನಲ್ಲಾ ಎಂಬ ಹೆಮ್ಮೆ ನನಗಿದೆ. ಅವರ ಹೆಸರಿನಲ್ಲಿ ಪತ್ರಕರ್ತರ ಸಂಘದಿಂದ ಪ್ರಶಸ್ತಿ ಗಳಿಸಿರುವುದು ಹೆಚ್ಚಿನ ಸಂತಸ ಉಂಟು ಮಾಡಿದೆ. ಸತ್ಯನಾರಾಯಣ, ಜಿ.ಎಸ್. ರಾಮರಾವ್, ಜಗ್ಗು ನಾರಾಯಣ ಮೊದಲಾದ ದಿಗ್ಗಜರು ನನ್ನನ್ನು ಪ್ರೋತ್ಸಾಹಿಸಿದರು. ಷಾ ಆಯೋಗ ಮತ್ತು ಗ್ರೋವರ್ ಆಯೋಗದ ನಡವಳಿಕೆಗಳ ಕುರಿತು, ಕಳ್ಳಭಟ್ಟಿ ಮತ್ತು ಸರ್ಕಸ್ ದುರಂತಗಳ ಬಗೆಗೆ ಉತ್ತಮವಾಗಿ ವರದಿ ಮಾಡಿದ್ದೆ. ಅನೇಕ ತನಿಖಾ ವರದಿಗಳಿಂದಾಗಿ ಕೆಲಸ ಕಳೆದುಕೊಳ್ಳುವ ಸಂದರ್ಭ ಬಂದರೂ ಸಂಪಾದಕರಾಗಿದ್ದ ಖಾದ್ರಿ ಶಾಮಣ್ಣ ಮೊದಲಾದವರು ನನ್ನ ರಕ್ಷಣೆಗಿದ್ದರು. ಪ್ರಸ್ತುತ, ಟಿ.ವಿ. ಮಾಧ್ಯಮಗಳು ಎಷ್ಟೇ ಮಿಂಚುತ್ತಿದ್ದರೂ ಪತ್ರಿಕೆಗಳ ಪ್ರಾಮುಖ್ಯ ಕಡಿಮೆಯಾಗಿಲ್ಲ.

ಮೈಸೂರಿನಿಂದ ವಿಶೇಷ ಅತಿಥಿಯಾಗಿ ಆಗಮಿಸಿದ್ದ ಮ್ಯಾಜಿಷಿಯನ್, ಮ್ಯೂಸಿಷಿಯನ್, ಇಂಜಿನಿಯರ್ ಡಿ. ರಮೇಶ್ ಕಾಮತ್ ಅವರು ಅನೇಕ ಮ್ಯಾಜಿಕ್‌ಗಳ ಮೂಲಕ ಸಭಿಕರನ್ನು ರಂಜಿಸಿದರು. "ಆವ್ಯೆಜಾಸ ಎಂದರೆ, ಆಧ್ಯಾತ್ಮಿಕ, ವೈಜ್ಞಾನಿಕ, ಜಾತ್ಯತೀತ ಮತ್ತು ಸರ್ವೋದಯ ತತ್ವಗಳನ್ನು ರೂಢಿಸಿಕೊಳ್ಳಿ ಎಂದು ಕರೆ ನೀಡಿದರು.

ಮಹಾದೇವಪ್ಪ ಅವರನ್ನು ಅಭಿನಂದಿಸಿ ಮಾತನಾಡಿದ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ "10 ಪುಸ್ತಕಗಳನ್ನು ಓದಿದರೂ ಸಿಗದ ಒಳನೋಟ ಅನುಭಾವಿ ಪತ್ರಕರ್ತ ಮಹಾದೇವಪ್ಪನವರ ಮಾತುಗಳಿಂದ ಸಿಕ್ಕಿದೆ. ಗಾಂಧೀಜಿ ಬೋಧಿಸಿದ ಪತ್ರಿಕಾ ಧರ್ಮವನ್ನು ಇವರು ಪಾಲಿಸಿದ್ದಾರೆ. ಇವರ ಯಶಸ್ಸಿನ ಹಿಂದೆ ಪತ್ನಿ ಮಂಜುಳ ಅವರೂ ಇದ್ದಾರೆಂಬುದನ್ನು ಮರೆಯಬಾರದು" ಎಂದರಲ್ಲದೆ, ಆತ್ಮೀಯ ಅನೌಪಚಾರಿಕ ಸಮಾರಂಭ ಏರ್ಪಡಿಸಿದ ಮನು ಪಾಟೀಲರನ್ನು ಹಾರ್ದಿಕವಾಗಿ ಅಭಿನಂದಿಸಿದರು.

ಅಕೌಂಟೆಂಟ್ ಜನರಲ್ ಆಫೀಸಿನ ವಿಶ್ರಾಂತ ಅಕೌಂಟ್ಸ್ ಆಫೀಸರ್ ಮಂಜುಳಾ (ಮಹಾದೇವಪ್ಪನವರ ಪತ್ನಿ), ವಿಧಾನ ಪರಿಷತ್ ಸದಸ್ಯ ಕೊಂಡಜ್ಜಿ ಮೋಹನ, ಹಿರಿಯ ಸಾಹಿತಿ ಡಾ. ಜಿ. ಕೃಷ್ಣಪ್ಪ, ಬೆಂಗಳೂರು ನ.ಜಿ. ಕ.ಸಾ.ಪ. ಮಾಜಿ ಅಧ್ಯಕ್ಷ ಶ್ರ.ದೇ. ಪಾರ್ಶ್ವನಾಥ, ಕವಯತ್ರಿ ಡಾ. ರಾಣಿಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು. ಅತಿಥಿ, ಅಭ್ಯಾಗತರೆಲ್ಲರಿಗೂ ಸುಗ್ರಾಸ ಭೋಜನದ ವ್ಯವಸ್ಥೆಯನ್ನು ಮನುಪಾಟೀಲ ಮತ್ತು ಗೆಳೆಯರು ಮಾಡಿದ್ದರು.

ನಮ್ಮ ರಾಜ್ಯಪ್ರಗತಿ

ಫೆಬ್ರವರಿ 25, 2020

ನಿಜವಾದ ಆದರ್ಶ ದಂಪತಿಗಳು ಕಸ್ತೂರ್ ಬಾ ಮತ್ತು ಗಾಂಧೀಜಿ

-ಡಾ. ವೂಡೇ ಪಿ. ಕೃಷ್ಣ



ಡಾ. ವೂಡೇ ಪಿ. ಕೃಷ್ಣ ಅವರಿಂದ ಉದ್ಘಾಟನೆ ಏಕಾಂಬರೇಶ್ವರ, ಸಿಸಿರಾ, ಬಿ.ಸಿ. ಲೋಕನಾಥ್ ಮತ್ತು ಡಾ. ರಾಣಿ ಗೋವಿಂದರಾಜು ಇದ್ದಾರೆ.

"ಮಹಾತ್ಮಗಾಂಧಿ, ಕಸ್ತೂರ್‌ಬಾ ಗಾಂಧಿ, ಕುವೆಂಪು ಮತ್ತು ಅ.ನ.ಕೃ- ಈ ನಾಲ್ವರು ಮಹಾಚೇತನಗಳನ್ನು ಸ್ಮರಿಸಿಕೊಂಡು ಅವರು ಬೋಧಿಸಿದಂತೆ ನಡೆದರೆ ನೀವು ಸತ್ಪ್ರಜೆಗಳಾಗುತ್ತೀರಿ" ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದ ಶಿಕ್ಷಣ ತಜ್ಞ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ ಕೃಷ್ಣ" ತಮ್ಮ ಅಹಿಂಸಾತ್ಮಕ ಹೋರಾಟದಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಅಪರೂಪದ ರಾಜಕಾರಣಿ ಮಹಾತ್ಮಗಾಂಧಿ. ಕಟ್ಟಕಡೆಯ ಮನುಷ್ಯನೂ ನೆಮ್ಮದಿಯಾಗಿರಬೇಕೆಂಬ ಕನಸು ಕಾಣುತ್ತಿದ್ದ ಅವರು ನಾನು ಬಡವರ ಸೇವಕ ಎಂದು ಭಾವಿಸಿದ್ದರು. ಸೇವೆ ಮತ್ತು ತ್ಯಾಗಕ್ಕೆ ಮತ್ತೊಂದು ಹೆಸರಿನಂತಿದ್ದ ಕಸ್ತೂರ್‌ಬಾ ಪತಿಯ ಪ್ರೇರಣೆಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ, 1944ರಲ್ಲಿ ಆಗಾಖಾನ್ ಸೆರೆಮನೆಯಲ್ಲೇ ನಿಧನ ಹೊಂದುತ್ತಾರೆ. ನಿಜವಾದ ಆದರ್ಶ ದಂಪತಿಗಳು ಎಂದರೆ ಗಾಂಧೀಜಿ ಮತ್ತು ಕಸ್ತೂರ್‌ಬಾ, ಗಾಂಧೀಜಿ ಅವರ ತತ್ವಗಳಂತೆ ನಡೆದ ಕುವೆಂಪು ಸರ್ವೋದಯವಾಗಲಿ ಸರ್ವರಲಿ, ಸರ್ವ ಜನಾಂಗದ ಶಾಂತಿಯ ತೋಟ ಮೊದಲಾದ ಮಹಾನ್ ಚಿಂತನೆಗಳನ್ನು ತಮ್ಮ ಬರಹಗಳ ಮೂಲಕ ಹರಿಯಬಿಟ್ಟರು. ಈಗ ನಾಡಗೀತೆಯಾಗಿರುವ ಕುವೆಂಪು ರಚಿಸಿರುವ ಜಯಭಾರತ ಜನನಿಯ ತನುಜಾತೆ ಗೀತೆ ರಾಷ್ಟ್ರ ಗೀತೆಯಾದ ಜನಗಣಮನಗೀತೆಯ ಮಟ್ಟದಲ್ಲೇ ಇದೆ. 1960ರ ದಶಕದಲ್ಲಿ ತಮ್ಮ ರಚನಾತ್ಮಕ ಹೋರಾಟದ ಮೂಲಕ ಕನ್ನಡಕ್ಕೆ ಶಕ್ತಿ ತಂದು ಕೊಟ್ಟವರು ಅ.ನ.ಕೃ. ಈ ಚೇತನಗಳು ಇದ್ದ ದೇಶದಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಪುಣ್ಯ" ಎಂದು ಅಭಿಪ್ರಾಯಪಟ್ಟರು.

ಅ.ನ.ಕೃ. ಕನ್ನಡ ಸಂಘ ಮತ್ತು ಶೇಷಾದ್ರಿಪುರಂ ಪ್ರೌಢಶಾಲೆಗಳ ಜಂಟಿ ಸಹಯೋಗದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣದಲ್ಲಿ ಏರ್ಪಾಡಾಗಿದ್ದ "ಕಸ್ತೂರ್‌ಬಾ ಮತ್ತು ಗಾಂಧೀಜಿ ಅವರ 150ನೇ ಜನ್ಮ ದಿನೋತ್ಸವ ಹಾಗೂ ಜಗದ ಕವಿ ಯುಗದ ಕವಿ ಕುವೆಂಪು ಅವರ 116ನೇ ಜನ್ಮ ದಿನೋತ್ಸವದ ಅಂಗವಾಗಿ ವಿಚಾರ ಸಂಕಿರಣ"ವನ್ನು ಉದ್ಘಾಟಿಸಿ ಡಾ. ವೂಡೇ ಪಿ.ಕೃಷ್ಣ ಮಾತನಾಡಿದರು.

ಶಿಕ್ಷಕ ಮಂಜುನಾಥ್ ನಿರೂಪಿಸಿದ ಕಾರ್ಯಕ್ರಮ ವಿದ್ಯಾರ್ಥಿಗಳು ನಾಡಗೀತೆ ಹಾಡುವುದರೊಂದಿಗೆ ಆರಂಭವಾಯಿತು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ಏಕಾಂಬರೇಶ್ವರ ಸ್ವಾಗತಿಸಿದರು.

ವಿಚಾರ ಸಂಕಿರಣದಲ್ಲಿ ವಿಷಯ ಮಂಡಿಸಿದ ಹಿರಿಯ ಸಾಹಿತಿ ಹಾಗೂ ಕನ್ನಡ ಪ್ರಾಧ್ಯಾಪಕ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) "ಚಾರಿತ್ರ್ಯವಿಲ್ಲದ ವಿದ್ಯೆ ಸಾಮಾಜಿಕ ಪಾಪ ಎಂದು ಭಾವಿಸಿದ್ದ ಗಾಂಧೀಜಿ ಹುಟ್ಟು ಶ್ರೀಮಂತರಾಗಿದ್ದರೂ ಈ ದೇಶದ ಕಡುಬಡವರಿಗಾಗಿ ತಾವೂ ಕೊನೆಯವರೆಗೆ ಬಡವರಂತೆ ಬಾಳಿದರು. ಅಮೆರಿಕಾದ ಒಬಾಮ, ನೆಲ್ಸನ್ ಮಾಂಡೇಲರೇ ಅಲ್ಲದೆ ಇಂಗ್ಲೆಂಡಿನ ಜನರು ಗಾಂಧೀಜಿಯವರನ್ನು ದೇವರೆಂದು ಪೂಜಿಸಿದರೆ, ನಾವು ಗಾಂಧಿ ಕ್ಲಾಸ್, ಮರಿ ಗಾಂಧಿ ಇತ್ಯಾದಿ ಮಾತುಗಳಿಂದ ಅವರನ್ನು ಲೇವಡಿ ಮಾಡುತ್ತೇವೆ. ನೂರು ದೇವರುಗಳನ್ನು ನೂಕಾಚೆ ದೂರ ಎಂದು ಹೇಳಿದ ಕುವೆಂಪು ಅವರ ಮಾತುಗಳನ್ನು ಧಿಕ್ಕರಿಸಿ, ಸಾವಿರಾರು ದೇವರುಗಳನ್ನು ಸೃಷ್ಟಿಸಿಕೊಂಡಿದ್ದೇವೆ. ಕುವೆಂಪು ಅವರ ಕೃತಿಗಳನ್ನು ಓದಿ ಅರ್ಥೈಸಿಕೊಂಡಿದ್ದರೆ ಈ ಮೂಢ ನಂಬಿಕೆಯಿಂದ ದೂರವಾಗಬಹುದಾಗಿತ್ತು. ಮಾತೃಭಾಷೆ ಶಿಕ್ಷಣಕ್ಕೆ ಗಾಂಧೀಜಿ, ಕುವೆಂಪು, ಅನಕೃ ಇವರೆಲ್ಲರೂ ಒತ್ತು ನೀಡಿದ್ದಾರೆ. ಮಂದಿರ, ಮಸೀದಿ, ಚರ್ಚುಗಳ ಬದಲು ಒಂದು ಸುಸಜ್ಜಿತ ಶಾಲೆ, ಬಡ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯಗಳು ಆಗಬೇಕೆಂಬುದು ಗಾಂಧೀಜಿ ಮತ್ತು ಕುವೆಂಪು ಅವರ ಇಚ್ಛೆಯಾಗಿತ್ತು. ಅವರ ಬಯಕೆಯಂತೆ ಶಿಕ್ಷಣ ಸಮಾಜ ಸೇವೆಗೆ ಮೀಸಲಾಗಿರಲಿ" ಎಂದು ತಮ್ಮ ಮನದಾಳದ ಆಶಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಲೇಖಕಿ ಡಾ. ರಾಣಿಗೋವಿಂದರಾಜು ಕಸ್ತೂರ್‌ಬಾ ಮತ್ತು ಗಾಂಧೀಜಿ ಇವರಿಬ್ಬರ ದೇಹಗಳು ಬೇರೆ ಬೇರೆ ಆಗಿದ್ದರೂ ಒಂದೇ ಆತ್ಮ ಅವರದಾಗಿತ್ತು. ಎಲ್ಲಾ ಧರ್ಮಗಳನ್ನು ಗೌರವಿಸುತ್ತಿದ್ದ ಗಾಂಧೀಜಿ ತಮ್ಮ ಮೇಲೆ ಹಲ್ಲೆ ಮಾಡಿದವರನ್ನೂ ಕ್ಷಮಿಸುವ ದೊಡ್ಡ ಗುಣ ಹೊಂದಿದ್ದರು. ಗಾಂಧೀಜಿಯ ಹೆಗಲಿಗೆ ಹೆಗಲಾಗಿದ್ದವರು ಕಸ್ತೂರ್‌ಬಾ, ಮನುಜ ಮತ ವಿಶ್ವ ಪಥವನ್ನು ಬೋಧಿಸಿದ ಕುವೆಂಪು ಒಬ್ಬ ಆಧ್ಯಾತ್ಮಿಕ ಕವಿ. ಕನ್ನಡಕ್ಕೆ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಎಂದು ಹೇಳಿದ ಅವರು ಕನ್ನಡಕೆ ಹೋರಾಡು ಕನ್ನಡದ ಕಂದ ಎಂದು ಕನ್ನಡ ಮಕ್ಕಳಿಗೆ ಕರೆ ನೀಡಿದರು. ಸತ್ತಂತಿದ್ದ ಕನ್ನಡಿಗರನ್ನು ಬಡಿದೆಚ್ಚರಿಸಿದರು" ಎಂದು ಹೇಳಿದರು.

ಶೇಷಾದ್ರಿಪುರಂ ಪ್ರೌಢಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಬಿ.ಸಿ. ಲೋಕನಾಥ್, ಕವಯತ್ರಿ ಶಾಂತಲಾ ಸುರೇಶ್ ಉಪಸ್ಥಿತರಿದ್ದರು.

ವಿಶ್ವವಾಣಿ

ಬೆಂಗಳೂರು
14.02.2020 ಶುಕ್ರವಾರ
vishwavani.news



ಶೇಷಾದ್ರಿಪುರ ಪ್ರೌಢಶಾಲೆಯಲ್ಲಿ ಕಸ್ತೂರಿ ಬಾ ಮತ್ತು ಗಾಂಧೀಜಿ ಅವರ 150ನೇ ಜನ್ಮದಿನೋತ್ಸವದ ಕಾರ್ಯಕ್ರಮವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ.ಪಿ.ಕೃಷ್ಣ ಉದ್ಘಾಟಿಸಿದರು, ಈ ಸಂದರ್ಭದಲ್ಲಿ ಸಾಹಿತಿ ಡಾ. ಎಸ್.ರಾಮಲಿಂಗೇಶ್ವರ, ಲೇಖಕಿ ಡಾ. ರಾಣಿ ಗೋವಿಂದರಾಜು, ಮುಖ್ಯೋಪಾಧ್ಯಾಯರಾದ ಬಸಪ್ಪ ಇದ್ದರು.

ಜಯ ಕಿರಣ 14.02.2020 ಶುಕ್ರವಾರ



ಬೆಂಗಳೂರಿನ ಶೇಷಾದ್ರಿಪುರಂ ಪ್ರೌಢಶಾಲೆಯ ಅನನ್ಯ ಕನ್ನಡ ಸಂಘವು ಆಯೋಜಿಸಿದ್ದ ಕಸ್ತೂರ್ ಬಾ ಮತ್ತು ಗಾಂಧೀಜಿ ಅವರ 150ನೇ ಜನ್ಮದಿನೋತ್ಸವವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಉದ್ಘಾಟಿಸಿದರು. ಕಸ್ತೂರ್ ಬಾ ಮತ್ತು ಗಾಂಧೀಜಿ ಬದುಕಿನ ಮಾನವೀಯ ಮೌಲ್ಯಗಳ ಬಗ್ಗೆ ವಿಷಯ ಮಂಡಿಸಿದ ಹಿರಿಯ ಸಾಹಿತಿ ಡಾ.ಎಸ್.ರಾಮಲಿಂಗೇಶ್ವರ, ಹಿರಿಯ ಲೇಖಕಿ ಡಾ.ರಾಜೇ ಗೋವಿಂದರಾಜು, ಮುಖ್ಯೋಪಾಧ್ಯಾಯರು, ಶ್ರೀ ಏಕಾಂಬರೇಶ್ವರ ಸಂಘದ ಅಧ್ಯಕ್ಷ ಬಸಪ್ಪ ಹಾಜರಿದ್ದರು.

ವಾರ್ತಾ ಭಾರತಿ
ಶುಕ್ರವಾರ, ಫೆಬ್ರವರಿ 14, 2020



ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಐಕ್ಯ ಕನ್ನಡ ಸಂಘ ಆಯೋಜಿಸಿದ್ದ ಕಸ್ತೂರಿ ಬಾ ಮತ್ತು ಮಹಾತ್ಮ ಗಾಂಧಿ ಜನ್ಮದಿನದ ಕಾರ್ಯಕ್ರಮಕ್ಕೆ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೋಡೆ ಪಿ. ಕೃಷ್ಣ ಚಾಲನೆ ನೀಡಿದರು. ಈ ವೇಳೆ ಲೇಖಕ ಡಾ.ಎಸ್. ರಾಮಲಿಂಗೇಶ್ವರ, ರು.ಬಸಪ್ಪ, ಲೇಖಕಿ ಡಾ.ರಾಣಿ ಗೋವಿಂದರಾಜು ಹಾಜರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

VIJAYAVANI BENGALURU
ಶುಕ್ರವಾರ 31 ಜನವರಿ 2020
31 JANUARY 2020

ಸ್ವಾಮಿ ಶಾಂತಿವ್ರತಾನಂದ ಕಳವಳ | ಗಾಂಧಿ ಭವನದಲ್ಲಿ ಸರ್ವೋದಯ ದಿನ

ಮಾನವೀಯ ಮೌಲ್ಯ ಕುಸಿಯುತ್ತಿದೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಆಧುನಿಕ ಜಗತ್ತಿನಲ್ಲಿ ಯುವಜನತೆಗೆ ಎಲ್ಲವೂ ಸುಲಭವಾಗಿ ಸಿಗುತ್ತಿದೆ. ಆದ್ದರಿಂದ ಅವರಲ್ಲಿ ಮಾನಸಿಕ, ಭಾವನಾತ್ಮಕ ಪ್ರಕ್ರಿಯೆಗಳು ಕುಗ್ಗುತ್ತ ಮಾನವೀಯತೆ ಕಣ್ಮರೆಯಾಗುತ್ತಿದೆ ಎಂದು ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದ ಕಳವಳ ವ್ಯಕ್ತಪಡಿಸಿದ್ದಾರೆ.

ಸಂಸ್ಕಾರ ಕಣ್ಮರೆಯಾಗಲು ಓದಿನ ಹವ್ಯಾಸ ಕ್ಷೀಣಿಸಿರುವುದು ಕಾರಣ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸೇರಿ ವಿವಿಧ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಗಾಂಧಿ ಭವನದಲ್ಲಿ ಗುರುವಾರ ಏರ್ಪಡಿಸಲಾಗಿದ್ದ ಬಾ-ಬಾಪು 150ನೇ ಜನ್ಮ ವರ್ಷಾಚರಣೆ, ಸರ್ವೋದಯ ದಿನ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರದಲ್ಲಿ ಮಾತನಾಡಿದರು.

ತಂತ್ರಜ್ಞಾನದ ಪ್ರಭಾವ ಹೆಚ್ಚಿದಂತೆಲ್ಲ ಜಗತ್ತಿನಲ್ಲಿ ಬದಲಾವಣೆಗಳಾಗುತ್ತಿವೆ. ಆಧುನಿಕತೆಯಿಂದಾಗಿ ಎಲ್ಲವೂ ಸುಲಭವಾಗಿ ಸಿಗುತ್ತಿದೆ. ಜತೆಗೆ ಭಾವನೆಗಳು ಕಡಿಮೆಯಾಗುತ್ತಿದ್ದು, ಮಾನವೀಯ ಮೌಲ್ಯ ಕಣ್ಮರೆಯಾಗುತ್ತಿದೆ. ಯುವಕರಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಅದು ಕೂಡ ಸಂಸ್ಕಾರ ಕಡಿಮೆಯಾಗಲು ಕಾರಣ ಎಂದರು.

ಹಿಂಸೆ ಪ್ರತಿಪಾದಿಸುವವರ ವಿರುದ್ಧ ಎಚ್ಚರಿಕೆ: ಗಾಂಧೀಜಿ ನಿಲುವುಗಳನ್ನು ಕೆಲವರು ಒಪ್ಪಲಿಲ್ಲ. ತಮ್ಮ ಅಸಹನೆಗೆ ಸಾವೇ ಉತ್ತರ ಎಂದು ನಿರ್ಧರಿಸಿ ಅವರನ್ನು ಕೊಲ್ಲಲಾಯಿತು. ಗಾಂಧೀಜಿ ತಮ್ಮ ಜೀವನದುದ್ದಕ್ಕೂ ಶಾಂತಿಯ ಮಂತ್ರ ಜಪಿಸಿದರು. ಆದರೆ, ಅಂತಹವರನ್ನು ಕೊಲೆ ಮಾಡುವ ಮೂಲಕ ಶಾಂತಿ, ಅಹಿಂಸೆಗೆ ಬೆಲೆಯಿಲ್ಲದಂತೆ ಮಾಡಲಾಯಿತು. ಹಿಂಸೆಯನ್ನು ಪ್ರತಿಪಾದಿಸುವವರ ವಿರುದ್ಧ ಎಚ್ಚೆತ್ತುಕೊಳ್ಳಬೇಕು. ಧರ್ಮ, ಜಾತಿಗಳ ನಡುವೆ ಭಿನ್ನಾಭಿಪ್ರಾಯ ತರುವವರಿಂದ ಎಚ್ಚರಿಕೆಯಿಂದ ಇರಬೇಕು ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಸಲಹೆ ನೀಡಿದರು.



ಗಾಂಧಿ ಭವನದಲ್ಲಿ ಏರ್ಪಡಿಸಲಾಗಿದ್ದ ಸರ್ವೋದಯ ದಿನ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

> ನಮ್ಮಲ್ಲಿನ ಶಿಕ್ಷಣ ಪದ್ಧತಿ ಕೇವಲ ಉದ್ಯೋಗ ಗಳಿಸಲಷ್ಟೇ ಸೀಮಿತವಾಗಿದೆ. ಹಾಗಾಗಿ ಮಕ್ಕಳಲ್ಲಿ ಜ್ಞಾನ ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯಾಗಬೇಕಿದೆ.
>
> | ಸ್ವಾಮಿ ಶಾಂತಿವ್ರತಾನಂದ
> ಮೈಸೂರು ರಾಮಕೃಷ್ಣ ಆಶ್ರಮ

ಸ್ವಾಮಿ ಶಾಂತಿವ್ರತಾನಂದ ವಿರಚಿತ 'ಮಹಾತ್ಮ ಗಾಂಧೀಜಿ ಅವರ 'ಶೈಕ್ಷಣಿಕ ಸಿದ್ಧಾಂತ', ಸಿದ್ದವನಹಳ್ಳಿ ಕೃಷ್ಣಶರ್ಮ ಅವರ ಕನ್ನಡ ಅನುವಾದ 'ನಯೀ-ತಾಲೀಂ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಹಿರಿಯ ಪತ್ರಕರ್ತ, ಸಾಹಿತಿ ಡಾ. ಎನ್. ಜಗದೀಶ್ ಕೊಪ್ಪ ಅವರಿಗೆ ಜಯಶ್ರೀ ಟ್ರಸ್ಟ್ ಪುರಸ್ಕಾರ ನೀಡಲಾಯಿತು. ಸರ್ವೋದಯ ಕಾರ್ಯಕರ್ತ ಶಂಕರ ಉತ್ತೂರ, ಸ್ವಾತಂತ್ರ್ಯ ಹೋರಾಟಗಾರ ನಾಮದೇವ ಶೆಣೈ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಕೆ. ರೋಹಿಣಿ ಮತ್ತಿತರರಿದ್ದರು.

ಉದಯವಾಣಿ

ಶುಕ್ರವಾರ, ಜನವರಿ 31, 2020

ಯುವ ಜನರಿಗೆ ಗಾಂಧಿ ವಿಚಾರ ತಲುಪಲಿ

ಗಾಂಧೀಜಿ ಜೀವನ ಹಲವರಿಗೆ ಪ್ರೇರಣೆ । ಮತ್ತೆ ಪ್ರಜಾಪ್ರಭುತ್ವದ ನೆಲೆ ಜಾರಿಗೆ ತರುವುದು ಅವಶ್ಯ

ಕಂದಕ ಸೃಷ್ಟಿಸುವವರ ಬಗ್ಗೆ ಎಚ್ಚರ

ಬೆಂಗಳೂರು: ಧರ್ಮ-ಧರ್ಮಗಳ ನಡುವೆ ಕಂದಕ ಸೃಷ್ಟಿಸುವವರ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಹೇಳಿದ್ದಾರೆ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗುರುವಾರ ಗಾಂಧೀ ಭವನದಲ್ಲಿ ಬಾ-ಬಾಪು 150ನೇ ಜನ್ಮ ವರ್ಷಾಚರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮೂಲಭೂತವಾದಿಗಳು ಜಾತಿ-ಜಾತಿಗಳ ನಡುವೆ, ಧರ್ಮ-ಧರ್ಮಗಳ ನಡುವೆ ಕಂದಕವನ್ನು ತಂದಿಡುವ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಎಚ್ಚರ ವಹಿಸುವುದು ಅಗತ್ಯ ಎಂದು ತಿಳಿಸಿದರು.


ವಿಮರ್ಶಕ ಡಾ. ಎಸ್. ಜಗದೀಶ್ ಕೊಪ್ಪ, ಮೈಸೂರು ರಾಮಕೃಷ್ಣಾಶ್ರಮದ ಸ್ವಾಮಿ ಶಾಂತಿವ್ರತಾನಂದ, ಸರ್ವೋದಯ ಕಾರ್ಯಕರ್ತ ಶಂಕರ ಉತ್ತೂರ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ಗಾಂಧೀ ಸೇವಾ ಪ್ರಶಸ್ತಿ ಪುರಸ್ಕೃತ ಸುಶ್ರೀ ಚೆನ್ನಮ್ಮ ಹಳ್ಳಿಕೇರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗುರುವಾರ ಗಾಂಧೀ ಭವನದಲ್ಲಿ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು. ವಿಮರ್ಶಕ ಡಾ. ಎಸ್. ಜಗದೀಶ್ ಕೊಪ್ಪ ಇತರರಿದ್ದರು.

ಹೊಸ ದಿಗಂತ
ಶುಕ್ರವಾರ
31 ಜನವರಿ 2020

ಗಾಂಧೀಜಿಯವರ ಸಾಧನೆ ಸಮಾಜಕ್ಕೆ ತಲುಪಿಸುವುದು ಸವಾಲಿನ ಕೆಲಸ



ಬೆಂಗಳೂರು: ನಮ್ಮ ದೈನಂದಿನ ಬದುಕಿನಲ್ಲಿ ಗಾಂಧೀಜಿ ನೆನಪಿಸಿಕೊಳ್ಳಬೇಕಿದೆ. ಅದು ಎಷ್ಟು ಎನ್ನುವುದು ಇಂದಿನ ಅತಿ ದೊಡ್ಡ ಪ್ರಶ್ನೆ. ಆರ್ಭಟದ ಈ ದಿನಗಳಲ್ಲಿ ಗಾಂಧೀಜಿಯವರ ಸಾಧನೆಯನ್ನು ಸಮಾಜಕ್ಕೆ ತಲುಪಿಸುವುದು ಸವಾಲಿನ ಕೆಲಸ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಆಯೋಜಿಸಲಾಗಿದ್ದ ಬಾ ಬಾಪು ಗಾಂಧೀಸ್ಮೃತಿ ಮಾಲೆಯ 15 ಪುಸ್ತಕ ಲೋಕಾರ್ಪಣೆ ಮತ್ತು ಸರ್ವೋದಯ ದಿನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯವರನ್ನು ಸಮಾಜ ಹೇಗೆ ನೋಡುತ್ತಿದೆ? ಅವರಿಂದ ಪ್ರೇರಣೆ ಪಡೆದವರೆಷ್ಟು ಎಂದು ತುಲನೆ ಮಾಡಿನೋಡಬೇಕಾದ ಸ್ಥಿತಿಯಲ್ಲಿ ನಾವಿದ್ದೇವೆ. ಹಲವರು ಗಾಂಧೀಜಿಯವರನ್ನು ಸಿನಿಮಾ ಮೂಲಕ ಮತ್ತೆ ಸಮಾಜಕ್ಕೆ ಪರಿಚಯಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಇದೆಲ್ಲದಕ್ಕಿಂತ ಮುಖ್ಯವಾಗಿ ಇತ್ತೀಚಿನ ದಿನದಲ್ಲಿ ಗಾಂಧೀಜಿಯವರನ್ನು ಸಿನಿಕತೆಯಿಂದ ನೋಡುವ ಮನಸ್ಥಿತಿ ಸಮಾಜದಲ್ಲಿ ಉದ್ಭವವಾಗುತ್ತಿದೆ. ಇದು ಹೋಗಲಾಡಿಸುವುದು ನಮ್ಮೆಲ್ಲರ ಕೆಲಸ ಎಂದರು.

15 ಕೃತಿ ಲೋಕಾರ್ಪಣೆ

ಗಾಂಧೀಯಾನ ಟ್ರಸ್ಟ್, ಭಾರತೀಯ ವಿದ್ಯಾಭವನ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲಿಂಗರಾಜು ಬರೆದ ಗಾಂಧಿ ಮತ್ತು ಮೌನ, ಡಾ.ಚೆ.ಗೋ. ರಮೇಶ್‌ರ ಬಾಪೂ- 150, ಡಾ. ವಿಜಯಾ ಸಬ್ಬರಾಜು ರಚಿಸಿದ ಕಸ್ತೂರ ಬಾ (ವ್ಯಕ್ತಿ ವ್ಯಕ್ತಿತ್ವ), ಡಾ. ನಾಗಣ್ಣ ಕಿಲಾರಿ ಸಂಕಲನದ ಈ ಶತಮಾನದ ಗಾಂಧೀ ಕವಿತೆಗಳು, ಸತ್ಯಮಂಗಲ ಮಹಾದೇವ ಸಂಕಲನದ ಕಿರಿಯರು ಕಂಡ ಗಾಂಧಿ ಸೇರಿದಂತೆ 15 ಕೃತಿ ಲೋಕಾರ್ಪಣೆ ಮಾಡಲಾಯಿತು.

ನೀವು ನಮಗೆ ಮೋಹನದಾಸ ಕರಮಚಂದ್ ಗಾಂಧಿಯವರನ್ನು ಕಳುಹಿಸಿಕೊಟ್ಟಿದ್ದರೆ, ನಾವು ಭಾರತಕ್ಕೆ ಮಹಾತ್ಮಾ ಗಾಂಧೀಜಿಯವರನ್ನು ನೀಡಿದ್ದೇವು ಎಂದು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂರಿಗೆ ದಕ್ಷಿಣ ಆಫ್ರಿಕಾದಲ್ಲಿ ಹೇಳಿದ್ದ ನೆಲ್ಸನ್ ಮಂಡೇಲಾರ ರೀತಿಯಲ್ಲಿ ಭಾರತೀಯ ಸಮಾಜ . ಗಾಂಧೀಜಿಯವರ ತತ್ವಾದರ್ಶಗಳನ್ನು ಉಸಿರಾಗಿಸಿಕೊಳ್ಳಬೇಕಿದೆ ಎಂದರು.

ಗಾಂಧೀಜಿ ಸಾಧನೆ ತಲುಪಿಸುವುದು ಸವಾಲಿನ ಕೆಲಸ

ಗಾಂಧೀಜಿಯವರನ್ನು ಸಮಾಜಕ್ಕೆ ಪರಿಚಯಿಸುವ ಕಾರ್ಯ ನಿತ್ಯ ನಿರಂತರವಾಗಬೇಕು. ಆಗ ಸಮಾಜ ಸ್ವಸ್ಥವಾಗಿರುತ್ತದೆ. ಗಾಂಧೀಯಾನ ಟ್ರಸ್ಟ್ 150ಕ್ಕೂ ಅಧಿಕ ಪುಸ್ತಕ ಹೊರತಂದು, ಅವರ ತತ್ವ ಸಿದ್ಧಾಂತವನ್ನು ಪ್ರಚುರಪಡಿಸುವ ಕೆಲಸದಲ್ಲಿ ನಿರತವಾಗಿದೆ. ಈ ಕಾಯಕದಲ್ಲಿ ನಾವೆಲ್ಲ ಜೊತೆಯಾಗೋಣ. ಈಗ ಹೊರತಂದಿರುವ ಕೃತಿಗಳನ್ನು ಹೆಚ್ಚು ಜನರಿಗೆ ತಲುಪಿಸಲು ಸರ್ಕಾರ ಅಗತ್ಯ ಕ್ರಮ ತೆಗೆದುಕೊಳ್ಳುತ್ತದೆ ಎಂದರು.

ತುಮಕೂರು ವಿವಿ ಕುಲಪತಿ ಪ್ರೊ.ವೈ. ಎಸ್. ಸಿದ್ದೇಗೌಡ, ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಭಾರತೀಯ ವಿದ್ಯಾಭವನದ ಎಚ್.ಎನ್. ಸುರೇಶ್, ಗಾಂಧೀ ಯಾನ ಟ್ರಸ್ಟ್‌ನ ಗಿರಿಜಾ ಚಂದ್ರು, ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಣದ ಮೌಲ್ಯ ನಷ್ಟಕ್ಕೆ ಕಳವಳ



ಸರ್ವೋದಯ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಹಿತಿ ಡಾ. ಎನ್. ಜಗದೀಶ್ ಕೊಪ್ಪ ಅವರಿಗೆ ಜಯಶ್ರೀ ಟ್ರಸ್ಟ್ ವತಿಯಿಂದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸರ್ವೋದಯ ಕಾರ್ಯಕರ್ತ ಶಂಕರ ಉತ್ತೂರು, ಡಾ. ವೂಡೇ ಪಿ. ಕೃಷ್ಣ, ನಾಡೋಜ ಪಾಟೀಲ ಪುಟ್ಟಪ್ಪ, ಚೆನ್ನಮ್ಮ ಹಳ್ಳಿಕೇರಿ, ಪುಟ್ಟಮ್ಮ, ನಾಮದೇವ ಶಣೈ, ವೇಮಗಲ್ ಸೋಮಶೇಖರ್ ಮತ್ತಿತರಿದ್ದರು.

ಸಂ.ಕ ಸಮಾಚಾರ ಬೆಂಗಳೂರು

ಶಿಕ್ಷಣ ವ್ಯಕ್ತಿಯನ್ನು ಸರ್ವತೋಮುಖ ಅಭಿವೃದ್ಧಿಗೆ ರೂಪಿಸುವ ಸಾಧನವಾಗಿದ್ದು ಇಂದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ ಎಂದು ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದ ಕಳವಳ ವ್ಯಕ್ತಪಡಿಸಿದರು.

ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಸರ್ವೋದಯ ದಿನಾಚರಣೆ, ಸೇವಾ ಯೋಜನೆ ಕಾರ್ಯಾಗಾರ ಮತ್ತು ಗಾಂಧಿ ಚಿಂತಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣ ಎಂಬುದು ವ್ಯಕ್ತಿಯ ವ್ಯಕ್ತಿತ್ವ ರೂಪಿಸುವ ಅಸ್ತ್ರ ಎಂದು ಮಹಾತ್ಮ ಗಾಂಧಿ ಹೇಳಿದ್ದಾರೆ. ಆದರೆ ಈಗ ಶಿಕ್ಷಣ ಕೇವಲ ಅನ್ನ, ಬಟ್ಟೆ ಪಡೆಯುವ ಸಾಧನವಾಗಿದೆ. ಆದರೆ ನಿಜವಾದ ಶಿಕ್ಷಣ ವ್ಯಕ್ತಿಯನ್ನು ಮಾನಸಿಕ, ಬೌದ್ಧಿಕ, ಅಧ್ಯಾತ್ಮಿಕವಾಗಿ ರೂಪಿಸುವ ಒಂದು ಶಕ್ತಿ. ನಾವು ಪ್ರಜ್ಞಾವಂತ ನಾಗರಿಕರಾಗಬೇಕಾದರೆ ಗಾಂಧೀಜಿ ಜೀವನದ ಮೌಲ್ಯ, ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಹಿರಿಯರಲ್ಲಿ ಆನಂದದ ಕಣ್ಣೀರು ತರಿಸುವಂತಹ ಮೌಲ್ಯಯುತ ಶಿಕ್ಷಣವನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ವಿಶ್ವದ ಎರಡು ದೊಡ್ಡ ಶಕ್ತಿಗಳೆಂದರೆ ಅಣುಶಕ್ತಿ ಮತ್ತು ಆತ್ಮಶಕ್ತಿ. ಆತ್ಮವು ಶಾಂತಿ ಮತ್ತು ಕ್ರಾಂತಿಗಳ ಮಹಾ ಸಂಗಮ ಎಂದು ಗಾಂಧೀಜಿ ಹೇಳುತ್ತಾರೆ. ಸಾಧು, ಸಂತರ ಒಡನಾಟ, ಉತ್ತಮ ಮೌಲ್ಯಗಳ ಮೂಲಕ ಆತ್ಮವು ಪರಿಪಕ್ವ ಫಲವಾಗುವತ್ತ ನಾವು ಕಾರ್ಯ ನಿರ್ವಹಿಸಬೇಕು.

—ಶಂಕರ ಉತ್ತೂರ,
ಸರ್ವೋದಯ ಕಾರ್ಯಕರ್ತ.

ನನಗೆ ಜಾತಿ, ಧರ್ಮದ ಹಂಗಿಲ್ಲ, ದೇವಸ್ಥಾನಗಳಿಗೆ ಕಾಲಿಡುವುದಿಲ್ಲ. ಆದರೆ ಗಾಂಧೀಜಿಯ ವ್ಯಕ್ತಿತ್ವ, ಮೌಲ್ಯಗಳನ್ನು ತಿಳಿಯಲು ಈಗಲೂ ಅವರ ಸಂಚರಿಸಿದ ಸ್ಥಳಗಳಿಗೆ ತೆರಳುತ್ತೇನೆ, ಅದೇ ನನಗೆ ತೀರ್ಥಕ್ಷೇತ್ರ

—ಡಾ. ಎನ್. ಜಗದೀಶ್ ಕೊಪ್ಪ,
ಸಾಹಿತಿ.

ಗಾಂಧೀಜಿ ಹತ್ಯೆಯಿಂದ ಮಾನವೀಯತೆಯು ಕಗ್ಗೊಲೆಯಾಗಿದೆ. ನಿಸ್ವಾರ್ಥದಿಂದ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಇಡೀ ದೇಹವನ್ನೇ ಅರ್ಪಿಸಿದ ಮಹಾತ್ಮನ ಹತ್ಯೆ ನೋವಾಗಿ ಉಳಿದುಕೊಂಡಿದೆ. ಗಾಂಧೀಜಿ ಎಲ್ಲರ ಅಭ್ಯುದಯಕ್ಕಾಗಿ ಸರ್ವೋದಯ ಕಲ್ಪನೆ ನೀಡಿದರು.

—ವೂಡೇ ಪಿ. ಕೃಷ್ಣ, ಟ್ರಸ್ಟಿ,
ಶೇಷಾದ್ರಿಪುರಂ ಶಿಕ್ಷಣ ದತ್ತಿ.

5 ಜಿ ತಂತ್ರಜ್ಞಾನ ಇಂದು ಜಗತ್ತಿನಲ್ಲಿ ಸುಲಭವಾಗಿ ಕೈಗೆಟುಕುತ್ತಿದೆ. ಇದರಿಂದ ಮಾನಸಿಕ, ನೈತಿಕ ಮತ್ತು ಭಾವನಾತ್ಮಕವಾಗಿ ಶಕ್ತಿ ಕುಂದುತ್ತಿದೆ. ತುಂಡು ಬಟ್ಟೆಯನ್ನುಟ್ಟ ಮಹಾತ್ಮ ಗಾಂಧಿ ಇಡೀ ಜಗತ್ತನ್ನು ಸಂಚರಿಸಿ ಸ್ವಾತಂತ್ರ್ಯ ಆಂದೋಲನ ನಡೆಸುವುದರ ಜೊತೆಗೆ ಕುಟುಂಬವನ್ನು ನಿರ್ವಹಿಸಿದರು. ಅವರ ಜೀವನ ಮೌಲ್ಯ ಮತ್ತು ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಗಾಂಧೀಜಿ ಕುರಿತ ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು.

ಪ್ರಜಾವಾಣಿ
ಜನವರಿ 31, 2020

ಸರ್ವೋದಯ ದಿನಾಚರಣೆಯಲ್ಲಿ ಜಗದೀಶ್ ಕೊಪ್ಪ

ಗಾಂಧಿ ಎಂದರೆ ಜೀವನ ವಿಧಾನ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧಿ ಎಂದರೆ ಕೇವಲ ವ್ಯಕ್ತಿಯಲ್ಲ, ಶಕ್ತಿಯೂ ಅಲ್ಲ. ಅದೊಂದು ಜೀವನ ವಿಧಾನ' ಎಂದು ಲೇಖಕ ಎನ್. ಜಗದೀಶ್ ಕೊಪ್ಪ ಅಭಿಪ್ರಾಯಪಟ್ಟರು.

ಗಾಂಧಿ ಭವನದಲ್ಲಿ ಗುರುವಾರ ಆಯೋಜಿಸಿದ್ದ ಸರ್ವೋದಯ ದಿನಾಚರಣೆ, ಸೇವಾ ಯೋಜನೆ ಕಾರ್ಯಾಗಾರ ಮತ್ತು ಗಾಂಧಿ ಚಿಂತಕರೊಂದಿಗೆ ಸಂವಾದದಲ್ಲಿ ಅವರು ಮಾತನಾಡಿದರು.

'ಹಿರಿಯರು ಗಾಂಧಿಯನ್ನು ಆರಾಧನೆಯ ನೆಲೆಯಲ್ಲಿ ನೋಡಿಕೊಂಡು ಬಂದಿದ್ದು, ನಮ್ಮ ತಲೆಮಾರಿನವರು ಗಾಂಧಿಯನ್ನು ಮುಂದಿನ ಪೀಳಿಗೆಗೆ ಹೇಗೆ ತಲುಪಿಸುವ ಬಗ್ಗೆ ಆಲೋಚನೆ ನಡೆಸಿಕೊಂಡು ಬಂದಿದ್ದೇವೆ' ಎಂದರು.

'ಕುಟುಂಬದೊಳಗೇ ಸಾಕಷ್ಟು ನೋವಿದ್ದರೂ, ಅದನ್ನು ಹೊರ ಜಗತ್ತಿಗೆ ತೋರಿಸಿಕೊಳ್ಳದೆ ಇಡೀ ಸ್ವಾತಂತ್ರ್ಯ ಹೋರಾಟದ ಭಾರವನ್ನು ಗಾಂಧಿ ಹೊತ್ತಿದ್ದರು. ಅವರನ್ನು ನಾವು ವಿವಿಧ ಆಯಾಮಗಳಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ. ಆಗ ಮಾತ್ರ ಈವರೆಗೂ ನಮಗೆ ದಕ್ಕದ ಮಹಾತ್ಮ ದಕ್ಕುತ್ತಾರೆ' ಎಂದು ಹೇಳಿದರು.



ಗಾಂಧಿ ಸೇವಾಕರ್ತರಾದ ಪುಟ್ಟಮ್ಮ ರುದ್ರಮುನಿಯಪ್ಪ (ಗೌರವ ಪುರಸ್ಕಾರ), ಎನ್.ಜಗದೀಶ್ ಕೊಪ್ಪ (ಜಯಶ್ರೀ ಟ್ರಸ್ಟ್ ಪುರಸ್ಕಾರ), ಸರ್ವೋದಯ ಕಾರ್ಯಕರ್ತರಾದ ನಾಮದೇವ ಶೆಣೈ (ಗೌರವ ಪುರಸ್ಕಾರ), ಶಂಕರ ಉತ್ತೂರ (ಗೌರವ ಪುರಸ್ಕಾರ) ಅವರನ್ನು ಗೌರವಿಸಲಾಯಿತು. ಹಿರಿಯ ಗಾಂಧಿವಾದಿ ಚೆನ್ನಮ್ಮ ಹಳ್ಳಿಕೇರಿ (ಕುಳಿತವರು ಐದನೇ ಅವರಿಂದ) ಮತ್ತು ಸ್ವಾತಂತ್ರ್ಯ ಹೋರಾಟಗಾರ ಪಾಟೀಲ ಪುಟ್ಟಪ್ಪ, ಡಾ.ರಾಮಲಿಂಗೇಶ್ವರ (ನಿಂತವರಲ್ಲಿ ಮೂರನೆಯವರು), ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಉಪಾಧ್ಯಕ್ಷ ತಿಪ್ಪಣ್ಣಗೌಡ, ಸ್ವಾಮಿ ಶಾಂತಿವ್ರತಾನಂದ, ವೂಡೇ ಪಿ. ಕೃಷ್ಣ ಇದ್ದರು –ಪ್ರಜಾವಾಣಿ ಚಿತ್ರ

ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದ ಮಾತನಾಡಿ, 'ಶಿಕ್ಷಣ ಎಂಬುದು ಸಾಧನೆ ಮತ್ತು ಸಾಧನ ಎಂದು ಗಾಂಧೀಜಿ ಹೇಳುತ್ತಿದ್ದರು. ಆದರೆ, ಇಂದಿನ ಶಿಕ್ಷಣ ಹೊಟ್ಟೆ ಬಟ್ಟೆಗೆ ಸೀಮಿತವಾಗಿದೆ. ಗಾಂಧೀಜಿ ಬದುಕಿನ ಕುರಿತು 100 ಸಂಪುಟಗಳಿವೆ. ಅದರಲ್ಲಿ ಒಂದು ಸಂಪುಟವನ್ನಾದರೂ ಓದುವ ಪ್ರಯತ್ನವನ್ನು ನಾವೆಲ್ಲರೂ ಮಾಡುತ್ತಿಲ್ಲ. ಉತ್ತಮ ಜೀವನ ರೂಪಿಸಿಕೊಳ್ಳಲು ಇಂತವರ ಜೀವನವನ್ನು ಓದಬೇಕು. ಗಾಂಧೀಜಿ ಅವರ ಒಂದೆರಡು ಸಂದೇಶಗಳನ್ನು ನಾವು ಅಳವಡಿಸಿಕೊಂಡರೆ ಸಾರ್ಥಕ ಬದುಕು ನಡೆಸಬಹುದು' ಎಂದು ಹೇಳಿದರು.

ಬಾಪು ಪ್ರಪಂಚ ಸಂಚಿಕೆ ಜತೆಗೆ 5 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಗಾಂಧಿ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕರ್ನಾಟಕ

ಶುಕ್ರವಾರ,31 ಜನವರಿ 2020

ವಿದ್ಯೆ ಜೀವನ ನಿರ್ವಹಣೆಗಷ್ಟೇ ಬಳಕೆ ಸಲ್ಲ

ಸರ್ವೋದಯ ದಿನಾಚರಣೆಯಲ್ಲಿ ಶಾಂತಿವ್ರತಾನಂದ ಸ್ವಾಮೀಜಿ ಅಭಿಮತ

ವಿಕ ಸುದ್ದಿಲೋಕ ಬೆಂಗಳೂರು

ಯುವಜನರು ವಿದ್ಯೆಯನ್ನು ಕೇವಲ ಜೀವನ ನಿರ್ವಹಣೆಗಷ್ಟೇ ಕೇಂದ್ರೀಕರಿಸಿದ್ದಾರೆ. ಇದರ ಬದಲು ವಿದ್ಯೆಯಿಂದ ಪ್ರಜ್ಞಾವಂತರಾಗಲು ಗಮನಹರಿಸುವುದು ಸೂಕ್ತ ಎಂದು ಮೈಸೂರಿನ ರಾಮಕೃಷ್ಣ ಆಶ್ರಮ ಶಾಂತಿವ್ರತಾನಂದ ಸ್ವಾಮೀಜಿ ತಿಳಿಸಿದರು.

ಗಾಂಧೀಜಿ ಕುರಿತ ಪುಸ್ತಕಗಳ ಬಿಡುಗಡೆ

ಹಿರಿಯ ಗಾಂಧಿವಾದಿಗಳಿಗೆ ಸನ್ಮಾನ


ಗಾಂಧಿ ಭವನದಲ್ಲಿ ವಾರ್ತಾ ಇಲಾಖೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಜಂಟಿಯಾಗಿ ಆಯೋಜಿಸಿದ್ದ ಸರ್ವೋದಯ ದಿನಾಚರಣೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಗುರುವಾರ ಮಾತನಾಡಿದರು.

''ಇಂದಿನ ಯುವ ಸಮೂಹ ಗಾಂಧಿ ಚಿಂತನೆಗಳುಳ್ಳ ಕೃತಿಗಳನ್ನು ಓದಲು ಹಿಂಜರಿಯುತ್ತಾರೆ. ಆದರೆ, ಸ್ವತಃ ಗಾಂಧೀಜಿಯವರು ತಮ್ಮ ಕುಟುಂಬದ ಸಮಸ್ಯೆಗಳ ಜತೆ ದೇಶದ ಆಗು-ಹೋಗುಗಳ ಕುರಿತು ನಿತ್ಯವೂ ಅಭ್ಯಸಿಸಿ ಅವುಗಳಿಗೆ ಬರಹ ರೂಪ ನೀಡಿದ್ದಾರೆ. ಇದು 100 ಸಂಪುಟಗಳಲ್ಲಿ ಲಭ್ಯವಿದ್ದು, ಓದಲು ಪ್ರೇರೇಪಿಸುವಂತಿದೆ. ಗಾಂಧಿ ಚಿಂತನೆಗಳು ಇಂದಿಗೂ ಪ್ರಸ್ತುತ ಎಂಬುದನ್ನು ಯುವಜನರು ಮನಗಾಣಬೇಕಿದೆ,'' ಎಂದರು.

ವಿಮರ್ಶಕ ಡಾ.ಎನ್.ಜಗದೀಶ್ ಕೊಪ್ಪ ಮಾತನಾಡಿ ''ಗಾಂಧಿಜೀಯವರ ಚಿಂತನೆಗಳು ಮುಂದಿನ ತಲೆಮಾರಿಗೂ ಮಾದರಿಯಾಗಿವೆ. ಗಾಂಧಿವಾದದ ಕುರಿತು ಏಳುವ ಪ್ರಶ್ನೆಗಳಿಗೆ ಗಾಂಧಿ ಬರಹಗಳು ಉತ್ತರ ನೀಡಲಿವೆ. ಪ್ರಸಿದ್ಧ ವಿಜ್ಞಾನಿ ಲೂಯಿಸ್ ಪಾಸ್ಚರ್ ಅವರು ಗಾಂಧೀಯವರ ಕುರಿತು ಅನ್ನಕ್ಕೆ ಅಧ್ಯಾತ್ಮವನ್ನು ಬೆರೆಸಿದ ಮಹಾತ್ಮ ಎಂಬುದಾಗಿ ಬಣ್ಣಿಸಿದ್ದರು,'' ಎಂದು ಸ್ಮರಿಸಿದರು.

ಪುಸ್ತಕಗಳ ಲೋಕಾರ್ಪಣೆ: ಶಾಂತಿವ್ರತಾನಂದ ಸ್ವಾಮೀಜಿ ಅವರು ರಚಿಸಿರುವ 'ಮಹಾತ್ಮ ಗಾಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ' ಹಾಗೂ 'ನಯೀ-ತಾಲೀಂ', 'ಮಹಾತ್ಮ ಗಾಂಧಿ ಆ್ಯಂಡ್ ಹಿಸ್ ಫಾರಿನ್ ಅಸೋಸಿಯೇಟ್ಸ್' (ಆಂಗ್ಲ ಕೃತಿ) ಮತ್ತು ಪ್ರಾರ್ಥನೆ ಸಮೂಹ ಸೃಜನೆಗಳು ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಹಿರಿಯ ಸರ್ವೋದಯ ಕಾರ್ಯಕರ್ತ ನಾಮ ದೇವ ಶೆಣೈ ಅವರು ಗಾಂಧಿಯವರ 'ವೈಷ್ಣವ ಜನತೋ ...' ಕನ್ನಡ ಅನುವಾದಿತ ಹಾಡನ್ನು ಹಾಡಿದರು.

ಇದೇ ವೇಳೆ ಗಾಂಧೀಜಿ ಕುರಿತು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ ಕೃಷ್ಣ, ಹಿರಿಯ ಗಾಂಧಿವಾದಿಗಳಾದ ಪಾಟೀಲ ಪುಟ್ಟಪ್ಪ, ಚನ್ನಮ್ಮ ಹಳ್ಳಿಕೇರಿ, ಇಂದಿರಾ ಕೃಷ್ಣಪ್ಪ ಮತ್ತಿತರರಿದ್ದರು.



ಗಾಂಧಿ ಭವನದಲ್ಲಿ ನಡೆದ ಸರ್ವೋದಯ ದಿನಾಚರಣೆ ವೇಳೆ ಹಿರಿಯ ಗಾಂಧಿವಾದಿಗಳನ್ನು ಸನ್ಮಾನಿಸಲಾಯಿತು. ಹಿರಿಯ ಗಾಂಧಿವಾದಿ ಪಾಟೀಲ ಪುಟ್ಟಪ್ಪ, ಚನ್ನಮ್ಮ ಹಳ್ಳಿಕೇರಿ, ಶಾಂತಿವ್ರತಾನಂದ ಸ್ವಾಮೀಜಿ, ನಾಮದೇವ ಶೆಣೈ , ವೂಡೇ ಪಿ .ಕೃಷ್ಣ ಇದ್ದರು.

ಸಂಜೆವಾಣಿ
ಗುರುವಾರ, 30 ಜನವರಿ 2020



ನಗರದ ಗಾಂಧಿ ಭವನದಲ್ಲಿಂದು ನಡೆದ ಸರ್ವೋದಯ ದಿನಾಚರಣೆ ಬಾ – ಬಾಪು 150ನೇ ಜನ್ಮ ವರ್ಷಾಚರಣೆ ಕಾರ್ಯಕ್ರಮದಲ್ಲಿ ಡಾ. ಎನ್. ಜಗದೀಶ್ ಕೊಪ್ಪ, ಶಂಕರ ಉತ್ತೂರ, ನಾಡೋಜ ಪಾಟೀಲ ಪುಟ್ಟಪ್ಪ, ಚನ್ನಮ್ಮಹಳ್ಳಿಕೇರಿ ಮತ್ತಿತರರನ್ನು ಸನ್ಮಾನಿಸಲಾಯಿತು. ಕೆ.ಗಾಂ.ಸ್ಮಾ. ನಿಧಿ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ನಾಮದೇವ ಶೆಣೈ, ಮತ್ತಿತರರು ಇದ್ದಾರೆ.

ತಂತ್ರಜ್ಞಾನ ಬೌದ್ಧಿಕ ಶಕ್ತಿ ಕುಸಿತ

ಬೆಂಗಳೂರು, ಜ. 30– ಯುವ ಭಾರತೀಯರು 5 ಜಿ ತಂತ್ರಜ್ಞಾನ ಮೊರೆ ಹೋಗಿದ್ದರಿಂದ ಮಾನಸಿಕ ಹಾಗೂ ಬೌದ್ಧಿಕ ಶಕ್ತಿ ಕುಸಿಯುತ್ತಿದೆ ಎಂದು ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿ ವ್ರತಾನಂದ ಅವರು ವಿಷಾದ ವ್ಯಕ್ತಪಡಿಸಿದರು.

ಗಾಂಧಿಭವನದಲ್ಲಿ ಸರ್ವೋದಯ ದಿನಾಚರಣೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಗಾಂಧೀಜಿಯವರ ತತ್ವ ಆದರ್ಶಗಳನ್ನು ಬಳಸಿಕೊಂಡು ಸಾರ್ಥಕ ಜೀವನವನ್ನು ಕಂಡುಕೊಳ್ಳಬೇಕು ಎಂದು ಅವರು ಹೇಳಿದರು.

ಮಹಾತ್ಮಗಾಂಧೀಜಿಯವರು ತುಂಡು ಬಟ್ಟೆಯನ್ನು ಧರಿಸಿ, ರಾಷ್ಟ್ರಾದ್ಯಂತ ಅಲೆದಾಡಿ, ಯುವಕರಲ್ಲಿ ಸಾಮಾಜಿಕ ಸಾಮರಸ್ಯವನ್ನು ಉಂಟು ಮಾಡಿದ್ದರು ಎಂದು ಹೇಳಿದರು.

ಮಹಾತ್ಮಗಾಂಧೀಜಿಯವರ ತತ್ವಾದರ್ಶಗಳು ಮೂರು ಸಂಪುಟಗಳಲ್ಲಿ ಪ್ರಕಟವಾಗಿದ್ದು, ಯುವಕರು ಇದನ್ನು ಓದಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಾರ್ಥಕ ಜೀವನ ಎಂದು ಹೇಳಿದರು.


ಸಮಾರಂಭದಲ್ಲಿ ಭಾಗವಹಿಸಿದ್ದ ನಾಡೋಜ ಪಾಟೀಲ ಪುಟ್ಟಪ್ಪ ಅವರು ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿದರು. ತಮಗೆ ಗಂಟಲು ಸರಿ ಇಲ್ಲದಿದ್ದರಿಂದ ಮಾತನಾಡಲು ಆಗುವುದಿಲ್ಲ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತ್ಯ ಡಾ. ಜಗದೀಶ್ ಕೊಪ್ಪ, ಮತ್ತಿತ್ತರರು ಇದ್ದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗಾಂಧಿ ಭವನದಲ್ಲಿಂದು ಹಮ್ಮಿಕೊಂಡಿದ್ದ ಬಾ ಬಾಪು 150ನೆ ಜನ್ಮ ವರ್ಷಾಚರಣೆ , ಸರ್ವೋದಯ ದಿನ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರ ಹಾಗೂ ಗಾಂಧಿ ಚಿಂತಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ನಾಡೋಜ ಪಾಟೀಲ ಪುಟ್ಟಪ್ಪ, ಚನ್ನಮ್ಮ ಹಳ್ಳಿ ಕೇರಿ, ಶಂಕರ ಹುತ್ತೂರ,ಡಾ.ಎನ್.ಜಗದೀಶ್ ಕೊಪ್ಪ, ನಾಮದೇವ ಶೆಣೈ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಶಾಂತಿವ್ರತಾನಂದ ಸ್ವಾಮೀಜಿ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೆ ಪಿ.ಕೃಷ್ಣ, ಡಾ.ರಾಮಲಿಂಗೇಶ್ವರ, ವಿ.ಎನ್.ತಿಪ್ಪನಗೌಡ ಮತ್ತಿತರರು ಹಾಜರಿದ್ದರು.

ಪ್ರಜಾವಾಣಿ
ಬುಧವಾರ • ಜನವರಿ 30, 2020



ಶೇಷಾದ್ರಿಪುರ ಶಿಕ್ಷಣಸಂಸ್ಥೆಯ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪಿ.ನಾರಾಯಣಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶೇಷಾದ್ರಿಪುರ ಶಿಕ್ಷಣಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಪ್ರೊ.ಪಿ.ಕೃಷ್ಣ ಇದ್ದರು

ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಸ್ನೇಹ ಸಮ್ಮಿಲನ ಸಮಾರಂಭ

ಪ್ರಜಾವಾಣಿ ವಾರ್ತೆ


ಯಲಹಂಕ: 'ಮಕ್ಕಳಿಗೆ ಲೌಕಿಕ ಶಿಕ್ಷಣ ನೀಡಿದರೆ ಸಾಲದು. ಇದರ ಜೊತೆಗೆ ಆಧ್ಯಾತ್ಮಿಕ, ನೈತಿಕ ಹಾಗೂ ಮೌಲ್ಯಯುತ ಶಿಕ್ಷಣ ನೀಡಬೇಕಾದ ಹೊಣೆಗಾರಿಕೆ ಶಿಕ್ಷಕರ ಮೇಲಿದೆ' ಎಂದು ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಹೇಳಿದರು.

ಶೇಷಾದ್ರಿಪುರ ಶಿಕ್ಷಣಸಂಸ್ಥೆಯ ಅಂಗಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಹಿರಿಯರಿಗೆ ಸೇವಾ ಪ್ರಶಸ್ತಿ ಪ್ರದಾನ ಹಾಗೂ ಸ್ನೇಹ ಸಮ್ಮಿಲನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸರ್ವೋದಯ ಸಂಘಟನೆಯ ಚನ್ನಮ್ಮ ಹಳ್ಳಿಕೇರಿ ಮಾತನಾಡಿದರು.

ಉದಯವಾಣಿ


ಬುಧವಾರ, ಜನವರಿ 29, 2020



ಶೇಷಾದ್ರಿಪುರಂ ಕಾಲೇಜಿನಲ್ಲಿ ಆಚರಿಸಿದ 71ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಮಾಜಿ ಸಚಿವೆ ಬಿ.ಟಿ. ಲಲಿತನಾಯಕ್ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಇದ್ದರು.

ಪ್ರಜಾಪ್ರಗತಿ

ವಿದ್ಯಾರ್ಥಿಗಳು ಮೌಲಿಕ-ಆಧ್ಯಾತ್ಮಿಕ ಶಿಕ್ಷಣಕ್ಕೆ ಒತ್ತು ನೀಡಬೇಕು



ತುರುವೇಕೆರೆ

ಇಲ್ಲಿಗೆ ಸಮೀಪದ ಬದರಿಕಾಶ್ರಮದಲ್ಲಿ 2 ದಿನಗಳ ಯುವಜನ ಜಾಗೃತಿ ಸಮಾವೇಶ ನಡೆಯಿತು.

ಸಮಾರಂಭದ ದಿವ್ಯ ಸಾನಿಧ್ಯವನ್ನು ಸಂಸ್ಥಾಪಕ ಅಧ್ಯಕ್ಷರಾದ ಸ್ವಾಮಿ ಓಂಕಾರಾನಂದ ಮಹಾರಾಜ್ ಅಧ್ಯಕ್ಷತೆ ವಹಿಸಿದ್ದು, ಮೌಲಿಕ, ಆಧ್ಯಾತ್ಮಿಕ ಶಿಕ್ಷಣಕ್ಕೆ ಒತ್ತುಕೊಡಿ ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು.

ಸಮಾರಂಭಕ್ಕೆ ಆಗಮಿಸಿದ್ದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ|| ವೂಡೆ ಪಿ.ಕೃಷ್ಣ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಶಿಕ್ಷಣದಿಂದ ಮಾತ್ರವೇ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ. ಸ್ವಾಮಿ ಜಗದಾತ್ಮಾನಂದರು ಬರೆದಿರುವ ಬದುಕಲು ಕಲಿಯಿರಿ ಪುಸ್ತಕ ಓದಿ, ಎಳೆಯ ವಯಸ್ಸಿನಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಓದಿ ತಿಳಿದುಕೊಂಡು ಅವರ ಆದರ್ಶ, ಮಾರ್ಗದರ್ಶನ, ಚಿಂತನೆಗಳನ್ನು ಅನುಸರಿಸಿ, ಕಾರ್ಯರೂಪಕ್ಕೆ ತರಲು ಯತ್ನಿಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ಇತ್ತರು.

ಭವತಾರಿಣಿ ಆಶ್ರಮದ ಮಾತಾಜಿ ವಿವೇಕಮಯಿ ಆಗಮಿಸಿದ್ದು, ಶಿಸ್ತು, ಸಾಧನೆ, ಏಕಾಗ್ರತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ, ಆದರ್ಶಗುಣ, ತ್ಯಾಗ, ಭಕ್ತಿ, ಆತ್ಮಬಲವನ್ನು ವೃದ್ಧಿಸಿಕೊಳ್ಳಿ, ತೃಪ್ತಿಯೇ ಜೀವನ, ಶಕ್ತಿ ಸ್ಫೂರ್ತಿಯ ಚಿಲುಮೆ, ಶಕ್ತಿ ಸಾಮರ್ಥ್ಯ ಹೊರಬರಲು ಕ್ರಮಬದ್ಧ ತರಬೇತಿ ಬೇಕು. ಜ್ಞಾನವನ್ನು ವೃದ್ಧಿಸಿಕೊಳ್ಳಲು ಬರುವ ಸಣ್ಣ ಅವಕಾಶವನ್ನು ಬಿಡಬಾರದು. ಸೋಮಾರಿತನ ಬಿಡಿ, ಕ್ರಿಯಾಶೀಲತೆ ಬೆಳೆಸಿಕೊಳ್ಳಿ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.


ವಿಶೇಷ ಅತಿಥಿಗಳಾಗಿದ್ದ ಐ.ಎ.ಎಸ್ ಅಧಿಕಾರಿ ಶ್ರೀಎಂ.ಕೆ ಶಂಕರಲಿಂಗೇಗೌಡ ದೇಶ ಯುವಕರ ಕೈಯಲ್ಲಿದೆ. ವಿವೇಕಾನಂದರು ಅವರ ಮೌಲ್ಯಗಳಿಂದ ಇಂದಿಗೂ ಪ್ರಸ್ತುತರಾಗಿದ್ದಾರೆ. ಉತ್ತಮ ಚಿಂತನೆಗಳನ್ನು ಇರಿಸಿಕೊಳ್ಳಿ, ಮಹಾನುಭಾವರ ಬಗ್ಗೆ ಅರಿವು ಮೂಡಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ನಡೆಯಬೇಕು. ಭಯ ಬಿಡಿ, ನಿಮ್ಮ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸಿಕೊಳ್ಳಿ ಎಂದು ಸಲಹೆ ಇತ್ತರು.

ಎರಡನೇ ದಿನದ ಸಮಾರೋಪ ಸಮಾರಂಭದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಮುಖ್ಯಸ್ಥರು ಸ್ವಾಮಿ ಮುಕ್ತಿಯಾನಂದಜಿ ಮಹಾರಾಜ್ ವಿದ್ಯಾರ್ಥಿಗಳಿಗೆ ಆಶೀರ್ವಚನ ನೀಡಿದರು.

ಸಮಾರಂಭದಲ್ಲಿ ವಿಜಯ ಟೀಚರ್ಸ್ ಕಾಲೇಜಿನ ಮುಖ್ಯಸ್ಥ ರುಡಾ. ಡಾ.ವಿಜಯಕುಮಾರಿ, ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ಶಿವರಾಜು ಹಾಜರಿದ್ದರು. ಕಾರ್ಯಕ್ರಮದಲ್ಲಿ ಸುಮಾರು 900 ರಿಂದ 1000 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ 200 ವಿದ್ಯಾರ್ಥಿಗಳು, ಬದರಿಕಾಶ್ರಮ ವಿದ್ಯಾ ಸಂಸ್ಥೆಯ 250 ವಿದ್ಯಾರ್ಥಿಗಳು ಹಾಗೂ ತುರುವೇಕೆರೆ ತಾಲ್ಲೂಕಿನ ವಿವಿಧ ಶಾಲೆಯ ವಿದ್ಯಾರ್ಥಿಗಳು ಮತ್ತು ತಿಪಟೂರು, ನೊಣವಿನಕೆರೆ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಉದಯವಾಣಿ ಸೋಮವಾರ, ಜನವರಿ 13, 2020

ಅಹಿಂಸಾತ್ಮಕ ಪ್ರತಿಭಟನೆ ಮಹಾತ್ಮ ಗಾಂಧೀಜಿ ತತ್ವ



ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮ ಉದ್ಘಾಟನೆ ವೇಳೆ ಬೆಂಗಳೂರು ವಿವಿ ಕುಲಪತಿ ಪ್ರೊ.ಕೆ.ಆರ್.ವೇಣುಗೋಪಾಲ್, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ವೂಡೆ ಪಿ. ಕೃಷ್ಣ, ಡಾ.ಗೀತಾ ರಾಮಾನುಜಂ ಇದ್ದರು.

ಕೆಂಗೇರಿ: ಪ್ರತಿಭಟನೆ ಅಹಿಂಸೆಯಿಂದ ಕೂಡಿರಬೇಕು ಎಂಬುದು ಮಹಾತ್ಮ ಗಾಂಧೀಜಿಯವರ ತತ್ವ. ಆದರೆ, ಇಂದು ಅಹಿಂಸಾತ್ಮಕ ಪ್ರತಿಭಟನೆಗಳು ಹೆಚ್ಚಾಗಿವೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್.ವೇಣುಗೋಪಾಲ್ ವಿಷಾದಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಜಿ.ಆರ್ ಕಾಲೇಜು ಮತ್ತು ಶೇಷಾದ್ರಿಪುರಂ ಕಾಲೇಜು ಸಹಭಾಗಿತ್ವದಲ್ಲಿ ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿಆಯೋಜಿಸಿದ್ದಗಾಂಧೀಜಿಯವರ 150ನೇ ಜನ್ಮದಿನಾಚರಣೆ ಮತ್ತು ಗಾಂಧಿವಾದಿ ಡಾ.ಎಚ್.ನರಸಿಂಹಯ್ಯ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿಮಾತನಾಡಿದರು.

ಗಾಂಧೀಜಿ ಶಾಂತಿ ಮತ್ತು ಅಹಿಂಸಾ ಮಾರ್ಗದ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಆದರೆ ಇಂಬು ಶಿಕ್ಷಣ ಸಂಸ್ಥೆಗಳು ಸಹ ತಮ್ಮ ಬೇಡಿಕೆಗಳ ಈಡೇರಿಕೆಗೆ ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿರುವುದು ವಿಷಾದನೀಯ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಮಾತನಾಡಿ, ಸ್ವಾತಂತ್ರ ಸಂಗ್ರಾಮ ಗಾಂಧೀಜಿಯವರ ಬದುಕಿನ ಒಂದು ಭಾಗವಾಗಿತ್ತು. ಅವರು ಅಹಿಂಸಾ ಸಮಾಜದ ನಿರ್ಮಾಣ ಬಯಸಿದ್ದರು. ಅಲ್ಲಿ ಎಲ್ಲ ವರ್ಗದ ಜನ ನೆಮ್ಮದಿಯಿಂದ ಸಹಬಾಳ್ವೆ ನಡೆಸಬೇಕೆಂಬುದು ಅವರ ಕನಸಾಗಿತ್ತು ಎಂದರು.

ಜಿ.ಆರ್ ಶಿಕ್ಷಣ ಸಂಸ್ಥೆ ಸಂಸ್ಥಾಪಕ ನಿರ್ದೇಶಕರಾದ ಡಾ.ಗೀತಾ ರಾಮಾನುಜಂ, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ದಲಿತ ಕವಿ ಸಿದ್ದಲಿಂಗಯ್ಯ, ಸಾಹಿತಿ ಶೂದ್ರ ಶ್ರೀನಿವಾಸ್, ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲರಾದ ಜಯರಾಮ್, ಮಂಜುನಾಥ್, ಎಂ.ಎಸ್.ನಟರಾಜು ಇತರರಿದ್ದರು.

ಹೊಸ ದಿಗಂತ

ಮಂಗಳವಾರ, 7 ಜನವರಿ 2020

ರಕ್ತ ಕೊರತೆಯ ನ್ಯೂನ್ಯತೆ ಹೋಗಲಾಡಿಸಬೇಕು



ಬೆಂಗಳೂರು: ರಕ್ತದಾನದಲ್ಲಿ ವಿಳಂಬ ಮಾಡದೆ ರಕ್ತದ ಕೊರತೆಯ ನ್ಯೂನ್ಯತೆ ಹೋಗಲಾಡಿಸಬೇಕು ಎಂದು ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಸಹಯೋಗದೊಂದಿಗೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಆಯೋಜಿಸಿದ್ದ ಯೂತ್ ರೆಡ್‌ಕ್ರಾಸ್ ನೋಡಲ್ ಅಧಿಕಾರಿಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು,ರಕ್ತದಾನ ಶ್ರೇಷ್ಠದಾನ, ಎಲ್ಲರಲ್ಲೂ ರಕ್ತದಾನ ಮಾಡುವಂತೆ ಪ್ರೇರೆಪಿಸುವ ರೆಡ್ ಕ್ರಾಸ್ ಸಂಸ್ಥೆ, ರಕ್ತದಾನ ಶಿಬಿರಗಳು ಅವಶ್ಯಕತೆ ಇರುವವರಿಗೆ ಬಹಳ ಉಪಕಾರಿ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ.ಪಿ.ಕೃಷ್ಣ ಮಾತನಾಡಿ, ಸರ್ಕಾರ ರೆಡ್ ಕ್ರಾಸ್‌ಗೆ ಬೆಂಬಲ ನೀಡಿದರೆ ಸಾಲದು, ಅನುದಾನ ನೀಡಿ ಉತ್ತಮ ಸೇವೆ ಸಲ್ಲಿಸಲು ಅನುಕೂಲ ಮಾಡಿಕೊಡಬೇಕು. ರೆಡ್ ಕ್ರಾಸ್ ಚಿಹ್ನೆ ಯನ್ನು ಆಸ್ಪತ್ರೆಗಳಲ್ಲಿ, ಅಂಬ್ಯುಲೆನ್ ಗಳಲ್ಲಿ ಹಾಗೂ ಮೆಡಿಕಲ್ ಶಾಪ್‌ಗಳಲ್ಲಿ ಬಳಸದಿರುವುದು ಒಳ್ಳೆಯ ಬೆಳವಣಿಗೆ ಎಂದರು.


ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷ ನಾಗಣ್ಣ,ಯೂತ್ ರೆಡ್‌ಕ್ರಾಸ್ ನಿರ್ದೇಶಕ ನಾಗಶೇಖರ್, ಉಪಾಧ್ಯಕ್ಷ ಕುಮಾರ್, ಸಂಯೋಜಕ ಡಾ.ಎನ್.ಸತೀಶಗೌಡ ಇನ್ನಿತರರು ಉಪಸ್ಥಿತರಿದ್ದರು.

ಮಂಗಳವಾರ, 7, ಜನವರಿ, 2020



ಎನ್‌ಎಸ್‌ಎಸ್ ಭವನದಲ್ಲಿ ಆಯೋಜಿಸಿದ್ದ ಯೂತ್ ರೆಡ್‌ಕ್ರಾಸ್ ನೋಡಲ್ ಅಧಿಕಾರಿಗಳಿಗೆ ಕಾರ್ಯಾಗಾರ ಕಾರ್ಯಕ್ರಮವನ್ನು ಕುಲಪತಿ ಕೆ.ಆರ್.ವೇಣುಗೋಪಾಲ್ ಉದ್ಘಾಟಿಸಿದರು. ಈ ವೇಳೆ ಗಾಂಧಿಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಮತ್ತಿತರರಿದ್ದರು.


ಬುಧವಾರ 1 ಜನವರಿ 2020
1 JANUARY 2020



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಸ್ವತಂತ್ರ ಪಿಯು ಕಾಲೇಜಿನ ವಾರ್ಷಿಕೋತ್ಸವದಲ್ಲಿ ಮಾಜಿ ಲೋಕಾಯುಕ್ತ ನ್ಯಾ.ಎನ್. ಸಂತೋಷ್ ಹೆಗ್ಡೆ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ, ಕೆ. ಕೃಷ್ಣಸ್ವಾಮಿ, ಡಬ್ಲ್ಯು.ಡಿ. ಅಶೋಕ್, ಪ್ರಾಂಶುಪಾಲ ಡಾ.ಆರ್. ಮಂಜುನಾಥ್ ಮತ್ತಿತರರಿದ್ದರು.

ಟ್ರಂಪ್ ಮುನ್ನಡೆ: ಅಮೆರಿಕದ ಅಧ್ಯಕ್ಷ ಗಾದಿ ಯಾರಿಗೆ..?

[illegible]



[illegible]

ನ್ಯಾಷನಲ್ ಮೀಡಿಯಾ ಅವಾರ್ಡ್-2020

ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಆಹ್ವಾನ

[illegible] 2020 [illegible] "National Media Award" [illegible] 110 001. [illegible] E media.election.eci@gmail.com [illegible] 011-23052133 [illegible]

Printed by : B.K.PRASANNA, Published by : B.K.PRASANNA Edited By: B.K.PRASANNA, Owned by : B.K.PRASANNA
Printed at: "VEE KAY PROCESS", No. 390/25, 1st Floor, 'Ooliga Complex', Opp. Asha Sweets, Sampige Road, Malleswaram, BANGALORE - 560 003.
Published at : No. 35, Kodigehalli, Sahakaranagar PO, BANGALORE - 560 092. Editor B.K PRASANNA Email: varthajala@gmail.com M.94481 19247, 94813 09247



ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ, ಹಿರಿಯ ಶಿಕ್ಷಣ ತಜ್ಞ, ಕೇಂಬ್ರಿಡ್ಜ್ ಶಿಕ್ಷಣ ಸಂಸ್ಥೆಯ ಗೌ॥ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣರವರು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 18ನೇ ನುಡಿಹಬ್ಬದಲ್ಲಿ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ರಾಷ್ಟ್ರೀಯ ಪ್ರಶಸ್ತಿ ಸೇರಿದಂತೆ ಅನೇಕ ಗೌರವ ಪುರಸ್ಕಾರ ಪುರಸ್ಕೃತರಾದ ಡಾ.ವೂಡೇ ಪಿ. ಕೃಷ್ಣ ಈ ನಾಡು ಕಂಡ ಅಪರೂಪದ ವ್ಯಕ್ತಿ. ಶಿಕ್ಷಣ ಮತ್ತು ಸಾರ್ವಜನಿಕ ಸಂಪರ್ಕ ಇರುವ ವ್ಯಕ್ತಿಗೆ ಇವರ ಬದುಕು-ಬರಹ ಸಾಧನೆಗಳನ್ನು ಒಳಗೊಂಡ ಸಾಕ್ಷ್ಯಚಿತ್ರ ರೂಪಿಸಿದೆ. ನ.10ರಂದು ಹಂಪಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯುವ ಘಟಿಕೋತ್ಸವದಲ್ಲಿ ವಿವಿ ಕುಲಾಧಿಪತಿಗಳಾದ ರಾಜ್ಯಪಾಲ ವಾಜುಭಾಯ್ ವಾಲಾರವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಅವರ ನಾಡು ಚಿಂತನ ಪತ್ರಿಕೆಯ ಸಂಪಾದಕ ಜಂಗೆ ದೋಣ್ಣೆ ಅಭಿನಂದಿಸಿದರು. ಪ್ರಿಯಾಂಕ ಸೇವ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ದೊರೆಯಲಿ ಎಂದು ಅಭಿನಂದನ ಸಲ್ಲಿಸಿದ ಜಂಗೆ ದೋಣ್ಣೆ ಹಿರಿಯರು ದೊಡ್ಡದಲ್ಲಿ ಪಿಡಾಂಪ ಪ್ರೊ. ಪ್ರಕಾಶ್ ಲಿಂಗಪ್ಪ ಇದ್ದಾರೆ.